ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 22 ಶನಿವಾರ 2023

ಸಂಪುಟ: 44 | ಸಂಚಿಕೆ: 7 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ದ್ವಿತೀಯ ಪಿಯು ದಾಖಲೆಯ ಶೇ.74.67 ಫಲಿತಾಂಶ

■ ದಕ್ಷಿಣ ಕನ್ನಡ, ಉಡುಪಿ, ಕೊಡಗು ಕ್ರಮವಾಗಿ ಮೊದಲ ಮೂರು ಸ್ಥಾನ; ಯಾದಗಿರಿ ಕೊನೆ ಸ್ಥಾನ
■ ಬಾಲಕಿಯರೇ ಮೇಲುಗೈ; ಅದರಲ್ಲೂ ಗ್ರಾಮೀಣರೇ ಮುಂದೆ... ಮುಂದೆ...
■ ವಿಜ್ಞಾನದಲ್ಲಿ ಕೋಲಾರದ ಕೌಶಿಕ್, ಬೆಂಗಳೂರಿನ ಸುರಭಿ; ಕಲಾ ವಿಭಾಗದಲ್ಲಿ ಬೆಂಗಳೂರಿನ ತಬಸ್ಸುಮ್ ಶೇಖ್; ವಾಣಿಜ್ಯ ವಿಭಾಗದಲ್ಲಿ ಬೆಂಗಳೂರಿನ ಅನನ್ಯ ರಾಜ್ಯಕ್ಕೆ ಪ್ರಥಮ


ಎಸ್.ಕೌಶಿಕ್


ಸುರಭಿ


ಅನನ್ಯ ಕೆ.ಎ.


ತಬಸ್ಸುಮ್ ಶೇಖ್

ಬೆಂಗಳೂರು, ಏ.21(ಕೆಎಂಶಿ)– ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟವಾಗಿದ್ದು, ಇದೇ ಮೊದಲ ಬಾರಿಗೆ ಶೇ.74.67 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಪರೀಕ್ಷಾ ಪದ್ಧತಿಯಲ್ಲಿ ಕೆಲ ಬದಲಾವಣೆ ಮಾಡಿದ ಕಾರಣದಿಂದ ದಾಖಲೆ ಮಟ್ಟದಲ್ಲಿ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಮುಂದಿನ ವ್ಯಾಸಂಗಕ್ಕೆ ಅವಕಾಶ ಪಡೆದುಕೊಂಡಿದ್ದಾರೆ. ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಮಂದಿ ಅನುತ್ತೀರ್ಣರಾಗುವುದನ್ನು ತಪ್ಪಿಸಲು ಪರೀಕ್ಷಾ ಬದಲಾವಣೆಯ ಕ್ರಮ ವಿದ್ಯಾರ್ಥಿಗಳಿಗೆ ಸಹಕಾರಿಯಾಗಿದೆ.

ಬದಲಾವಣೆಯಲ್ಲಿ ಎಂದಿನಂತೆ ಬಾಲಕಿಯರೇ ಮೇಲುಗೈ ಸಾಧಿಸುವುದರ ಜೊತೆಗೆ ಗ್ರಾಮೀಣ ವಿದ್ಯಾರ್ಥಿಗಳು ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸುವಲ್ಲೂ ಯಶಸ್ವಿಯಾಗಿದ್ದಾರೆ.

ಒಟ್ಟಾರೆ 702067 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅವರಲ್ಲಿ 524209 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಬಾಲಕರಲ್ಲಿ ಶೇಕಡ 69.05 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರೆ, ವಿದ್ಯಾರ್ಥಿನಿಯರು ಶೇ. 80.25ರಷ್ಟು ಫಲಿತಾಂಶ ಪಡೆದು, ಮೇಲುಗೈ ಸಾಧಿಸಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಕೋಲಾರದ ಶ್ರೀನಿವಾಸಪುರದ ಜ್ಞಾನಗಂಗೋತ್ರಿ ಕಾಲೇಜಿನ ಎಸ್.ಕೌಶಿಕ್ (596) ಹಾಗೂ ಬೆಂಗಳೂರಿನ ಆರ್.ವಿ. ಪಿಯು ಕಾಲೇಜಿನ ಸುರಭಿ (596) ಅಂಕ ಪಡೆದು ಮೊದಲ ಸ್ಥಾನವನ್ನು ● 9ನೇ ಪುಟಕ್ಕೆ

ಮೈಸೂರು ಜಿಲ್ಲೆಗೆ 13ನೇ ಸ್ಥಾನ

● ಶೇ.79.89 ಫಲಿತಾಂಶ ದಾಖಲು ● ಬಿಜಿಎಸ್ ಕಾಲೇಜಿನ ಕಾಮರ್ಸ್ ವಿದ್ಯಾರ್ಥಿನಿ ನಿಖಿತ ರಾಜ್ಯದಲ್ಲಿ 3ನೇ ಸ್ಥಾನ ● ರಾಜ್ಯ ಮಟ್ಟದಲ್ಲಿ ಈ ಬಾರಿ ಸಾಧನೆ ಮೆರೆಯದ ಮೈಸೂರು ವಿದ್ಯಾರ್ಥಿಗಳು

ಮೈಸೂರು, ಏ.21 (ಎಂಟಿವೈ)– ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟವಾಗಿದ್ದು, ಮೈಸೂರು ಜಿಲ್ಲೆಗೆ ಶೇ.79.89 ಫಲಿತಾಂಶ ದಾಖಲಾಗಿ ರಾಜ್ಯದಲ್ಲಿ 13ನೇ ಸ್ಥಾನ ಪ್ರಾಪ್ತಿಯಾಗಿದೆ.

ಮೈಸೂರಿನ ಕುವೆಂಪುನಗರದ ಬಿಜಿಎಸ್ ಬಾಲಕಿಯರ ಪಿಯು ಕಾಲೇಜಿನ ನಿಖಿತಾ ಕಾಮರ್ಸ್ ವಿಭಾಗದಲ್ಲಿ 600ಕ್ಕೆ 595 ಅಂಕ ಪಡೆದು ರಾಜ್ಯಕ್ಕೆ ತೃತೀಯ ಹಾಗೂ ಮೈಸೂರು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದರೆ, ಅದೇ ಕಾಲೇಜಿನ ವಿದ್ಯಾರ್ಥಿನಿ ಜಾಹ್ನವಿ ವಿಜ್ಞಾನ ವಿಭಾಗದಲ್ಲಿ 593 ಅಂಕ ಹಾಗೂ ಮರಿಮಲ್ಲಪ್ಪ ಕಾಲೇಜಿನ ಅನನ್ಯಾ ಎ.ಎಸ್ ಕಲಾ ವಿಭಾಗದಲ್ಲಿ 588 ಅಂಕ ಪಡೆದು ಆಯಾ ವಿಭಾಗದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಜಿಲ್ಲೆ ಹಾಗೂ ಕಾಲೇಜಿಗೆ ಮೊದಲ ಸ್ಥಾನ ಪಡೆದುಕೊಂಡ ವಿದ್ಯಾರ್ಥಿಗಳಿಗೆ ಕಾಲೇಜಿನ ಪ್ರಾಂಶುಪಾಲರು ಹಾಗೂ ಆಡಳಿತ ಮಂಡಳಿ ಅಭಿನಂದಿಸಿದೆ.


ಜಾಹ್ನವಿ

ಸುಧಾರಿಸಿದ ಫಲಿತಾಂಶ: ಮೈಸೂರು ಜಿಲ್ಲೆಯಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ ತೇರ್ಗಡೆ ಯಾದವರ ಸಂಖ್ಯೆಯಲ್ಲಿ ತುಸು ಹೆಚ್ಚಳವಾಗಿದೆ. ಕಳೆದ ವರ್ಷ ಜಿಲ್ಲೆಯ ಫಲಿತಾಂಶ ● 6ನೇ ಪುಟಕ್ಕೆ

ರೈತನ ಮಗಳ ಸಾಧನೆ



ಕಾಮರ್ಸ್ ವಿಭಾಗದಲ್ಲಿ 600ಕ್ಕೆ 595 ಅಂಕ ಪಡೆದು ರಾಜ್ಯದಲ್ಲೇ ಮೂರನೇ ಸ್ಥಾನ ಹಂಚಿಕೊಂಡಿರುವ ಮೈಸೂರಿನ ಕುವೆಂಪುನಗರದ ಬಿಜಿಎಸ್ ಬಾಲಕಿಯರ ಪಿಯು ಕಾಲೇಜಿನ ವಿದ್ಯಾರ್ಥಿನಿ ನಿಖಿತಾ ಪಿ ಮೂಲತಃ ಕೊಳ್ಳೇಗಾಲದ ಮುಡಗುಂಡ ನಿವಾಸಿ ಪರಮೇಶ್ ಹಾಗೂ ಕಾತ್ಯಾಯಿನಿ ದಂಪತಿ ಪುತ್ರಿ, ತಂದೆ ಕೃಷಿಕರಾಗಿದ್ದು, ಮಕ್ಕಳ ಓದಿಗಾಗಿ ಮೈಸೂರಿನ ಜನತಾನಗರದಲ್ಲಿ ವಾಸವಿದ್ದಾರೆ. ಕನ್ನಡ, ಬ್ಯುಸಿನೆಸ್ ಸ್ಟಡೀಸ್, ಅರ್ಥಶಾಸ್ತ್ರ, ಕಂಪ್ಯೂಟರ್ ಸೈನ್ಸ್, ಅಕೌಂಟೆನ್ಸಿಯಲ್ಲಿ 100 ಅಂಕ ಪಡೆದಿದ್ದು, ಇಂಗ್ಲೀಷ್‌ನಲ್ಲಿ 95 ಅಂಕ ಪಡೆದಿದ್ದಾರೆ. ಈ ಕುರಿತು ಮಾತನಾಡಿದ ನಿಖಿತಾ, ನಾನು ಯಾವುದೇ ಟ್ಯೂಷನ್ ಅಥವಾ ಕೋಚಿಂಗ್‌ಗೆ ಹೋಗಿಲ್ಲ. ಕಾಲೇಜಿನಲ್ಲಿ ಹೇಳಿಕೊಟ್ಟದ್ದನ್ನೇ ಮನನ ಮಾಡಿಕೊಳ್ಳುತ್ತಿದ್ದೆ. ಅಲ್ಲದೇ, ಪರೀಕ್ಷೆಗೆ ಪೂರಕವಾದ ಪೂರ್ವ ತಯಾರಿ ಪರೀಕ್ಷೆ ನಡೆಸುತ್ತಿದ್ದರು. ಇದರಿಂದ ಹೆಚ್ಚು ಅಂಕ ಗಳಿಸಲು ಸಾಧ್ಯವಾಯಿತು. ಮುಂದೆ ನಾನು ಬಿ.ಕಾಂ ಮುಗಿಸಿ ಸಿಎ ಮಾಡಬೇಕೆಂಬ ಹಂಬಲವೂ ಇದೆ ಎಂದರು.

ಚಂದ್ರ ದರ್ಶನ: ಮೈಸೂರಲ್ಲಿ ಇಂದು ರಂಜಾನ್ ಆಚರಣೆ



ಮೈಸೂರು, ಏ.21– ಮುಸ್ಲಿಮರ ಪವಿತ್ರ ಹಬ್ಬ ಈದ್ ಉಲ್ ಫಿತರ್ (ರಂಜಾನ್) ಅನ್ನು ಮೈಸೂರಿನಲ್ಲಿ ಶನಿವಾರ ಆಚರಿಸಲಾಗುತ್ತಿದೆ.

ಶುಕ್ರವಾರ ಚಂದ್ರದರ್ಶನವಾಗಿದ್ದರಿಂದ ಒಂದು ತಿಂಗಳ ಉಪವಾಸ ಕೊನೆಗೊಂಡಿದೆ ಎಂದು ಮೈಸೂರು ಜಿಲ್ಲಾ ಮೂನ್ ಸಮಿತಿ ಪದಾಧಿಕಾರಿಗಳು ತಿಳಿಸಿದ್ದಾರೆ. ಸಾಹೇಬ್ ನೇತೃತ್ವದಲ್ಲಿ ಸಯ್ಯಾಜಿರಾವ್ ರಸ್ತೆಯ ಲ್ಲಿರುವ ಕಚೇರಿಯಲ್ಲಿ ಮೈಸೂರು ಜಿಲ್ಲಾ ವಕ್ಫ್ ಸಲಹಾ ಸಮಿತಿ ಸಭೆ ನಡೆಯಿತು. ಮೈಸೂರು ಜಿಲ್ಲೆಯ ವಿವಿಧ ಭಾಗಗಳಿಂದ ಚಂದ್ರದರ್ಶನ ಕುರಿತು ಮಾಹಿತಿ ಪಡೆದ ನಂತರ ಹಾಗೂ ಕೇಂದ್ರ ಚಂದ್ರದರ್ಶನ ಸಮಿತಿಯ ಸಲಹೆಯನ್ನು ಪಡೆದ ನಂತರ ಶನಿವಾರ ರಂಜಾನ್ ಹಬ್ಬ ಆಚರಿಸಲು ನಿರ್ಧರಿಸಲಾಯಿತು. ಮೊಹಮ್ಮದ್ ಅಬ್ದುಲ್ ಸಲಾಮ್, ಹಜರತ್ ಮೌಲಾನಾ ಮೊಹಮ್ಮದ್ ಜಖಾವುಲ್ಲಾ ಸಾಹೇಬ್ ಸಿದ್ಧಿಕಿ, ಹಜರತ್ ಮೌಲಾನಾ ● 6ನೇ ಪುಟಕ್ಕೆ

ಮೈಸೂರು ಜಿಲ್ಲೆಯ 11 ಕ್ಷೇತ್ರದ 22 ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತ

● 172 ಮಂದಿ ಉಮೇದುವಾರಿಕೆ ಊರ್ಜಿತ ● ನಾಮಪತ್ರ ಸಲ್ಲಿಕೆಗೆ ಕಡೇ ದಿನವಾದ ಗುರುವಾರ 194 ಅಭ್ಯರ್ಥಿಗಳು 276 ನಾಮಪತ್ರ ಸಲ್ಲಿಸಿದ್ದರು
● ಸೋಮವಾರ ನಾಮಪತ್ರ ಹಿಂಪಡೆಯಲು ಕಡೇ ದಿನ

ಮೈಸೂರು, ಏ.21(ಎಸ್‌ಬಿಡಿ)– ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಿಂದ 22 ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತಗೊಂಡಿದ್ದು, 172 ಮಂದಿ ಉಮೇದುವಾರಿಕೆ ಕ್ರಮಬದ್ಧವಾಗಿವೆ.

ಒಟ್ಟು 194 ಅಭ್ಯರ್ಥಿಗಳಿಂದ 276 ನಾಮಪತ್ರ ಸಲ್ಲಿಕೆಯಾಗಿದ್ದವು. ಇಂದು ನಡೆದ ನಾಮಪತ್ರ ಪರಿಶೀಲನೆಯಲ್ಲಿ 22 ಅಭ್ಯರ್ಥಿಗಳ 47 ನಾಮ ಪತ್ರಗಳು ತಿರಸ್ಕೃತಗೊಂಡಿವೆ. ಇನ್ನು ವರುಣ ವಿಧಾನಸಭಾ ಕ್ಷೇತ್ರದ 25 ಅಭ್ಯರ್ಥಿಗಳು, ನರಸಿಂಹ ರಾಜ 21, ಕೃಷ್ಣರಾಜ 18, ಚಾಮರಾಜ 16, ಚಾಮುಂಡೇಶ್ವರಿ ಹಾಗೂ ತಿ.ನರಸೀಪುರ ತಲಾ 15, ಹುಣಸೂರು 14, ಕೃಷ್ಣರಾಜನಗರ 13, ಹೆಚ್.ಡಿ.ಕೋಟೆ ಹಾಗೂ ನಂಜನಗೂಡು ತಲಾ 12 ಮತ್ತು ಪಿರಿಯಾಪಟ್ಟಣ ಕ್ಷೇತ್ರದ 11 ಅಭ್ಯರ್ಥಿಗಳು ಸಲ್ಲಿಸಿರುವ ನಾಮಪತ್ರಗಳು ಕ್ರಮಬದ್ಧವಾಗಿವೆ.

ಮಂಡ್ಯ	
ಸಲ್ಲಿಕೆ ನಾಮಪತ್ರ	–181
ತಿರಸ್ಕೃತ	–11
ಸ್ವೀಕೃತ	–170
ಕೊಡಗು	
ಸಲ್ಲಿಕೆ ನಾಮಪತ್ರ	–32
ತಿರಸ್ಕೃತ	–2
ಸ್ವೀಕೃತ	–30
ಚಾಮರಾಜನಗರ	
ಸಲ್ಲಿಕೆ ನಾಮಪತ್ರ	–76
ತಿರಸ್ಕೃತ	–7
ಸ್ವೀಕೃತ	–69

ಕ್ರಮಬದ್ಧ ನಾಮಪತ್ರ ಸಲ್ಲಿಸಿದವರು: ವರುಣ ವಿಧಾನಸಭಾ ಕ್ಷೇತ್ರ ಕಾಂಗ್ರೆಸ್‌ನ ಸಿದ್ದರಾಮಯ್ಯ, ಬಿಜೆಪಿಯ ವಿ. ಸೋಮಣ್ಣ, ಜೆಡಿಎಸ್‌ನ ಡಾ. ಎನ್.ಎಲ್. ಭಾರತಿ ಶಂಕರ್, ಬಿಎಸ್‌ಪಿಯ ಎಂ.ಕೃಷ್ಣಮೂರ್ತಿ, ಆಮ್ ಆದ್ಮಿ ಪಕ್ಷದ ರಾಜೇಶ್, ಕನ್ನಡ ದೇಶದ ಪಕ್ಷ ಅರುಣ್ ಲಿಂಗ, ಕರ್ನಾಟಕ ಜನತಾ ಪಕ್ಷದ ಎನ್. ಅಂಬರೀಷ್, ಸಮಾಜವಾದಿ ಜನತಾ ಪಾರ್ಟಿ ಕೆ.ನಾಗೇಶ್ ನಾಯ್ಕ, ಉತ್ತಮ ಪ್ರಜಾಕೀಯ ಪಕ್ಷದ ಆರ್.ಮಹದೇವಸ್ವಾಮಿ, ಕರ್ನಾಟಕ ● 9ನೇ ಪುಟಕ್ಕೆ

ಪ್ರಫುಲ್‌ಗೆ ಶೇ. 97.05 ಅಂಕ



ಮೈಸೂರು, ಏ.21– ಈ ಬಾರಿಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ನಗರದ ಹೆಬ್ಬಾಳಿನಲ್ಲಿರುವ ಸೇಪಿಯೆಂಟ್ ಕಾಲೇಜ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜಿನ ವಿದ್ಯಾರ್ಥಿ ಪ್ರಫುಲ್ ಹೆಚ್.ಎಸ್. ವಾಣಿಜ್ಯ ಶಾಸ್ತ್ರ ವಿಭಾಗದಲ್ಲಿ ಶೇ.97.05 ರಷ್ಟು (585) ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಕನ್ನಡದಲ್ಲಿ 98, ಇಂಗ್ಲಿಷ್–90, ಬಿಸಿನೆಸ್ ಸ್ಟಡೀಸ್‌ನಲ್ಲಿ 100, ಅಕೌಂಟೆನ್ಸಿಯಲ್ಲಿ 100, ಸ್ಟ್ಯಾಟಿಟಿಕ್ಸ್ 99, ಬೇಸಿಕ್ ಮ್ಯಾಕ್ಸ್‌ನಲ್ಲಿ 98 ಅಂಕ ಪಡೆದಿರುವ ಈತ ರಾಜ ರಾಜೇಶ್ವರಿ ನಗರದ ನಿವಾಸಿ ಪುಷ್ಕರಣಿ ಶಾಲೆಯ ಶಿಕ್ಷಕಿ ಅಮಿತಾ .ಕೆ.ಇ ಮತ್ತು ಸುರೇಂದ್ರ ಕುಮಾರ್ ದಂಪತಿ ಪುತ್ರ.

ಎಸ್.ಧನ್ಯಗೆ ಶೇ. 96.16 ಅಂಕ



ಮೈಸೂರು, ಏ. 21– ಮಾರ್ಚ್–2023ರಲ್ಲಿ ನಡೆದ ದ್ವಿತೀಯ ಪಿಯು ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಕುಕ್ಕುಂದೂರ್‌ನ ಗನಿತ್‌ನಗರದಲ್ಲಿರುವ ಕಾರ್ಕಳ ಜ್ಞಾನಸುಧಾ ಪಿಯು ಕಾಲೇಜಿನ ವಿದ್ಯಾರ್ಥಿನಿ ಎಸ್. ಧನ್ಯ 577 (ಶೇ. 96.16) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಇಂಗ್ಲಿಷ್–94, ಸಂಸ್ಕೃತ–99, ಭೌತಶಾಸ್ತ್ರ–96, ರಸಾಯನ ಶಾಸ್ತ್ರ–91, ಗಣಿತ–98 ಹಾಗೂ ಕಂಪ್ಯೂಟರ್ ಸೈನ್ಸ್‌ನಲ್ಲಿ– 99 ಅಂಕ ಗಳಿಸಿದ್ದಾರೆ. ಈಕೆ ಮೈಸೂರಿನ ವಿಜಯನಗರದ 4ನೇ ಹಂತದ ನಿವಾಸಿ, ಆರ್‌ಬಿಐ ನೌಕರರಾದ ಸದಾನಂದ ಹೊಬ್ಳಿದಾರ್ ಹಾಗೂ ಗೋಕುಲಂ 3ನೇ ಹಂತದಲ್ಲಿರುವ ಮೈಸೂರು ವೆಸ್ಟ್ ಲಯನ್ಸ್ ಸೇವಾನಿಕೇತನ್ ಸ್ಕೂಲ್‌ನ ಸಂಗೀತ ಶಿಕ್ಷಕಿ ಭಾಗ್ಯ ಸದಾನಂದ ಅವರ ಪುತ್ರಿ.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ.21– ಮೈಸೂರಿನ ಗೋಕುಲಂ ಮೂರನೇ ಹಂತದ ಕೆ.ಪುಟ್ಟಸ್ವಾಮಿ ಸಂಯೋಜಿತ ಪದವಿಪೂರ್ವ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿ ಎಸ್.ಷಣ್ಮುಖ್ ಮಹಡಿಮನೆ ದ್ವಿತೀಯ ಪಿಯು ಪರೀಕ್ಷೆಯಲ್ಲಿ 545 (ಶೇ.90.83) ಅಂಕಗಳೊಂದಿಗೆ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ. ಈತ ಶೀಗೋಡು ಗ್ರಾಮದ ಎಸ್.ಎನ್.ಶಿವದೇವ ಹಾಗೂ ಉಷಾ ದಂಪತಿ ಪುತ್ರ.

ಗುರುಕುಲ ಪದವಿಪೂರ್ವ ಕಾಲೇಜಿಗೆ ಶೇ.98.83 ರಷ್ಟು ಫಲಿತಾಂಶ


ನಿತೀಶ್


ವಿನಿತ


ವರ್ಷಿತ್ ಕುಮಾರ್


ಪ್ರಜ್ವಲ್


ವಿಶಾಲಾಕ್ಷಿ ಕೋಟಿ

ಮೈಸೂರು, ಏ.21– ಮೈಸೂರಿನ ಕುವೆಂಪುನಗರದ ಎಂಎಎಸ್‌ವಿಎಸ್ ಗುರುಕುಲ ಪದವಿ ಪೂರ್ವ ಕಾಲೇಜು 2022–23 ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.98.83 ರಷ್ಟು ಫಲಿತಾಂಶವನ್ನು ಪಡೆದುಕೊಂಡಿದೆ. ಒಟ್ಟು 257 ವಿದ್ಯಾರ್ಥಿಗಳಲ್ಲಿ 143 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ, 104 ವಿದ್ಯಾರ್ಥಿಗಳು ಪ್ರಥಮ ಹಾಗೂ 6 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಹಾಗೂ ಓರ್ವ ವಿದ್ಯಾರ್ಥಿ ತೃತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ನಿತೀಶ್ ಎ.ಪಿ. 584, ವಿನಿತ.ಎಂ 584, ವರ್ಷಿತ್ ಕುಮಾರ್.ಕೆ 583, ಪ್ರಜ್ವಲ್ ಎಸ್.ಎನ್. 583, ವಿಶಾಲಾಕ್ಷಿ ಕೋಟಿ ಅವರು 582 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ವಿಷಯವಾರು 100ಕ್ಕೆ 100 ಅಂಕಪಡೆದ ವಿದ್ಯಾರ್ಥಿಗಳ ವಿವರ: ಗಣಿತಶಾಸ್ತ್ರ–6, ಗಣಕ ವಿಜ್ಞಾನ–3, ರಸಾಯನಶಾಸ್ತ್ರ –1, ಜೀವಶಾಸ್ತ್ರ–1, ವಿದ್ಯುನ್ಮಾನ ಶಾಸ್ತ್ರ –2, ಸಂಸ್ಕೃತ–3, ಕನ್ನಡ –1 ಈ ಎಲ್ಲಾ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಕಾಲೇಜಿನ ನಿರ್ದೇಶಕರು, ಪ್ರಾಂಶುಪಾಲರು ಹಾಗೂ ಬೋಧಕ–ಬೋಧಕೇತರ ವೃಂದದವರು ಅಭಿನಂದಿಸಿದ್ದಾರೆ.

ಶಾರದಾ ವಿದ್ಯಾಮಂದಿರ ವಿದ್ಯಾರ್ಥಿಗಳ ಸಾಧನೆ


ಹರ್ಷಿತಾ ಶ್ರೀ


ಐಶ್ವರ್ಯ


ನಿಧಿ


ಧಾರ್ತಿ


ಹರ್ಷಿತಾ ಕೆ.

ಮೈಸೂರು, ಏ.21–ಮೈಸೂರಿನ ಶಾರದಾ ವಿದ್ಯಾಮಂದಿರದ ಶ್ರೀ ಜಯ ಚಾಮರಾಜೇಂದ್ರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯು ಫಲಿತಾಂಶದಲ್ಲಿ ಸಾಧನೆ ಮೆರೆದಿದ್ದಾರೆ. ಕಾಲೇಜಿನ 117 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಹಾಗೂ 123 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಎಸ್.ಕೆ. ಹರ್ಷಿತ(590), ವಿಜ್ಞಾನ ವಿಭಾಗದ ಕೆ.ಧಾತ್ರಿ(586) ಅಂಕ ಗಳಿಸಿದ್ದಾರೆ. ಇನ್ನುಳಿದಂತೆ ವಿಜ್ಞಾನ ವಿಭಾಗದಲ್ಲಿ ಆರ್. ಹರ್ಷಿತ(580), ಎಂ.ಪಿ.ಸ್ಪರ್ಶ(579), ಹೆಚ್.ಎನ್.ಪ್ರಣವ್ ಕಾರ್ತಿಕ್(578), ಎಸ್.ಆಂಟೋ ಸ್ಟೋಬನ್ (577), ಎಸ್.ಸಿದ್ಧಾರ್ಥ್(576), ಎಂ.ಎಸ್.ಅನನ್ಯ(573), ವರ್ಣ ರಿತೇಶ್(572), ಸಯೀದಾ ಮಹೀರಾ ಆಯ್‌ಮನ್(572), ಡಿ.ಜಿ. ದಿಶಾ ಜೈನ್(571), ವಾಣಿಜ್ಯ ವಿಭಾಗದಲ್ಲಿ ಎಲ್.ಐಶ್ವರ್ಯ(584), ನಿಧಿ ಜಿ.ಪ್ರಸಾದ್(581) ಅಂಕಗಳನ್ನು ಗಳಿಸಿದ್ದಾರೆ.

ಏ.23, ಸುಗಮ ಸಂಗೀತ ಗಾಯನ ಕಾರ್ಯಕ್ರಮ

ಮೈಸೂರು,ಏ.21(ಪಿಎಂ)–ನಾದಾಮೃತ ಸಂಗೀತ ವಿದ್ಯಾಲಯದ ವತಿಯಿಂದ ದಿ.ರಾಜು ಅನಂತಸ್ವಾಮಿ ಅವರ 50ನೇ ಜನ್ಮದಿನದ ಪ್ರಯುಕ್ತ ಏ.23ರಂದು 'ರಾಜು ಗಾನ ಲಹರಿ–2023; ರಾಜು 50' ಶೀರ್ಷಿಕೆಯಡಿ ಸುಗಮ ಸಂಗೀತ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವಿದ್ಯಾಲಯದ ಸಂಸ್ಥಾಪಕ ನಿತಿನ್ ರಾಜಾರಾಮ್ ಶಾಸ್ತ್ರಿ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಅಂದು ಸಂಜೆ 5.30ಕ್ಕೆ ಕಾರ್ಯಕ್ರಮ ನಡೆಯಲಿದೆ. ರಾಜು ಅನಂತಸ್ವಾಮಿ ಮತ್ತು ಅವರ ತಂದೆ ಮೈಸೂರು ಅನಂತಸ್ವಾಮಿಯವರು ಸಂಯೋಜಿಸಿರುವ ಸುಗಮ ಸಂಗೀತದ ಗಾಯನ ಸಾದರಪಡಿಸಲಾಗುವುದು. ಸಾರ್ವಜನಿಕರಿಗೆ ಪ್ರವೇಶ ಉಚಿತವಿದೆ ಎಂದರು.

ಆಕಾಶವಾಣಿ ಕಾರ್ಯಕ್ರಮ ವಿಭಾಗದ ಮುಖ್ಯಸ್ಥ ಎಸ್.ಎಸ್.ಉಮೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅರ್ಜುನ್ ಗುರೂಜಿ ಸಾನ್ನಿಧ್ಯ ವಹಿಸಲಿದ್ದಾರೆ. ಇದೇ ವೇಳೆ ಯುವ ಗಾಯಕ ಮಹೇಶ್ ಪ್ರಿಯದರ್ಶನ್ ಅವರಿಗೆ 'ಅನಂತಸ್ವಾಮಿ ಗಾನರತ್ನ' ಪ್ರಶಸ್ತಿ ಹಾಗೂ ತಬಲಾ ಕಲಾವಿದ ವಿನಯ್ ರಂಗಧೋಳ್ ಅವರಿಗೆ 'ರಾಜು ನಾದರತ್ನ' ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು. ವಿದ್ಯಾಲಯದ ಕಾರ್ಯದರ್ಶಿ ಅಮೃತಾ, ಪದಾಧಿಕಾರಿಗಳಾದ ರಾಜ್‌ಭಟ್, ನಂದಿನಿ, ಶಿವಕುಮಾರ್, ಗುರುರಾಜ್ ಗೋಷ್ಠಿಯಲ್ಲಿದ್ದರು.

ಕಾನೂನು ತಜ್ಞ ದಿವಂಗತ ಡಾ.ಸಿ.ಕೆ.ಎನ್. ರಾಜಾ ಅವರ ಪತ್ನಿ ಮೀನಾಕ್ಷಿ ರಾಜಾ ನಿಧನ



ಮೈಸೂರು, ಏ. 21– ಮೈಸೂರಿನ ಕಾನೂನು ತಜ್ಞ ದಿವಂಗತ ಡಾ. ಸಿ.ಕೆ.ಎನ್. ರಾಜಾ ಅವರ ಪತ್ನಿ ಹಾಗೂ ಬರಹಗಾರ್ತಿ ಮೀನಾಕ್ಷಿ ರಾಜಾ(85) ತಮ್ಮ ಲಕ್ಷ್ಮಿಪುರಂ ನಿವಾಸದಲ್ಲಿ ಗುರುವಾರ ಮಧ್ಯಾಹ್ನ ನಿಧನರಾದರು. ಮೀನಾಕ್ಷಿ ರಾಜಾ ಅವರು ಹಲವಾರು ಪುಸ್ತಕಗಳನ್ನು ಬರೆದಿದ್ದು, ಮಕ್ಕಳ ಕೂಟ ಸಂಘಟನೆ ಮೂಲಕ ಮಹಿಳೆಯರು ಮತ್ತು ಮಕ್ಕಳಿಗೆ ಸುಮಾರು ಐದು ದಶಕಗಳಿಂದ ಸಹಾಯ ಮಾಡುತ್ತಾ ಬಂದಿದ್ದರು. ಅಲ್ಲದೆ ಅವರು ಶಾಸ್ತ್ರೀಯ ನೃತ್ಯ ಪ್ರಕಾರಗಳಲ್ಲಿ ತರಬೇತಿಯನ್ನು ಸಹ ನೀಡುತ್ತಿದ್ದರು.

ಡಾ. ಸಿ.ಕೆ.ಎನ್. ರಾಜಾ ಅವರು ಏ. 12, 2023 ರಂದು ಮತ್ತು ಹಿರಿಯ ಪುತ್ರ, ಮಕ್ಕಳ ತಜ್ಞ ಹಾಗೂ ಕುವೆಂಪುನಗರದ ನಿವಾಸಿ ಡಾ. ಆರ್. ಕೇಶವಪ್ರಸಾದ್ (59) ಅವರು ಹೃದಯಾಘಾತದಿಂದ ಅಕ್ಟೋಬರ್ 14, 2018 ರಂದು ನಿಧನರಾಗಿದ್ದರು. ಮೃತರು ಪುತ್ರ ಆರ್. ಶ್ರೀಕಂಠ ಪ್ರಸಾದ್, ಸೊಸೆಯಂದಿರಾದ ಡಾ. ಗಾಯತ್ರಿ ಪ್ರಸಾದ್ ಮತ್ತು ಸಂಧ್ಯಾ, ಮೊಮ್ಮಕ್ಕಳಾದ ಆದಿತ್ಯ ಮತ್ತು ಅವಿನಾಶ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಗುರುವಾರವೇ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಟಿ.ಕೃಷ್ಣಯ್ಯ



ಮೈಸೂರು, ಏ. 21– ಮೈಸೂರಿನ ಆಲನಹಳ್ಳಿ ಬಡಾವಣೆ ನಿವಾಸಿ ಟಿ. ಕೃಷ್ಣಯ್ಯ (94) ಏ. 19ರಂದು ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಓರ್ವ ಪುತ್ರ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಗುರುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಜಾಪ್ರಭುತ್ವ ಹಬ್ಬಕ್ಕೆ ಸಾಂಪ್ರದಾಯಿಕ ಉಡುಗೆಯೊಂದಿಗೆ ಜನ ಜಾಗೃತಿ

ಮತದಾನದ ಪ್ರಮಾಣ ಹೆಚ್ಚಿಸಲು ಸರ್ಕಾರಿ ಅಧಿಕಾರಿಗಳು, ನೌಕರರಿಂದ ಅವಿರತ ಪ್ರಯತ್ನ

ಮೈಸೂರು, ಏ.21(ಆರ್‌ಕೆ)–ಪ್ರಜಾಪ್ರಭುತ್ವದ ಹಬ್ಬದಲ್ಲಿ ಪಾಲ್ಗೊಂಡು ಮೈಸೂರು ಜಿಲ್ಲೆಯಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು ಜಿಲ್ಲಾ ಚುನಾವಣಾಧಿಕಾರಿಗಳು, ಸ್ವೀಪ್ ನೋಡಲ್ ಅಧಿಕಾರಿಗಳು ಹಾಗೂ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದಾರೆ.

ಭಾರತ ಚುನಾವಣಾ ಆಯೋಗ (ECI)ದ ದಿ ಸಿಸ್ಟಮ್ಯಾಟಿಕ್ ವೋಟರ್ಸ್ ಎಜುಕೇಷನ್ ಅಂಡ್ ಎಲೆಕ್ಟೋರಲ್ ಪಾರ್ಟಿಸಿಪೇಷನ್ (SVEEP) ಕಾರ್ಯಕ್ರಮದಡಿ ಜಿಲ್ಲಾ ಸ್ವೀಪ್ ನೋಡಲ್ ಅಧಿಕಾರಿಯಾದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯಿತ್ರಿ ಅವರು ಕಳೆದ 15 ದಿನಗಳಿಂದ ಬೀದಿ ನಾಟಕ, ನೃತ್ಯ, ಜಾಥಾ ಮೂಲಕ ಪ್ರತಿಯೊಬ್ಬರೂ ಮತ ಚಲಾಯಿಸಿ ಪ್ರಜಾಪ್ರಭುತ್ವದ ಉತ್ಸವದಲ್ಲಿ ಭಾಗವಹಿಸಿ ಎಂದು ಮತದಾರರಲ್ಲಿ ಅರಿವು ಮೂಡಿಸುತ್ತಿದ್ದಾರೆ.

ಮೈಸೂರಿನ ಕಲಾಮಂದಿರದ ಆವರಣದಲ್ಲಿ ಇಂದು 300 ಮಂದಿ ಸರ್ಕಾರಿ ನೌಕರರು ಸಾಂಪ್ರದಾಯಿಕ ಉಡುಪು ಧರಿಸಿ ಜನರಲ್ಲಿ ಮತದಾನ ಮಾಡುವಂತೆ ಜಾಗೃತಿ ಮೂಡಿಸಿದರು. ಮಹಿಳೆಯರು ಮೈಸೂರು ಸಿಲ್ಕ್ ಸೀರೆ ಉಟ್ಟರೆ, ಪುರುಷರು ಬಿಳಿ ಶರ್ಟ್, ಶಲ್ಯ, ಪಂಚೆ ಹಾಗೂ ಮೈಸೂರು ಪೇಟ ತೊಟ್ಟು ಪ್ರಜಾಪ್ರಭುತ್ವದ ಸೌಂಧರ್ಯವನ್ನು ಬಿಂಬಿಸಿದರು. ಕೆ.ಎಂ.ಗಾಯಿತ್ರಿ, ಅಡಿಷನಲ್ ಡಿಸಿ ಕವಿತಾ ರಾಜಾರಾಂ, ಎಸ್ಪಿ ಸೀಮಾ ಲಾಟ್ಕರ್, ಜಿಲ್ಲಾ ಮಟ್ಟದ ಅಧಿಕಾರಿಗಳು, ಗ್ರಾಮ ಪಂಚಾಯ್ತಿ ಕಾರ್ಯ ದರ್ಶಿಗಳು, ಅಭಿವೃದ್ಧಿ ಅಧಿಕಾರಿಗಳು, ಸರ್ಕಾರಿ ನೌಕರರು ಇಂದಿನ ಕಾರ್ಯ ಕ್ರಮದಲ್ಲಿ ಪಾಲ್ಗೊಂಡಿದ್ದರು. 'ಸದೃಢ ಭಾರತಕ್ಕಾಗಿ ಮತ ಚಲಾಯಿಸಿ' ಘೋಷಣೆ ಯೊಂದಿಗೆ ಬಣ್ಣ ಬಣ್ಣದ ರಂಗೋಲಿ ಬಿಡಿಸಿ, ಜಾನಪದ ಕಲಾ ತಂಡದೊಂದಿಗೆ ಮತದಾನದ ಅರಿವು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಯಿತು. ನಂತರ ಬಂಬೂ ಬಜಾರ್ ಬಳಿ ತಿಲಕ್‌ನಗರದಲ್ಲಿರುವ ಕಿವುಡ ಮತ್ತು ಮೂಗರ ಶಾಲೆ, ಸಂಕಲ್ಪ ಅಪಾರ್ಟ್‌ಮೆಂಟ್, ಎಸ್‌ಜೆಸಿಇ ಆವರಣದಲ್ಲಿ ಸ್ವೀಪ್ ಸಮಿತಿಯಿಂದ ಅರಿವು ಕಾರ್ಯಕ್ರಮ ನಡೆಸಲಾಯಿತು. ಸಂಜೆ ಮೈಸೂರು ತಾಲೂಕು, ಕೂರ್ಗಳ್ಳಿ ಕೈಗಾರಿಕಾ ಪ್ರದೇಶದ ಶಾಹಿ ಎಕ್ಸ್‌ಪೋರ್ಟ್ ಗಾರ್ಮೆಂಟ್ಸ್‌ನಲ್ಲಿ ನೌಕರರಿಗೆ ಮತದಾನದ ಬಗ್ಗೆ ಅರಿವು ಮೂಡಿಸಿದ ಕೆ.ಎಂ.ಗಾಯಿತ್ರಿ ಹಾಗೂ ಸ್ವೀಪ್ ಸಮಿತಿ ಸದಸ್ಯರು, ಮೈಸೂರಿನ ವಿವಿಧೆಡೆ ಕಾರ್ಯಕ್ರಮ ನೀಡಿದರು.



ಮೈಸೂರು ಜಿಲ್ಲಾ ಪಂಚಾಯತಿ ಸ್ವೀಪ್ ಸಮಿತಿ ವತಿಯಿಂದ ಮೈಸೂರಿನ ಪರಂಪರೆಯನ್ನು ಪ್ರತಿಬಿಂಬಿಸುವ ಸಾಂಪ್ರದಾಯಿಕ ಉಡುಗೆಯಾದ ಮೈಸೂರು ರೇಷ್ಮೆ ಸೀರೆ, ಪಂಚೆ, ಶಲ್ಯ ಹಾಗು ಮೈಸೂರು ಪೇಟಾ ಉಡುಗೆ ಧರಿಸಿ ಮತದಾನದ ಜಾಗೃತಿ ಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ಜಿ.ಪಂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯಾದ ಕೆ.ಎಂ.ಗಾಯತ್ರಿ, ಜಿಲ್ಲಾ ಪೋಲಿಸ್ ಅಧೀಕ್ಷರು ಸೀಮಾ ಲಾಟ್ಕರ್, ಅಪರ ಜಿಲ್ಲಾಧಿಕಾರಿಗಳಾದ ಕವಿತಾ ರಾವ್ ಇದ್ದರು.

ಮಾನವ ಸರಪಳಿ ರಚಿಸಿ ವಿದ್ಯಾರ್ಥಿಗಳಿಂದ ಮತದಾನ ಸಂದೇಶ




ಮೈಸೂರು,ಏ.21– ಕಡ್ಡಾಯವಾಗಿ ಮತದಾನ ಮಾಡಬೇಕೆಂದು ಮಾನವ ಸರಪಳಿ ರಚಿಸುವ ಮೂಲಕ ವಿದ್ಯಾರ್ಥಿಗಳು ಜಾಗೃತಿ ಮೂಡಿಸಿದರು.

ಜಿಲ್ಲಾ ಸ್ವೀಪ್ ಸಮಿತಿ, ತಾಲೂಕು ಪಂಚಾಯತ್ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಕುವೆಂಪುನಗರದ ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ಕಾಲ್ನಡಿಗೆ ಜಾಥಾ ನಡೆಸಿ, ವಿವೇಕಾನಂದ ವೃತ್ತದಲ್ಲಿ ಮಾನವ ಸರಪಳಿ ರಚಿಸುವ ಮೂಲಕ ಮೇ.10 ರಂದು ಕಡ್ಡಾಯವಾಗಿ ಮತದಾನ ಮಾಡಬೇಕೆಂದು ಜಾಗೃತಿ ಮೂಡಿಸಿದರು.

ಈ ವೇಳೆ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ(ಅಭಿವೃದ್ಧಿ) ಡಾ.ಎಂ. ಕೃಷ್ಣರಾಜು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಮಹೇಶ್, ಮೈಸೂರು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಎಚ್.ಡಿ. ಗಿರೀಶ್, ಬಿಇಒ ಕೃಷ್ಣ, ಜಿಪಂ ಸಹಾಯಕ ನಿರ್ದೇಶಕರಾದ ಎಂ.ಎಲ್.ವಿಶ್ವನಾಥ್, ಮೈಸೂರು ತಾಲ್ಲೂಕು ಕಲ್ಯಾಣಾಧಿಕಾರಿ ಎಂ.ಕೆ.ಮೇಘ, ಸತೀಶ್, ನಿಲಯಪಾಲಕರಾದ ತೇಜಸ್ವಿನಿ, ಜಗದೀಶ್ ಕೋರಿ, ರಮ್ಯಾ, ಭಾಗ್ಯಲಕ್ಷ್ಮೀ, ಮಂಜುಳಾ, ನಾಗರಾಜ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ವಿವೇಕ ವಿದ್ಯಾಲಯ ಪಿ.ಯು. ಕಾಲೇಜಿಗೆ ಶೇ.100ರಷ್ಟು ಫಲಿತಾಂಶ



ಮೈಸೂರು, ಏ.21– ಮೈಸೂರಿನ ಶ್ರೀರಾಂಪುರದಲ್ಲಿರುವ ಶ್ರೀ ವಿವೇಕ ವಿದ್ಯಾಲಯ ಪಿ.ಯು. ಕಾಲೇಜು ಪ್ರತಿ ವರ್ಷದಂತೆ ಈ ವರ್ಷವೂ 100% ಅಂಕಗಳೊಂದಿಗೆ ಅತ್ಯುತ್ತಮ ಫಲಿತಾಂಶ ಬಂದಿದ್ದು, ಕಾಲೇಜಿನ ನಿಖಿಲ್ ಎಂ. ಶೇ.97 ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾನೆ.

ಪರೀಕ್ಷೆಗೆ ಹಾಜರಾದ 46 ವಿದ್ಯಾರ್ಥಿಗಳಲ್ಲಿ 22 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ಹಾಗೂ 24 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಅದರಂತೆ ಅನುಕಶ್ರೀ ರವಿ (95%), ಹೇಮಾ ಆರ್ (94%), ಇಶಾ ಆರ್.ಪುರೋಹಿತ್(94%), ಲಲಿತೇಶ್.ಬಿ (93.17%), ನೇಹಾ.ಬಿ.ಎಸ್ (93%), ರಾಕೇಶ್ ಜಿ.ಪ್ರಜಾಪತ್ (93%), ಮನುಪ್ರಸಾದ್ ಹೆಚ್.ಎಸ್. (93%), ಚೇತನ್ ಕುಮಾರ್.ಬಿ.ಎಸ್ (92.17%), ಆದರ್ಶ್ ಶಿಂದೆ(92%), ವೇದಾಂತ್ ಆರ್ಜುನ್.ಆರ್(92%) ಪಡೆದು ತೇರ್ಗಡೆಗೊಂಡಿದ್ದಾರೆ. ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆಗೆ ಆಡಳಿತ ಮಂಡಳಿ ಸದಸ್ಯರು, ಆಡಳಿತಾಧಿಕಾರಿಗಳು, ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗವು ಅಭಿನಂದನೆ ಸಲ್ಲಿಸಿದ್ದಾರೆ.

ಜೆಎಸ್‌ಎಸ್ ವಿವಾಹ ವೇದಿಕೆ: ವಧು–ವರರ ಸಮಾವೇಶಕ್ಕೆ ಉತ್ತಮ ಪ್ರತಿಕ್ರಿಯೆ

ಮೈಸೂರು,ಏ.21–ಜೆಎಸ್‌ಎಸ್ ವಿವಾಹ ವೇದಿಕೆಯಿಂದ ವಧು–ವರರ ಸಮಾವೇಶವನ್ನು ಶ್ರೀ ಶಿವರಾತ್ರಿ ರಾಜೇಂದ್ರ ಸಭಾಂಗಣದಲ್ಲಿ ಏರ್ಪಡಿಸಿತ್ತು. ಸಮಾವೇಶಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ನೋಂದಾಯಿಸಿಕೊಂಡಿರುವ ವಧು–ವರರು ಹಾಗೂ ಅವರ ಪೋಷಕರು ಸಮಾವೇಶದಲ್ಲಿ ಭಾಗವಹಿಸಿ, ಅವರ ಅಭಿಪ್ರಾಯಗಳನ್ನು ಪರಸ್ಪರ ಹಂಚಿಕೊಂಡರು. ವಿವಾಹ ವೇದಿಕೆಯು ಕಳೆದ ಹತ್ತಾರು ವರ್ಷಗಳಿಂದ ವಿವಾಹಪೇಕ್ಷಿಗಳಾದ ವಧು–ವರರ ಮಾಹಿತಿ ಕೇಂದ್ರವನ್ನು ಸಕ್ರಿಯವಾಗಿ ನಡೆಸಿಕೊಂಡು ಬರುತ್ತಿದೆ. ಪ್ರತಿ 2 ತಿಂಗಳಿಗೊಮ್ಮೆ ವಧು–ವರರ ಸಮಾವೇಶವನ್ನು ನಡೆಸಲಾಗುತ್ತಿದೆ. ವಧು–ವರರ ಕುಟುಂಬಗಳ ಪರಸ್ಪರ ಒಪ್ಪಿಗೆಯ ಮೇಲೆ ವಿವಾಹಗಳು ನಡೆಯುತ್ತಿವೆ. ಮುಂದಿನ ಸಮಾವೇಶಗಳಲ್ಲಿ ವಧು–ವರರು ಹಾಗೂ ಪೋಷಕರು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಸದಾವಕಾಶವನ್ನು ಉಪಯೋಗಿಸಿಕೊಳ್ಳಬಹುದಾಗಿದೆ.


ಡಾ.ಪಿ.ಜಿ.ಹಳಕಟ್ಟಿ ಸ್ಮರಣಾರ್ಥ ರಾಷ್ಟ್ರೀಯ ಪ್ರಶಸ್ತಿ ಘೋಷಣೆ



ಬೆಂಗಳೂರು, ಏ. 21– ಡಾ. ಪಿ.ಜಿ. ಹಳಕಟ್ಟಿ ಪ್ರತಿಷ್ಠಾನವು ವಚನ ಪಿತಾಮಹಾ ಡಾ.ಪಿ.ಜಿ.ಹಳಕಟ್ಟಿ ಸ್ಮರಣಾರ್ಥ ಸಾಹಿತ್ಯ, ಶಿಕ್ಷಣ ಮತ್ತು ಲೋಕೋಪಕಾರ ಕ್ಷೇತ್ರಗಳಿಗೆ ವಿಶಿಷ್ಟ ಕೊಡುಗೆ ನೀಡಿರುವವರಿಗೆ ರಾಷ್ಟ್ರೀಯ ಪ್ರಶಸ್ತಿ ಘೋಷಿಸಿದೆ. ಪ್ರತೀ ವರ್ಷ ಈ ಪ್ರಶಸ್ತಿ ನೀಡಲಾಗುತ್ತಿದ್ದು, ಪ್ರಶಸ್ತಿಯು ಪ್ರಶಸ್ತಿ ಪತ್ರ ಹಾಗೂ ಲಕ್ಷ ರೂ. ನಗದು ಬಹುಮಾನ ಒಳಗೊಂಡಿರುತ್ತದೆ. ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಗಳಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಮತ್ತು ಕಸಾಪ ಮಾಜಿ ರಾಜ್ಯಾಧ್ಯಕ್ಷ ಡಾ. ಮನು ಬಳಿಗಾರ್ ಸಮ್ಮುಖದಲ್ಲಿ ಈ ಪ್ರಶಸ್ತಿ ಘೋಷಿಸಲಾಗಿದ್ದು, ಪ್ರಶಸ್ತಿ ಪುರಸ್ಕೃತರನ್ನು ಡಾ. ಮನು ಬಳಿಗಾರ್ ಹಾಗೂ ಡಾ. ಪಿ.ಜಿ. ಹಳಕಟ್ಟಿ ಪ್ರತಿಷ್ಠಾನದ ಸದಸ್ಯರು ಆಯ್ಕೆ ಮಾಡುವರು. ಪ್ರಶಸ್ತಿ ಘೋಷಣೆ ಕಾರ್ಯಕ್ರಮದಲ್ಲಿ ಡಾ. ಪಿ.ಜಿ. ಹಳಕಟ್ಟಿ ಪ್ರತಿಷ್ಠಾನದ ಟ್ರಸ್ಟಿಗಳಾದ ಪವಿತ್ರ ಹಳಕಟ್ಟಿ, ಶೀಲಾ ಹರ ಹಳಕಟ್ಟಿ ಮುಂತಾದವರಿದ್ದರು.

ಡಾ.ಪಿ.ಜಿ.ಹಳಕಟ್ಟಿಯವರ ಬಗ್ಗೆ: ವಚನ ಪಿತಾಮಹಾ ಡಾ.ಪಿ.ಜಿ.ಹಳಕಟ್ಟಿ ಅವರು 1880ರಲ್ಲಿ ಜನಿಸಿದರು. ವಕೀಲರು ಹಾಗೂ ರಾಜಕಾರಣಿಯೂ ಆದ ಅವರು ಶಿವಶರಣರ ಆದರ್ಶಗಳನ್ನು ಪ್ರಸಾರ ಮಾಡಲು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ವೀರಶೈವ ಶಿಕ್ಷಣ ನಿಧಿ, ವೀರಶೈವ ವಿದ್ಯಾವರ್ಧಕ ಸಂಘ, ಸಿದ್ದೇಶ್ವರ ಮಧ್ಯಮ ಶಾಲೆ ಸೇರಿದಂತೆ ಅನೇಕ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದ್ದರು. ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಿದ್ದ ಅವರು, 1910ರ ಅಕ್ಟೋಬರ್ 23ರಂದು ಬಿಎಲ್‌ಡಿಇಎ (ಬಿಜಾಪುರ ಲಿಂಗಾಯತ ಎಜುಕೇಷನ್ ಅಸೋಸಿಯೇಷನ್) ಸ್ಥಾಪಿಸಿದ್ದರು. ಈ ಸಂಸ್ಥೆಯ ಉತ್ತರ ಕರ್ನಾಟಕ ಪ್ರದೇಶದಲ್ಲಿ 100 ವರ್ಷಗಳಿಗಿಂತ ಹೆಚ್ಚಿನ ಪರಂಪರೆಯುಳ್ಳ ಪ್ರಮುಖ ಶಿಕ್ಷಣ ಸಂಸ್ಥೆಯಾಗಿದ್ದು, ಈ ಸಂಸ್ಥೆಯಡಿ 75 ಶಿಕ್ಷಣ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಡಾ. ಪಿ.ಜಿ. ಹಳಕಟ್ಟಿಯವರು 35 ವರ್ಷಗಳ ಕಾಲ ನಿರಂತರವಾಗಿ 'ಶಿವಾನುಭವ' ಪತ್ರಿಕೆಯನ್ನು ನಡೆಸುತ್ತಿದ್ದರು. ಅವರು ಬೊಂಬಾಯಿ ರಾಜ್ಯದ ಶಾಸಕರಾಗಿಯೂ ಸೇವೆ ಸಲ್ಲಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.4.2023 ಶನಿವಾರ, ಮಳೆ ನಕ್ಷತ್ರ: ಅಶ್ವಿನಿ, 14.04.2023 ರಿಂದ 24.04.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಕೃತ್ತಿಕಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು:** ಅಕ್ಕ ಮಹಾದೇವಿ ಮತ್ತು ಬಸವ ಜಯಂತ್ಯೋತ್ಸವ, ಬೆಳಗ್ಗೆ 10ಕ್ಕೆ ರಾಷ್ಟ್ರೀಯ ಬಸವ ದಳ ಸಂಘದವರಿಂದ ಷಟ್‌ಸ್ಥಲ ಧ್ವಜಾರೋಹಣ, ಬೆಳಗ್ಗೆ 10.30ಕ್ಕೆ ಬಸವ ಜಯಂತ್ಯೋತ್ಸವ, ಸಾನ್ನಿಧ್ಯ : ಶ್ರೀ ಮುರುಗ ರಾಜೇಂದ್ರಸ್ವಾಮಿ ಮಹಾಸಂಸ್ಥಾನ ಮಠದ ಶ್ರೀ ಇಮ್ಮಡಿ ಮುರುಗ ರಾಜೇಂದ್ರಸ್ವಾಮಿಗಳು, ಉದ್ಘಾಟನೆ : ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಕೌನ್ಸಿಲ್ ಉಪಾಧ್ಯಕ್ಷ ಪ್ರೊ. ವೈ.ಎಸ್. ಸಿದ್ದೇಗೌಡ, ಸಾಹಿತಿ ಪ್ರೊ. ಡಿ.ಎ. ಶಂಕರ್ ಅವರಿಂದ ಸ್ಥಳೀಯ ಮತ್ತು ವಿದೇಶಿ ವಿದ್ವಾಂಸರ ದೃಷ್ಟಿಯಲ್ಲಿ ಬಸವಣ್ಣ ಕುರಿತು ಉಪನ್ಯಾಸ, ಉಪಸ್ಥಿತರು : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾಂಸರಾದ ಪಂಡಿತ್ ಶ್ರೀ ಮುರಳೀಧರದಾಸ್ ಅವರಿಂದ ಜಗನ್ನಾಥದಾಸರ ಹರಿಕಥಾಮೃತಸಾರ ಕುರಿತು ಪ್ರವಚನ, ಸ್ಥಳ: ಶ್ರೀ ರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಸಿರಿಧಾನ್ಯದ ಸಿರಿ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರ್ ಉಮೇಶ್, 7.15 ಭಾವಗೀತೆಗಳು, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ ಮಾಲಿಕೆಯಲ್ಲಿ ಮೈಸೂರಿನ ಅರುಣ್ ಯೋಗಿರಾಜ್ ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 9.30 ವಿಧಾನ ಸಭಾ ಕ್ಷೇತ್ರ ಪರಿಚಯ, 10.00 ಕೆ.ಎಸ್. ಹೇರಂಬ ಮತ್ತು ಕೆ.ಎಸ್. ಹೇಮಂತ–ಯುಗಳ ವೇಣುವಾದನ.

ಮಧ್ಯಾಹ್ನ: 12.45ಜನಪದ ಸಂಗೀತ –ರಾಮಸಮುದ್ರದ ತುಳಸಮ್ಮ ಮತ್ತು ತಂಡ, 1.00 ರಂಗಗೀತೆ –ಎಚ್ಚಮ ನಾಯಕ ನಾಟಕದ ಹಾಡುಗಳು, 1.20 ಭಾವಗೀತೆ, 3.30 ಮಕ್ಕಳ ಮಂಟಪ–ಮಂಡ್ಯ ಜಿಲ್ಲೆ ಕಿಕ್ಕೇರಿಯ ಕೇಂಬ್ರಿಜ್ ಪಬ್ಲಿಕ್ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ ಪ್ರಸ್ತುತಿ– ಎಂ.ಎಸ್. ಭಾರತಿ, 4.00 ನಾಟಕ "ಅಧಿಕಾರ", ಮೂಲ ಪಂಜಾಬಿ ಹಾಗೂ ಹಿಂದಿ ಅನುವಾದ– ಎಂ.ಆರ್. ಚಾಂದ್ಲಾ, ಕನ್ನಡಾನುವಾದ– ಶ್ರೀನಿವಾಸ ಪ್ರಸಾದ್ ನಿರ್ಮಾಣ– ಪ್ರಭುಸ್ವಾಮಿ ಮಳಿಮಠ, 4.30 ನೆನಪಿನಂಗಳ–ಕನ್ನಡ ಚಿತ್ರರಂಗದ ಮೇರು ನಟ ಡಾ. ರಾಜ್‌ಕುಮಾರ್ ಅವರೊಂದಿಗೆ ಎನ್.ವಿ. ರಮೇಶ್ ಅವರು ನಡೆಸಿದ್ದ ಮಾತುಕತೆ, 6.50 ಕೃಷಿರಂಗ "ತೋರಣ ಹೂರಣ", 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ವಿರಾಜ್ ಅಮರ್ – ಗಾಯನ, ಅಕ್ಬರ್ ಹುಸೇನ್– ತಬಲಾ ಸೋಲೋ.

■ **ಗ್ಲೋಬಲ್ ವಿಷ್ಣು ಸಹಸ್ರನಾಮ ಸತ್ಸಂಗ್ ಫೆಡರೇಷನ್, ಮೈಸೂರು ವಿಭಾಗ, ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನ ಟ್ರಸ್ಟ್ :** ಬೆಳಗ್ಗೆ 9.30ಕ್ಕೆ ಸಾಮೂಹಿಕ ವಿಷ್ಣುಸಹಸ್ರನಾಮ ಪಾರಾಯಣ, ಬೆಳಗ್ಗೆ 11ಕ್ಕೆ ವಿದ್ಯಾವಾಚಸ್ಪತಿ ಡಾ. ಅರಳು ಮಲ್ಲಿಗೆ ಪಾರ್ಥಸಾರಥಿ ಅವರಿಂದ ಪ್ರವಚನ, ಅಧ್ಯಕ್ಷತೆ : ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನ ಸಂಸ್ಥಾಪಕ ಡಾ. ಭಾಷ್ಯಂ ಸ್ವಾಮೀಜಿ, ಉಪಸ್ಥಿತರು : ಫೆಡರೇಷನ್ ಅಧ್ಯಕ್ಷ ಕ್ಯಾಪ್ಟನ್ ಮಣಿ, ಪ್ರಧಾನ ಕಾರ್ಯದರ್ಶಿ ಭಾನುಪ್ರಕಾಶ್, ನಿರ್ದೇಶಕರಾದ ಶ್ರೀಮತಿ ಮಂಗಳಾ ಭಾಸ್ಕರ್, ರಮಾಕಾಂತ ಶೆಣೈ, ಮಧ್ಯಾಹ್ನ 1.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನ, ವಿಜಯನಗರ 1ನೇ ಹಂತ.

■ **ನಟನ ರಂಗಶಾಲೆ :** ಬೆಂಗಳೂರಿನ ಕಲಾಗಂಗೋತ್ರಿ ಕಲಾವಿದರಿಂದ 'ಮುದಿ ದೊರೆ ಮತ್ತು ಮೂವರು ಮಕ್ಕಳು ನಾಟಕ ಪ್ರದರ್ಶನ, ನಿರ್ದೇಶನ: ಶ್ರೀಮತಿ ಎನ್.ಮಂಗಳ, ನಾಟಕ ರಚನೆ : ಡಾ. ಹೆಚ್.ಎಸ್. ವೆಂಕಟೇಶ್‌ಮೂರ್ತಿ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ನಕ್ಕರೆ ಅದೇ ಸ್ವರ್ಗ

ಕೆಲಸದವ : ಸರ್, ಇಂದಿನಿಂದ ನಾನು ಸಂಜೆ ಆರು ಗಂಟೆಗೇ ಆಫೀಸ್ ಬಿಡಬೇಕು.
ಬಾಸ್ : ಯಾಕೆ? ಏನಾಯ್ತು?!
ಕೆಲಸದವ : ಸಂಬಳ ಸಾಕಾಗ್ತಿಲ್ಲ ಸರ್, ಅದಕ್ಕೇ ಸಂಜೆ ಏಳು ಗಂಟೆ ಬಳಿಕ ಆಟೋ ಓಡ್ಸೋಣ ಅಂತಿದೀನಿ.
ಬಾಸ್ : ಬಸ್ ಸ್ಟ್ಯಾಂಡ್ ಹತ್ರ ಬಾ. ನಾನು ಅಲ್ಲೇ ಇಡ್ಲಿ, ಚಿತ್ರಾನ್ನ ಗಾಡಿ ಹಾಕಿದ್ದೀನಿ!

ಮೈಸೂರು ಮಿತ್ರ

ಶನಿವಾರ, 22 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಪೂರ್ಣ ಆತ್ಮವಿಶ್ವಾಸಿಯೇ ನಿಸ್ಪೃಹನಾಗಿ ಸಾಧನೆಯಲ್ಲಿ ತಲ್ಲೀನನಾಗಬಲ್ಲ
–ರವೀಂದ್ರನಾಥ ಠಾಗೋರ್

ವೇದ ಸುಳ್ಳಾದರೂ { ಹುಟ್ಟಿಸಿದ ದೇವರು
ಗಾದೆ ಸುಳ್ಳಾಗದು { ಊಟ ಕೊಡಲಾರನೇ?

ನಿಮ್ಮ ಪತ್ರಗಳು

ರಾಜ್ಯಕ್ಕೆ 3–ಭಾಷಾ ಸೂತ್ರ ಬೇಕೆ?

ಮಾನ್ಯರೆ,

ಮೊಸರಿನ ಪೊಟ್ಟಣಗಳ ಮೇಲೆ "ದಹೀ" ಎಂದು ಮುದ್ರಿಸಲು ಹೊರಟ ಕೇಂದ್ರ ಸರ್ಕಾರದ ಉದ್ಧಟತನವು ಪ್ರತ್ಯಕ್ಷವಾಗಿ ಗೋಚರಗೊಂಡಿದೆ. ಕರ್ನಾಟಕದ ಭವಿಷ್ಯಕ್ಕೆ ಧಕ್ಕೆಯುಂಟುಮಾಡುವ ಅಪಾಯವಿರುವುದು ಆಂಗ್ಲದಿಂದಲ್ಲ, ಬದಲಿಗೆ ಹಿಂದಿಯೇ ಹಿರಿಯ ಕುತ್ತು ಎಂಬುದನ್ನು ನಮ್ಮ ರಾಜಕಾರಣಿಗಳು ಮನಗಾಣಬೇಕು. ಮೊದಲಿನಿಂದಲೂ ಹಿಂದಿ–ವಿರೋಧಿ ನಿಲುವನ್ನೇ ತಳೆದಿರುವ ತಮಿಳುನಾಡು ರಾಜಕೀಯವಾಗಿ ಎಷ್ಟು ಬಲಶಾಲಿಯಾಗಿದೆ ಎಂಬುದನ್ನು ವಿವರಿಸಬೇಕಿಲ್ಲ.

ಈ ವಿಧಾನಸಭೆಯ ಚುನಾವಣೆ ಬಳಿಕ ರಾಜ್ಯದಲ್ಲಿ ಯಾವುದೇ ಪಕ್ಷವು ಅಧಿಕಾರದ ಚುಕ್ಕಾಣಿ ಹಿಡಿದರೂ, ಅದು ಮಾಡಬೇಕಾದ ಮೊದಲ ಕಾಯಕವೆಂದರೆ ಶಾಲೆಗಳಲ್ಲಿ ಕನ್ನಡ ಮತ್ತು ಇಂಗ್ಲೀಷ್‌ಗಳ ದ್ವಿ ಭಾಷಾ ನೀತಿಯನ್ನು ಜಾರಿಗೊಳಿಸುವುದು. ಆಧುನಿಕ ಪಂಪ ಎನಿಸಿದ ಕುವೆಂಪುರವರೂ ರಾಜ್ಯದ ಹಿತದೃಷ್ಟಿಯಿಂದ ದ್ವಿಭಾಷಾ ನೀತಿಯನ್ನೇ ಶಿಫಾರಸು ಮಾಡುತ್ತಿದ್ದರು ಎಂಬುದು ಇನ್ನೂ ಮರೆತುಹೋಗಿಲ್ಲ.

–ಡಿ.ವಿ. ಮೋಹನ ಪ್ರಕಾಶ್, ಗೋಕುಲ ರಸ್ತೆ, ಮೈಸೂರು.

ಲಿಂಗಾಯತ ನಾಯಕರನ್ನು ಕಡೆಗಣಿಸುತ್ತಿರುವ ಬಿಜೆಪಿ

ಮಾನ್ಯರೆ,

ಲಿಂಗಾಯತರು ರಾಜ್ಯ ರಾಜಕಾರಣದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಅತೀ ಹೆಚ್ಚು ಜನಸಂಖ್ಯೆ ಹೊಂದಿರುವ ಲಿಂಗಾಯತ ಸಮುದಾಯ ಕರ್ನಾಟಕದ ರಾಜಕೀಯ ಚಿತ್ರಣವನ್ನೇ ಬದಲಿಸಬಲ್ಲದು ಎಂದರೆ ತಪ್ಪಾಗಲಾರದು. ಆದರೆ ಇತ್ತೀಚಿನ ದಿನಗಳಲ್ಲಿ ಲಿಂಗಾಯತರಲ್ಲಿ ನಾಯಕತ್ವದ ಕೊರತೆ ಎದ್ದು ಕಾಣುತ್ತಿದೆ. ಕಳೆದ ಎರಡು ದಶಕಗಳಿಂದ ಯಡಿಯೂರಪ್ಪನವರ ಮುಖ ನೋಡಿ ಬಿಜೆಪಿಗೆ ಮತ ಹಾಕುತ್ತಾ ಬಂದಿರುವ ಲಿಂಗಾಯತರು ದ್ವಂದ್ವದಲ್ಲಿ ಸಿಲುಕಿದ್ದಾರೆ. ಇತ್ತೀಚಿನ ರಾಜಕೀಯ ಬೆಳವಣಿಗೆಯನ್ನು ನೋಡಿದರೆ ಬಿಜೆಪಿಯು ಲಿಂಗಾಯತರನ್ನು ತುಳಿಯುತ್ತಿದೆ ಎಂಬ ಅಭಿಪ್ರಾಯ ಎಲ್ಲೆಡೆ ವ್ಯಕ್ತವಾಗುತ್ತಿದೆ. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದರು. ಲಿಂಗಾಯತ ಸಮುದಾಯದ ಪ್ರಮುಖ ನಾಯಕರಾದ ಲಕ್ಷ್ಮಣ್ ಸವದಿ ಹಾಗೂ ಜಗದೀಶ್ ಶೆಟ್ಟರ್ ಅವರಿಗೆ ಟಿಕೆಟ್ ನೀಡಲಿಲ್ಲ. ಸಿದ್ದರಾಮಯ್ಯನವರ ವಿರುದ್ಧ ವಿ.ಸೋಮಣ್ಣನವರಿಗೆ ಟಿಕೆಟ್ ನೀಡಿ ಅವರ ರಾಜಕೀಯ ಭವಿಷ್ಯವನ್ನು ಕೊನೆಗಾಣಿಸಬೇಕು ಎಂದು ಷಡ್ಯಂತರ ನಡೆದಿದೆ ಎಂಬ ಆರೋಪಗಳ ಸುರಿಮಳೆಯೇ ಬಿಜೆಪಿ ಮೇಲಿದೆ. ಇದಲ್ಲದೆ ತಮ್ಮ ಜವಾರಿ ಮಾತುಗಳಿಂದಲೇ ಖ್ಯಾತಿಯನ್ನು ಹೊಂದಿರುವ ಉತ್ತರ ಕರ್ನಾಟಕದ ಪ್ರಮುಖ ನಾಯಕ ವಿಜಯಪುರದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಯಡಿಯೂರಪ್ಪನವರು ತಮ್ಮ ಮಗನ ಏಳಿಗೆಗಾಗಿ ಲಿಂಗಾಯತ ನಾಯಕರನ್ನು ತುಳಿಯುತ್ತಿದ್ದಾರೆ ಎಂಬ ಆರೋಪವನ್ನು ಮಾಡಿದ್ದಾರೆ. ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸುತ್ತಿರುವ ಲಿಂಗಾಯತರ ಒಲವು ಯಾವ ಪಕ್ಷದ ಕಡೆಗೆ ಇದೆ ಎಂಬುದು ಪ್ರಶ್ನಾರ್ಥಕವಾಗಿ ಉಳಿದಿದೆ.

–ಶ್ರೀಶೈಲ ಪಾಟೀಲ, ಪತ್ರಿಕೋದ್ಯಮ ವಿಭಾಗ, ಮೈಸೂರು

ಬೇಸಿಗೆ ಶಿಬಿರಗಳು ವ್ಯಕ್ತಿತ್ವ ರೂಪಿಸುವ ತಾಣವಾಗಬೇಕು

ಮಾನ್ಯರೆ,

ಕೊರೊನಾದಿಂದಾಗಿ ದೇಶದಾದ್ಯಂತ ಸುಮಾರು ಮೂರು ವರ್ಷಗಳಿಂದ ಮಕ್ಕಳ ಕಲೆ, ಸಾಹಿತ್ಯ, ಕ್ರೀಡೆ, ರಂಗಭೂಮಿ ಮತ್ತು ಮಕ್ಕಳ ಅಭಿರುಚಿಗಳಿಗೆ ತಕ್ಕಂತಹ ವಾತಾವರಣ ಇರಲಿಲ್ಲ. ಅದೇ ರೀತಿಯಲ್ಲಿ ಮೈಸೂರಿನಲ್ಲಿಯೂ ಕೂಡ ಕೊರೊನಾ ನಂತರ ಮೊದಲ ಬಾರಿಗೆ ಅನೇಕ ಸಂಘ ಸಂಸ್ಥೆಗಳು, ಶಾಲಾ–ಕಾಲೇಜುಗಳು ಬೇಸಿಗೆ ಶಿಬಿರಗಳನ್ನು ಆಯೋಜನೆ ಮಾಡುತ್ತಿವೆ. ಇದು ಉತ್ತಮ ಬೆಳವಣಿಗೆ ಹಾಗೂ ಕಲೆಯನ್ನು ವೃತ್ತಿಯನ್ನಾಗಿಸಿಕೊಂಡವರಿಗೆ ಅನಿವಾರ್ಯ. ನಗರ ಪ್ರದೇಶಗಳಲ್ಲಿ ವಾಸವಿರುವ ಪೋಷಕರು, ತಮ್ಮ ಕರ್ತವ್ಯ ನಿಮಿತ್ತ ಕೆಲಸಗಳಿಗೆ ಹೋಗಬೇಕಾಗಿದ್ದು ಮಕ್ಕಳಿಗೆ ರಜೆ ಇರುವ ಕಾರಣ ತಾವು ವಾಸವಿರುವ ಸುತ್ತಮುತ್ತಲಿನಲ್ಲಿ ಆಯೋಜಿಸಿರುವ ಬೇಸಿಗೆ ಶಿಬಿರಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಿದ್ದಾರೆ. ಆದ್ದರಿಂದ ಶಿಬಿರದ ಆಯೋಜಕರು ನುರಿತ ಕಲಾವಿದರು, ಸಂಪನ್ಮೂಲ ವ್ಯಕ್ತಿಗಳಿಂದ ಮಕ್ಕಳಿಗೆ ತರಬೇತಿಯನ್ನು ಕೊಡಿಸಬೇಕು. ಯಾಕೆಂದರೆ ಬೇಸಿಗೆ ಶಿಬಿರಗಳು ಮಕ್ಕಳ ವ್ಯಕ್ತಿತ್ವ ರೂಪಿಸುವ ತಾಣವಾಗಬೇಕೆ ವಿನಹ ದುಡ್ಡು ಮಾಡುವ ತಾಣವಾಗಬಾರದು. ಯಾಕೆಂದರೆ ನಾನು ಕೂಡ ರಂಗಭೂಮಿ ಕಲಾವಿದ ಹಾಗೂ ಹಣ ಮಾಡುವ ಶಿಬಿರಗಳನ್ನು ನೋಡಿರುವು ದರಿಂದ ಮಕ್ಕಳಿಗೆ ಮೋಸವಾಗಬಾರದೆಂಬುವುದು ನನ್ನ ಕಳಕಳಿ.

– ಅಂಕರಾಜು, ಜಿ.ಎಸ್.ಎಸ್.ಎಸ್, ಮೈಸೂರು

ನೀರನ್ನು ಪೋಲು ಮಾಡಬೇಡಿ

ಮಾನ್ಯರೆ,

ಕೆಲಸದ ನಿಮಿತ್ತ ಬೆಂಗಳೂರಿನಿಂದ ವಂದೇ ಭಾರತ್ ರೈಲಿನಲ್ಲಿ ಮೈಸೂರಿಗೆ ಪ್ರಯಾಣಿಸುತ್ತಿದ್ದೆ. ಆ ರೈಲಿನಲ್ಲಿ ಪ್ರತಿಯೊಬ್ಬರಿಗೂ ಟೀ ಬಿಸ್ಕತ್ ಒಂದು ಲೀಟರ್‌ನ ನೀರಿನ ಬಾಟಲ್ ನೀಡುತ್ತಾರೆ. ಪ್ರಯಾಣವೇನೋ ಸುಖವಾಗಿರುತ್ತದೆ. ಆದರೆ ಅಲ್ಲಿದ್ದವರೆಲ್ಲ ಸ್ವಲ್ಪ ನೀರು ಕುಡಿದು ಆ ಬಾಟಲಿನಲ್ಲಿ ನೀರನ್ನು ಉಳಿಸಿ ಬಿಸಾಡಿ ಹೋಗುತ್ತಾರೆ. ಇದು ನೀರನ್ನು ಪೋಲು ಮಾಡಿದ ಹಾಗೆ ಆಗುತ್ತದೆ. ಇದೇ ರೀತಿ ಹಲವಾರು ಸಮಾರಂಭಗಳಲ್ಲಿ, ಹೋಟೆಲ್‌ಗಳಲ್ಲಿ ಜನ ಹೀಗೆ ನಡೆದುಕೊಳ್ಳುತ್ತಾರೆ. ಎಲ್ಲೆಡೆ ನೀರಿನ ಅಭಾವದಿಂದ ತಲ್ಲಣಗೊಂಡಿದ್ದಾರೆ. ಆದ್ದರಿಂದ ನೀರನ್ನು ಪೋಲು ಮಾಡುವುದು ಬೇಡ. ಜನರಿಗೆ ಯಾವುದೇ ಸಮಾರಂಭವಾದರೂ ಚಿಕ್ಕ ಬಾಟಲಿ ನೀರನ್ನು ನೀಡಿ, ಬೇಕಾದರೆ ಮತ್ತೊಂದು ಬಾಟಲನ್ನು ಕೇಳಿ ಪಡೆಯುತ್ತಾರೆ. ಈ ರೀತಿಯಾಗಿ ನೀರನ್ನು ಬಳಸಿಕೊಳ್ಳಿ. ಬಾಯಾರಿದ ಪಶು ಪಕ್ಷಿಗಳಿಗೆ ನೀರನ್ನು ಉಣಿಸಿ.

–ಅರ್ಪಣಾ ಸ್ವರೂಪ, ಕೆ.ಆರ್.ಪುರಂ, ಬೆಂಗಳೂರು

ಹೋಲಿಕೆಗಳು

ಮಾನ್ಯರೆ,

1. ಇತ್ತೀಚೆಗೆ ನಿಧನರಾದ ಕಾನೂನು, ಸಂವಿಧಾನ ತಜ್ಞ ಸಿ.ಕೆ.ಎನ್. ರಾಜಾ ಅವರು ಹಿಂದೊಮ್ಮೆ ಸಮಾರಂಭವೊಂದರಲ್ಲಿ ನನ್ನನ್ನು ಖ್ಯಾತ ಕ್ರಿಕೆಟ್ ತಾರೆಯೊಬ್ಬರಿಗೆ (ಸಚಿನ್ ತೆಂಡೂಲ್ಕರ್?) ಹೋಲಿಸಿದ್ದನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

2. ಈಚೆಗೆ ರಾಜಕಾರಣಿಯೊಬ್ಬರು ರಾಜಕೀಯ ಮುಖಂಡರೊಬ್ಬರನ್ನು ರಾವಣನಿಗೆ ಹೋಲಿಸಿದರು. ಅಂತೆಯೇ, ಕೆಟ್ಟ ಬಟ್ಟೆ ಧರಿಸುವ ಹೆಣ್ಣು ಮಕ್ಕಳನ್ನು ಒಬ್ಬರು ಶೂರ್ಪನಖಿಯರಿಗೆ ಹೋಲಿಸಿದರು. ಎಂದರೆ, ಇದೇನು ಲಂಕೆಯೇ? (ಶಂಕೆಯಿಲ್ಲ!)

ಸ್ವಾರಸ್ಯವೆಂದರೆ, 'ರಾಜಕೀಯ ರಾವಣನೊಬ್ಬನಿಗೆ' ಎಂಬ ರೂಪಕ ಕವನವೊಂದು ಬಹಳ ಹಿಂದೆ ಕುವೆಂಪು ಅವರಿಂದ ರಚಿತವಾಯಿತು! ಅದು ಬಹುಶಃ ಜಿನ್ನಾ ಸಾಹೇಬರನ್ನು ಕುರಿತದ್ದು.

ಅಭಿನಂದನೆ : 43 ತುಂಬಿದ 'ಮೈಸೂರು ಮಿತ್ರ'ನಿಗೆ ಹಾರ್ದಿಕ ಅಭಿನಂದನೆಗಳು. ('ಮಿತ್ರ' ಎಂದರೆ ಸೂರ್ಯ ಎಂದೂ ಅರ್ಥ. ಸೂರ್ಯೋದಯ ಸಮಯಕ್ಕೆ ಸರಿಯಾಗಿ ಮಿತ್ರ ಪ್ರತ್ಯಕ್ಷ!)

–ಸಿಪಿಕೆ, ಪಂಪ ಪ್ರಶಸ್ತಿ ಪುರಸ್ಕೃತರು, ಮೈಸೂರು.



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ವಿಶ್ವದ ಸೆಮಿ ಕಂಡಕ್ಟರ್ ಹಬ್ ಆಗಲಿದೆ ಮೈಸೂರು

ಭಾರತವು ಸೆಮಿ ಕಂಡಕ್ಟರ್‌ಗಳನ್ನು ತೈವಾನ್, ಚೀನಾ, ಹಾಂಗ್‌ಕಾಂಗ್, ಸಿಂಗಾಪುರ ಮತ್ತು ಅಮೇರಿಕ ಮೊದಲಾದ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದೆ. ನಮ್ಮ ಬೇಡಿಕೆಯಲ್ಲಿ ಶೇ.25 ರಷ್ಟು ಚೀನಾದಿಂದ ಆಮದಾಗುತ್ತಿದೆ. ದೇಶವು ಪ್ರತಿವರ್ಷ ಸುಮಾರು 1.10 ಲಕ್ಷ ಕೋಟಿ ರೂ.ನಷ್ಟು ಅಮೂಲ್ಯವಾದ ವಿದೇಶಿ ವಿನಿಮಯವನ್ನು ಸೆಮಿ ಕಂಡಕ್ಟರ್‌ಗಳಿಗಾಗಿ ವ್ಯಯಿಸುತ್ತಿದೆ. ದೇಶದಲ್ಲಿರುವ ಸೆಮಿಕಂಡಕ್ಟರ್‌ಗಳ ಅಭಾವವನ್ನು ಗಮನಿಸಿದ ಕೇಂದ್ರ ಸರಕಾರವು ದೇಶದಲ್ಲಿಯೇ ಉತ್ಪಾದಿಸಲು ಸೂಕ್ತ ಕ್ರಮ ಕೈಗೊಳ್ಳಲಾರಂಭಿಸಿದೆ. 2021ರಲ್ಲಿ ಈ ವಲಯಕ್ಕಾಗಿ 10 ಬಿಲಿಯನ್ ಡಾಲರ್‌ಗಳಷ್ಟು ವಿಶೇಷ ಪ್ಯಾಕೇಜ್ ನೀಡಿತು. ಈ ಬಾರಿಯ ಬಜೆಟ್‌ನಲ್ಲಿ ಹೆಚ್ಚುವರಿ ಮೂರು ಸಾವಿರ ಕೋಟಿ ರೂ.ಗೆ ಮಂಜೂರಾತಿ ನೀಡಲಾಗಿದೆ. ಕರ್ನಾಟಕ, ಗುಜರಾತ್ ಹಾಗೂ ಒರಿಸ್ಸಾ ರಾಜ್ಯಗಳು ಸೆಮಿ ಕಂಡಕ್ಟರ್ ಉತ್ಪಾದಿಸುವ ಘಟಕಗಳನ್ನು ಸ್ಥಾಪಿಸುವ ಸ್ಪರ್ಧೆಯಲ್ಲಿವೆ.

ಜಗತ್ತಿನಲ್ಲಿ ಸೆಮಿ ಕಂಡಕ್ಟರ್‌ಗಳಿಗಿರುವ ಬೇಡಿಕೆ ಮತ್ತು ಅಭಾವವನ್ನು ಪರಿಗಣಿಸಿ ಭಾರತವು ಈ ಕ್ಷೇತ್ರದಲ್ಲಿ ಕೇವಲ ಸ್ವಾವಲಂಬಿಯಾಗದೇ ರಫ್ತು ಮಾಡುವ ನಿಟ್ಟಿನಲ್ಲೂ ಯೋಜನೆ ರೂಪಿಸುತ್ತಿದೆ. ಜಗತ್ತಿನಲ್ಲಿ ಭಾರೀ ಪ್ರಮಾಣದಲ್ಲಿ ಮಾರುಕಟ್ಟೆ ಹೊಂದಿರುವ ಅತೀ ಚಿಕ್ಕ ಹಾಗೂ ಸೂಕ್ಷ್ಮ ರಚನೆಯಿರುವ ಈ ಚಿಪ್‌ಗಳು ದೇಶದಲ್ಲಿ ಭಾರೀ ಪ್ರಮಾಣದಲ್ಲಿ ಉದ್ಯೋಗಸೃಷ್ಟಿ ಮತ್ತು ವಿದೇಶಿ ವಿನಿಮಯವನ್ನು ತರಲಿದೆ.

ಏನಿದು ಸೆಮಿ ಕಂಡಕ್ಟರ್ (ಅರೆವಾಹಕ), ಏನಿದರ ಮಹತ್ವ: ಇಲೆಕ್ಟ್ರಾನಿಕ್ ಕ್ಷೇತ್ರದಲ್ಲಾಗಿರುವ ಕ್ರಾಂತಿಯಿಂದ ಸೆಮಿ ಕಂಡಕ್ಟರ್‌ಗಳಿಗೆ ಅಪಾರ ಬೇಡಿಕೆ ಇದೆ. ಗಾತ್ರದಲ್ಲಿ ವಾಮನಮೂರ್ತಿಯಂತಿರುವ ಈ ಸೆಮಿ ಕಂಡಕ್ಟರ್‌ಗಳು ತ್ರಿವಿಕ್ರಮನ ಮಹತ್ವ ಪಡೆದಿವೆ. ಆಧುನಿಕ ಯುಗದಲ್ಲಿ ಸೆಮಿ ಕಂಡಕ್ಟರ್‌ಗಳು ಮೊಬೈಲ್ ಸೇರಿದಂತೆ ಎಲ್ಲಾ ಮಾದರಿಯ ಇಲೆಕ್ಟ್ರಿಕ್, ಇಲೆಕ್ಟ್ರಾನಿಕ್ ಉಪಕರಣಗಳು, ಮನೆ ಬಳಕೆ ಸಾಧನಗಳಾದ ಫೋನ್, ರೆಫ್ರಿಜರೇಟರ್, ಏರ್ ಕಂಡಿಷನರ್‌ಗಳು, ರಸ್ತೆ ಸಿಗ್ನಲ್‌ಗಳು, ರಿಮೋಟ್‌ಗಳು, ಸ್ಮಾರ್ಟ್ ಡೋರ್‌ಗಳು, ಬೀಗಗಳು ಆಟೋಮೊಬೈಲ್ ವಾಹನಗಳು (Pin to Plane) ಹೀಗೆ ಎಲ್ಲದಕ್ಕೂ ಸೆಮಿ ಕಂಡಕ್ಟರ್‌ಗಳು ಹೃದಯವೆನಿಸಿವೆ. 2019ರಲ್ಲಿ ಕೊರೊನಾ ಮಹಾಮಾರಿಯಿಂದ ಜಾಗತಿಕ ಮಟ್ಟದಲ್ಲಿ ಎಲ್ಲಾ ರೀತಿಯ ಉತ್ಪನ್ನಗಳಿಗೆ ಬೇಡಿಕೆ ಕುಸಿಯಿತು. ವ್ಯಾಪಾರ ವಾಣಿಜ್ಯ ವ್ಯವಹಾರಗಳು ನೆಲಕಚ್ಚಿದವು. ವಾಹನಗಳ ಬೇಡಿಕೆ ಭಾರಿ



ಪ್ರಮಾಣದಲ್ಲಿ ಕುಸಿಯಿತು. ಇದರಿಂದ ಆಟೋಮೊಬೈಲ್ ವಲಯಕ್ಕಾಗಿ ಉತ್ಪಾದನೆಯಾಗುತ್ತಿದ್ದ ಸೆಮಿ ಕಂಡಕ್ಟರ್‌ಗಳು, ಮೈಕ್ರೋಚಿಪ್‌ಗಳಿಗೆ ಬೇಡಿಕೆ ಇಲ್ಲವಾಯಿತು. ಈ ಕಾರಣದಿಂದ ಮೈಕ್ರೋಚಿಪ್ ಘಟಕಗಳು ತಮ್ಮ ಉತ್ಪಾದನೆ ಸ್ಥಗಿತಗೊಳಿಸಿದವು. 2021ರ ನಂತರ ಕೊರೊನಾದಿಂದ ಜಗತ್ತು ಚೇತರಿಸಿಕೊಳ್ಳುತ್ತಿದ್ದಂತೆ ಎಲ್ಲಾ ರೀತಿಯ ಉತ್ಪನ್ನಗಳಿಗೆ ಮತ್ತೆ ಬೇಡಿಕೆ ಏರಲಾರಂಭಿಸಿತು. ವಿಶೇಷವಾಗಿ ಆಟೋಮೊಬೈಲ್ ಕ್ಷೇತ್ರದಲ್ಲಿ ವಾಹನಗಳಿಗೆ ಭಾರಿ ಪ್ರಮಾಣ ಬೇಡಿಕೆಯುಂಟಾಯಿತು. ಆದರೆ ವಾಹನಗಳ ಆತ್ಮದಂತಿರುವ ಈ ಸೆಮಿ ಕಂಡಕ್ಟರ್‌ಗಳ ಉತ್ಪಾದನೆ ನೆಲಕಚ್ಚಿದ ಪರಿಣಾಮ ಆಟೋಮೊಬೈಲ್ ವಲಯಕ್ಕೆ ಹೊಡೆತ ನೀಡಿತು.

ಈ ಹಿನ್ನೆಲೆಯಲ್ಲಿ ಸೆಮಿ ಕಂಡಕ್ಟರ್‌ಗಳ, ಮೈಕ್ರೋಚಿಪ್‌ಗಳ ಮಹತ್ವ ಅರಿತ ಕೇಂದ್ರ ಸರಕಾರವು ಈ ಬಾರಿಯ ಬಜೆಟ್‌ನಲ್ಲಿ ಇವುಗಳ ಉತ್ಪಾದನೆಗೆ ಭಾರಿ ಪ್ರಮಾಣದಲ್ಲಿ ಪ್ರೋತ್ಸಾಹ ನೀಡುವ ಸಂಕೇತ ನೀಡಿದೆ. ಕೇಂದ್ರೀಯ ಇಲೆಕ್ಟ್ರಾನಿಕ್ಸ್ ಮತ್ತು ಸೂಚನಾ ಪ್ರೌದ್ಯೋಗಿಕ ಸಚಿವಾಲಯಕ್ಕೆ ಈ ಬಾರಿ ರೂ. 16,549 ಕೋಟಿ (ಕಳೆದ ಸಾಲಿಗಿಂತ ಶೇ.40 ಹೆಚ್ಚಳ) ಬಜೆಟ್‌ನಲ್ಲಿ ಅನುದಾನ ನೀಡಿದೆ. ಭಾರತೀಯ ಮಿಷನ್ ಸೆಮಿ ಕಂಡಕ್ಟರ್‌ಗೆ ದೊರೆತಿರುವ ಮೂರು ಸಾವಿರ ಕೋಟಿ ರೂ. ಸೆಮಿಕಂಡಕ್ಟರ್ ಹಾಗೂ ಡಿಸ್‌ಪ್ಲೆಯಂತಹ ಆವಿಷ್ಕಾರಗಳನ್ನು ಅಭಿವೃದ್ಧಿಪಡಿಸಲು ಸಹಾಯ ನೀಡಲಿದೆ. ಈ ಮೊತ್ತದಲ್ಲಿ 1799 ಕೋಟಿ ರೂ. ಭಾರತದಲ್ಲಿ ಸೆಮಿಕಂಡಕ್ಟರ್, ಸಿಲಿಕಾನ್ ಫೋಟೊನಿಕ್ಸ್, ಸೆಮಿ ಕಂಡಕ್ಟರ್‌ಗಳ ಜೋಡಣೆ ಪರೀಕ್ಷೆ, ಪ್ಯಾಕೇಜಿಂಗ್ ಮೊದಲಾದ ಮೂಲಕ ಸೌಕರ್ಯಗಳ ಸ್ಥಾಪನೆಗೆ ಹೂಡಿಕೆ ಮಾಡಲಾಗುವುದು. ಸೆಮಿ ಕಂಡಕ್ಟರ್‌ಗಳ ಫ್ಯಾಬ್ರಿಕೇಷನ್ ಸಂಯಂತ್ರಗಳ ಸ್ಥಾಪನೆಗೆ ಪರಿಷ್ಕೃತ ಯೋಜನೆಯಡಿ ಒಂದು ಸಾವಿರ ಕೋಟಿ ರೂ. ಒದಗಿಸಲಾಗಿದೆ.

ಕರ್ನಾಟಕಕ್ಕೆ ಒಲಿದ ಸೆಮಿಕಂಡಕ್ಟರ್ ಘಟಕ: ಸುದೀರ್ಘ ಕಾಲದ ನಿರ್ಲಕ್ಷ್ಯದ ನಂತರ ಕೇಂದ್ರ ಸರಕಾರ ಈ ಕ್ಷೇತ್ರಕ್ಕೆ ಆದ್ಯತೆ ನೀಡಲಾರಂಭಿಸಿದೆ. 2021ರಲ್ಲಿ ಸರಕಾರವು ದೇಶದಲ್ಲೇ ಸೆಮಿ ಕಂಡಕ್ಟರ್ ಮತ್ತು ಮೈಕ್ರೋಚಿಪ್‌ಗಳ ಉತ್ಪಾದನೆಗೆ ಉತ್ತೇಜನ ನೀಡಲು ರೂ. 76000 ಕೋಟಿಯ ನಿಧಿಯನ್ನು ರಚಿಸುವ ಘೋಷಣೆ ಮಾಡಿದೆ. 2026ರ ವೇಳೆಗೆ ಸುಮಾರು 80 ಬಿಲಿಯನ್ ಡಾಲರ್ ಮೌಲ್ಯದ 15 ಕೋಟಿ ಮೈಕ್ರೋಚಿಪ್ ಬೇಕಾಗುವ ಅಂದಾಜಿದೆ. 2030ರ ವೇಳೆಗೆ ಬೇಡಿಕೆ ಪ್ರಮಾಣ 110 ಬಿಲಿಯನ್ ಡಾಲರ್ ಗೇರುವ ಸಾಧ್ಯತೆ ಇದೆ.

ಸೆಮಿ ಕಂಡಕ್ಟರ್‌ನಲ್ಲಿ ದೇಶ ಆತ್ಮನಿರ್ಭರವಾಗಲು ದೇಶದ ಮೊಟ್ಟ ಮೊದಲ ಸೆಮಿ ಕಂಡಕ್ಟರ್ ಘಟಕ ನಿರ್ಮಾಣ ಮಾಡುವ ಅವಕಾಶ ನಮ್ಮ ರಾಜ್ಯಕ್ಕೆ ದೊರೆತಿದೆ. ಕರ್ನಾಟಕ ರಾಜ್ಯ ಸರಕಾರದ ಕೈಗಾರಿಕಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಡಾ. ಇ.ವಿ. ರಮಣರೆಡ್ಡಿ ಮತ್ತು ಐಎಸ್‌ಎಂಸಿ ಅನ್‌ಲಾಗ್ ಫ್ಯಾಬ್ ಪ್ರೈವೇಟ್ ಲಿ. ಸಂಸ್ಥೆಯ ನಿರ್ದೇಶಕರಾದ ಅಜಯ್ ಜಲನ್ ಒಪ್ಪಂದಕ್ಕೆ ಸಹಿ ಹಾಕಿದ ಬೆನ್ನಲ್ಲೇ ಈ ಕ್ಷೇತ್ರದಲ್ಲಿ ಭಾರಿ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆಗಳು ಮೂಡಿವೆ. ಈ ಒಪ್ಪಂದದನ್ವಯ ಮೈಸೂರಿನಲ್ಲಿ ಸುಮಾರು 150 ಎಕರೆ ಪ್ರದೇಶದಲ್ಲಿ ರೂ. 22900 ಕೋಟಿ (3 ಮಿಲಿಯನ್ ಡಾಲರ್) ಹೂಡಿಕೆಯೊಂದಿಗೆ ಸೆಮಿ ಕಂಡಕ್ಟರ್ ಉತ್ಪಾದನಾ ಘಟಕ ಆರಂಭವಾಗಲಿದೆ.

ಪ್ರಧಾನಿ ಮೋದಿಯವರ ನೇತೃತ್ವದ ಸರಕಾರವು ಸೆಮಿ ಕಂಡಕ್ಟರ್ ಮಿಷನ್‌ಗೆ ನೀಡಿದ ಅನುಮೋದನೆಯಿಂದ ರಾಜ್ಯವು ಈ ಕ್ಷೇತ್ರದಲ್ಲಿ ಮುಂದುವರಿಯಲು ಸಾಧ್ಯವಾಗಿದೆ. ಈ ಒಪ್ಪಂದ ಇಸ್ರೇಲ್ ಮತ್ತು ಭಾರತದ ನಡುವೆ ತಂತ್ರಜ್ಞಾನ ವಿನಿಮಯಕ್ಕೆ ವೇದಿಕೆ ಕಲ್ಪಿಸಲಿದೆ ಹಾಗೂ ಐಟಿ, ಬಿಟಿಯಂತೆ ಸೆಮಿ ಕಂಡಕ್ಟರ್ ಕ್ಷೇತ್ರದಲ್ಲೂ ಕರ್ನಾಟಕ ಹೆಸರು ಮಾಡುವಂತೆ ಎಲ್ಲಾ ಕ್ರಮ ತೆಗೆದುಕೊಳ್ಳಲಾಗುವುದೆಂದು ಒಪ್ಪಂದ ವೇಳೆ ಮುಖ್ಯಮಂತ್ರಿ ಬೊಮ್ಮಾಯಿ ತಿಳಿಸಿದರು. ಈಗಾಗಲೇ ಸೆಮಿ ಕಂಡಕ್ಟರ್ ಚಿಪ್‌ಗಳ ವಿನ್ಯಾಸ ರೂಪಿಸುವ ಹಾಗೂ ಪ್ರಯೋಗಗಳನ್ನು ಮಾಡುವುದರಲ್ಲಿ ಬೆಂಗಳೂರು ಮುಂಚೂಣಿಯಲ್ಲಿದೆ. ಆದರೆ ಇಲ್ಲಿ ವಿನ್ಯಾಸ ಮಾಡಿದ ಸೆಮಿ ಕಂಡಕ್ಟರ್‌ಗಳು ವಿದೇಶಗಳಲ್ಲಿ ತಯಾರಾಗುತ್ತಿದ್ದು ಇಲ್ಲಿಯೇ ಉತ್ಪಾದಿಸುವಂತಾದರೆ ನಿರೀಕ್ಷೆಗೂ ಮೀರಿ ಉದ್ಯೋಗ ಸೃಷ್ಟಿಯಾಗಲಿದೆ ಎಂಬುದು ಈ ಕ್ಷೇತ್ರದ ತಜ್ಞರ ಅಭಿಪ್ರಾಯವಾಗಿದೆ. ಮೈಸೂರಿನ ಘಟಕವು 2500 ಇಂಜಿನಿಯರ್‌ಗಳಿಗೆ ನೇರವಾಗಿ ಉದ್ಯೋಗ ನೀಡಲಿದ್ದು, ಪರೋಕ್ಷವಾಗಿ 12000 ದಷ್ಟು ಉದ್ಯೋಗಾವಕಾಶ ಕಲ್ಪಿಸಲಿದೆ. ಸಂಪೂರ್ಣ ದೇಶಕ್ಕಾಗಿ ಭವಿಷ್ಯದಲ್ಲಿ ಮೂವತ್ತು ಕೋಟಿ ಮೈಕ್ರೋಚಿಪ್‌ಗಳನ್ನು ಉತ್ಪಾದಿಸಿ ಆತ್ಮನಿರ್ಭರತೆ ಸಾಧಿಸುವುದರೊಂದಿಗೆ ಯೂರೋಪಿಯನ್ ದೇಶಗಳಿಗೆ ರಫ್ತು ಮಾಡುವ ಗುರಿ ಹೊಂದಲಾಗಿದೆ. ಈ ಮೂಲಕ ಮೈಸೂರು ವಿಶ್ವದ ಸೆಮಿ ಕಂಡಕ್ಟರ್ ಕೇಂದ್ರವಾಗಲಿದೆ. ಸೆಮಿ ಕಂಡಕ್ಟರ್‌ಗಳನ್ನು ದೇಶದಲ್ಲಿ ಉತ್ಪಾದಿಸಲು ಖಾಸಗಿ ಕಂಪನಿಗಳು ಮುಂದೆ ಬಂದಿವೆ. ಟಾಟಾ ಮೋಟಾರ್ಸ್ ತನ್ನ ಅಟೋಮೊಬೈಲ್ ವಾಹನಗಳಿಗೆ ಬೇಕಾಗುವ ಸೆಮಿ ಕಂಡಕ್ಟರ್‌ಗಳನ್ನು ಉತ್ಪಾದಿಸಲು 700 ಕೋಟಿ ರೂ. ಹೂಡಿಕೆ ಮಾಡಲಿದೆ. ಅನಿಲ್ ಅಗರ್‌ವಾಲ್ ಒಡೆತನದ ವೇದಾಂತ ಕಂಪನಿಯು 60000 ಕೋಟಿ ಹೂಡಿಕೆ ಮಾಡಲಿದೆ ಎಂದು ಮಾಹಿತಿ ನೀಡಿದೆ. ಒಡಿಶಾದಲ್ಲೂ ಇಂಗ್ಲೆಂಡ್ ಮೂಲದ ಎಸ್‌ಆರ್‌ಎಂ ಹಾಗೂ ಎಂಆರ್‌ಎಂ ಸಮೂಹಗಳು 30000 ಕೋಟಿ ಹೂಡಿಕೆ ಮಾಡಲಿವೆ. 2030ರ ವೇಳೆಗೆ ಸೆಮಿ ಕಂಡಕ್ಟರ್‌ಗಳನ್ನು ರಫ್ತು ಮಾಡಲು ಹಾಗೂ 7 ಟ್ರಿಲಿಯನ್ ಡಾಲರ್‌ನ ಅರ್ಥ ವ್ಯವಸ್ಥೆಯಾಗಲು ಭಾರತವು ಪಾರಂಪರಿಕ ಮಾದರಿಯಲ್ಲಿ ರುವ ಮಾಹಿತಿ ತಂತ್ರಜ್ಞಾನ, ಸಾಫ್ಟ್‌ವೇರ್‌ಗಿಂತಲೂ ಮುಂದಕ್ಕೆ ಯೋಚಿಸಲು ಸಿದ್ಧತೆ ಆರಂಭಿಸಿದೆ. ಇದರಿಂದ ಜಗತ್ತಿನಲ್ಲಿ ಭಾರತವು ಅತ್ಯಂತ ಬಲಿಷ್ಠವಾದ ಅರ್ಥ ವ್ಯವಸ್ಥೆ ಹೊಂದಲಿರುವ ದೇಶವಾಗಲಿದೆ.

ಜಗತ್ತಿಗೆ ಪವಿತ್ರ ಸಂದೇಶ ಸಾರುವ 'ರಂಜಾನ್'



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಹಬ್ಬಗಳೆಂದರೆ ಭಾವೈಕ್ಯತೆ ಬಿತ್ತುವ, ಸೌಹಾರ್ದತೆ ಬೆಳೆಸುವ, ಸಂತಸ ಅರಳಿಸುವ ಎಲ್ಲರೊಂದಾಗಿ ಸಂಭ್ರಮಿಸುವ ಸಂದರ್ಭ. ಎಲ್ಲಾ ಜಾತಿ, ಧರ್ಮಗಳ ಎಲ್ಲಾ ರೀತಿಯ ಹಬ್ಬಗಳ ಆಚರಣೆ–ಆಶಯ ಇದೇ ಆಗಿದೆ. ವಿಶ್ವದೆಲ್ಲೆಡೆ ಮುಸಲ್ಮಾನರು ಅತ್ಯಂತ ಶ್ರದ್ಧಾ ಭಕ್ತಿಗಳಿಂದ ಆಚರಿಸುವ ಪವಿತ್ರವಾದ ಹಬ್ಬ **'ರಂಜಾನ್'** ಕೂಡ ಇಂಥದ್ದೇ ಮಾನವ ಪ್ರೇಮದ ಸದಾಶಯವನ್ನು ಹೊಂದಿದೆ. ರಂಜಾನ್ ಎಂಬುದು ಇಸ್ಲಾಮೀ ಪಂಚಾಂಗದ 9ನೇ ತಿಂಗಳ ಹೆಸರೂ ಹೌದು. ರಂಜಾನನ್ನು ಆಚರಿಸುವವರು ಮುಸಲ್ಮಾನರೇ ಆದರೂ ಕೂಡ ಇತರೇ ಧರ್ಮೀಯರೆಲ್ಲರೂ ಇದರಲ್ಲಿ ಭಾಗವಹಿಸಿ ರಂಜಾನ್ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುವುದನ್ನು ಕಾಣುವುದೇ ಒಂದು ಸಂಭ್ರಮದ ಕ್ಷಣ. ಜಗತ್ತಿನಾದ್ಯಂತ ಆಚರಿಸಲ್ಪಡುವ ರಂಜಾನ್ ಹಬ್ಬದಲ್ಲಿ ರಾಮ ಮತ್ತು ರಹೀಮ ಒಂದಾಗಿ ಶುಭಾಶಯ ಹಂಚಿಕೊಳ್ಳುವ ಹಾಗೂ ರೆಹಮಾನ್ ಮತ್ತು ರಾಬರ್ಟ್ ಸೇರಿ ಶುಭಾಶಯ ವಿನಿಮಯ ಮಾಡಿಕೊಳ್ಳುವ ಸದ್ಭಾವನೆಯ ಸಂತಸವನ್ನು ಇಲ್ಲಿ ಕಾಣಬಹುದು.ಹಾಗಾಗಿ ರಂಜಾನ್‌ಗೆ ಭಾವೈಕ್ಯತೆಯ ಬೆಳಕಿನ ಪ್ರಭಾವಳಿಯೂ ಉಂಟು. ಧರ್ಮ ಯಾವುದಾದರೇನು? ಹಬ್ಬ ಯಾವುದಾದರೇನು? ಒಟ್ಟಾರೆ ಇವೆಲ್ಲವೂ ಪ್ರತಿಪಾದಿಸುವುದು ಮಾನವಕುಲದ ಒಳಿತನ್ನು, ನೆಮ್ಮದಿಯನ್ನು, ಶಾಂತಿಯನ್ನು, ಸಂತಸವನ್ನು, ಸಂಭ್ರಮವನ್ನು ತಾನೆ? ಈ ನಿಟ್ಟಿನಲ್ಲಿ ರಂಜಾನ್ ಸಹ ಎಲ್ಲರಿಗೂ ಒಳಿತು ತರುವ, ಒಂದಾಗಿ ಬಾಳಿ ಎನ್ನುವ, ಸಮಬಾಳು ಸಮಪಾಲಿನ ಅರ್ಥ ತಿಳಿಸುವ ಅಪೂರ್ವ ಹಬ್ಬ!

ಇಮಾನ್, ನಮಾಜ್, ರೋಜಾ, ಜಕಾತ್ ಹಾಗೂ ಹಜ್ ಎಂಬ ಇಸ್ಲಾಂ ಧರ್ಮದ ಪ್ರಮುಖ ಪಂಚತತ್ವಗಳ ಮಹತ್ವ ಹಾಗೂ ಇವುಗಳ ಆಚರಣೆಯಿಂದಾಗುವ ಪ್ರಯೋಜನ ಕುರಿತು ಜನರಲ್ಲಿ ಹೆಚ್ಚು ಅರಿವು ಮೂಡಿಸುವಂಥ ವಿಶೇಷ ಸಂದರ್ಭ ಪವಿತ್ರ ರಂಜಾನ್ ತಿಂಗಳದ್ದಾಗಿದೆ. ಅರ್ಥಾತ್ ಈ ರಂಜಾನ್ ಹಬ್ಬದ್ದಾಗಿದೆ. ನಿರಾಕಾರ ಏಕದೇವೋಪಾಸನೆಯ ಇಮಾನ್ ಮಾನಸಿಕವಾಗಿ ನೆಮ್ಮದಿ ನೀಡಿ ಶಾಂತಿ ಸಮೃದ್ಧಿ ತರುವ ಪ್ರಾರ್ಥನೆ ನಮಾಜ್, ದೈಹಿಕ ಸ್ವಾಸ್ಥ್ಯ–ಮನಶುದ್ಧಿ–ಕಷ್ಟ ಸಹಿಷ್ಣುತೆಗೆ ಸಹಕಾರಿಯಾಗುವ ರೋಜಾ, ಬಡವ–ದೀನ– ಅಶಕ್ತರೆಲ್ಲರಿಗೂ ಈ ಸಮಾಜದೊಳಗೆ ಬದುಕಿ ಬಾಳುವ ಹಕ್ಕು ಇದೆಯೆಂದು ಹೇಳುವ ಜಕಾತ್ ಹಾಗೂ ಜೀವನದಲ್ಲಿ ಒಮ್ಮೆಯಾದರೂ ಪವಿತ್ರ ಸ್ಥಳ



ಇಂದು ಪವಿತ್ರ ರಂಜಾನ್. ಈ ಶುಭ ಸಂದರ್ಭದಲ್ಲಿ ಮುಸ್ಲಿಂ ಬಾಂಧವರಿಗೆ ಶುಭಾಶಯಗಳನ್ನು ಕೋರುತ್ತಾ, ಈ ಒಂದು ವಿಶೇಷ ಲೇಖನವನ್ನು ಪ್ರಕಟಿಸುತ್ತಿದ್ದೇವೆ.

ಕಾಬಾ ದರ್ಶನ ಕಲ್ಪಿಸುವ ಹಜ್ ಯಾತ್ರೆ ಇವು ಮುಸಲ್ಮಾನರು ಆಚರಿಸಬೇಕಾದ ಪಂಚ ಮಹಾಪುಣ್ಯಾತತ್ವಗಳು. ಜಕಾತ್ ಹಾಗೂ ಹಜ್ ಯಾತ್ರೆ ಹೊರತುಪಡಿಸಿ ಉಳಿದ ಮೂರೂ ಆಚರಣೆಗಳು ಎಲ್ಲರಿಗೂ ಕಡ್ಡಾಯ.

ವಿಶೇಷವೆಂದರೆ ರಂಜಾನ್ ಹಬ್ಬ ಆರಂಭವಾಗುವುದೇ ಉಪವಾಸ ವ್ರತದಿಂದ. ಉಪವಾಸವೇ ಇಲ್ಲಿ ಪ್ರಧಾನ, ಅದೂ ಇಡೀ ಒಂದು ತಿಂಗಳು ಪೂರ್ತಿ. ವರ್ಷದ ಹನ್ನೊಂದು ತಿಂಗಳು ನಮ್ಮ ದೇಹ ಮತ್ತು ಮನಸ್ಸಿನಲ್ಲಿ ತುಂಬಿದ ಮಾಲಿನ್ಯವನ್ನು ಒಂದು ತಿಂಗಳು ಉಪವಾಸ ಮಾಡಿ ಶುದ್ಧೀಕರಿಸುವ ಧಾರ್ಮಿಕ ಕ್ರಿಯೆಯಿದು. ಈ ಉಪವಾಸವೆಂದರೆ ಅಂತಿಂಥ ಉಪವಾಸವಲ್ಲ. ಉಗುಳನ್ನೂ ನುಂಗಬಾರದೆನ್ನುತ್ತಾರೆ. ಅಂಥ ಕಟ್ಟುನಿಟ್ಟಿನ ಉಪವಾಸ ವ್ರತವಿದು. ಈ ಉಪವಾಸದ ಹಬ್ಬದ ಹೆಸರೇ ರಂಜಾನ್. ಇದರ ಕಠಿಣ ಆಚರಣೆ ಪ್ರತಿಯೊಬ್ಬ ಮುಸಲ್ಮಾನರಿಗೂ ಒಂದು ಸವಾಲೇ ಸರಿ. ಪುರುಷರು ಮತ್ತು ಮಹಿಳೆಯರೆಲ್ಲರೂ ಎಷ್ಟೇ ಕಷ್ಟವೆನಿಸಿದರೂ ಸಂತಸದಿಂದಲೇ ಇದನ್ನು ಆಚರಿಸುವುದೇ ಒಂದು ವಿಶೇಷ. ರಂಜಾನ್ ಆಚರಣೆಯ ಇಸ್ಲಾಂ ಧರ್ಮದಲ್ಲಿ ನಂಬಿಕೆಯುಳ್ಳವರೆಲ್ಲರೂ ಸರ್ವಶಕ್ತನಾದ ಅಲ್ಲಾಹುನನ್ನು ಈ ಉಪವಾಸ ವ್ರತದ ಮೂಲಕ ಪ್ರಾರ್ಥಿಸುತ್ತಾರೆ. ತನ್ಮೂಲಕ ಅಲ್ಲಾಹುನ ಕರುಣೆಗೆ ಪಾತ್ರರಾಗುತ್ತಾರೆ. ರಂಜಾನ್‌ನ ಕೊನೆಯ ಹತ್ತು ದಿನಗಳಲ್ಲಿ ಒಂದು ದೈವಿಕ ಶಕ್ತಿ ಕಂಡುಬರುತ್ತದೆ.

ಸೂರ್ಯೋದಯಕ್ಕೆ ಮುನ್ನ ಲಘು ಆಹಾರ ಸೇವನೆ (ಸಹರಿ)ಯನ್ನಷ್ಟೇ ಮಾಡಿ ಉಪವಾಸ ವ್ರತ ಆರಂಭಿಸುವ ಉಪವಾಸಿಗರು ಮತ್ತೆ ಏನಾದರೂ ಬಾಯಿಗಿಡಬೇಕೆಂದರೆ ಸೂರ್ಯಾಸ್ತದ ನಂತರವಷ್ಟೆ. ಅಲ್ಲಿಯತನಕ ಇಡೀ ದಿನ ಒಂದು ತೊಟ್ಟು ನೀರು ಸಹ ಅವರಿಗೆ ನಿಷಿದ್ಧ. ದಿನದ ಉಪವಾಸವನ್ನು ಮುಗಿಸುವ ವೇಳೆಯಾದ ಸೂರ್ಯ ಮುಳುಗಿದ ಮುಸ್ಸಂಜೆಯ ಹೊತ್ತಿನಲ್ಲಿ ಎಲ್ಲ ಮುಸ್ಲಿಮರ ಮನೆ ಮತ್ತು ಮಸೀದಿ ಹಾಗೂ ಊರು–ಕೇರಿಗಳ ಅಂಗಳವೆಲ್ಲಾ ಬರೀ ಮೌನ. ಎಲ್ಲರಲ್ಲೂ ಯಾವುದೋ ಒಂದು ದೈವಿಕ ಆಕರ್ಷಣೆಯ ಪ್ರಶಾಂತತೆ. ಪ್ರತಿಯೊಬ್ಬರು ಆಗ ಮಸೀದಿಯ ಮಿನಾರದಿಂದ ಹೊರಡುವ ಬಾಂಗಿನ ಕರೆಗಾಗಿ ಕಾಯುತ್ತಿರುತ್ತಾರೆ. ಆಗ ಎಲ್ಲರ ಕೈನಲ್ಲಿ ಖರ್ಜೂರ ಮತ್ತು ನೀರು ಸಿದ್ಧವಾಗಿರುತ್ತದೆ. ದೈನಂದಿನ ಪ್ರಾರ್ಥನೆ ನಂತರ ಆ ದಿನದ ಉಪವಾಸವನ್ನು ಮುರಿಯುತ್ತಾರೆ. ಹೀಗೆ ಇಡೀ ಮಾಸಪೂರ್ತಿ ಉಪವಾಸ ವ್ರತ ಆಚರಿಸುತ್ತಾರೆ. ಇಸ್ಲಾಮಿನಲ್ಲಿ ಈ ಮಾಸಕ್ಕೆ ಅರ್ಥಾತ್ ರಂಜಾನ್ ತಿಂಗಳಿಗೆ ಬಹಳ ಮಹತ್ವವಿದೆ. ಮುಸ್ಲಿಮರ ಪವಿತ್ರ ಧಾರ್ಮಿಕ ಗ್ರಂಥ ಕುರಾನ್ ಅವತೀರ್ಣಗೊಂಡ ಪುನೀತ ತಿಂಗಳಿದು. ಹಾಗೆಯೇ ಮಾನವಕುಲದ ವಾರ್ಷಿಕ ಬಜೆಟ್‌ನ್ನು ಮಂಜೂರು ಮಾಡುವ ಲೈಲತುಲ್‌ಕದ್ರ್ ಎಂಬ ಪವಿತ್ರ ರಾತ್ರಿಯು ಈ ತಿಂಗಳಲ್ಲಿ ಅಡಕಗೊಂಡಿದೆ.

ಬಾಂಧವರೇ, ಅಲ್ಲಾಹುನ ಪರಮ ಪೂಜ್ಯ ಮಾಸ ನಿಮ್ಮ ಮುಂದಿದೆ. ಇದು ಪವಿತ್ರವಾದ ತಿಂಗಳು. ಪೂಜ್ಯತೆ ಮತ್ತು ಕ್ಷಮತೆ ಹಾಗೂ ಕರುಣೆಗಳ ತಿಂಗಳಿದು. ಈ ತಿಂಗಳು ಪ್ರತಿಯೊಂದು ದಿನಗಳೂ ಪ್ರಾಮುಖ್ಯತೆ ಪಡೆದಿವೆ. ಈ ತಿಂಗಳ ಪ್ರತಿ ಗಂಟೆಯೂ ಅತ್ಯುತ್ತಮ ಗಂಟೆಗಳೇ ಆಗಿವೆ. ಈ ತಿಂಗಳಲ್ಲಿ ನಿಮ್ಮನ್ನು ಅಲ್ಲಾಹನು ತನ್ನ ಅತಿಥಿಗಳಾಗಿರುವಂತೆ ಆಹ್ವಾನಿಸಿರುತ್ತಾನೆ. ನೀವು ಅಲ್ಲಾಹನಿಗೆ ಈ ತಿಂಗಳು ಅತ್ಯಂತ ಹತ್ತಿರದವರಾಗಿರುತ್ತೀರಿ. ನೀವು ತೆಗೆದುಕೊಳ್ಳುವ ಪ್ರತಿ ಉಸಿರೂ ಅಲ್ಲಾಹುನನ್ನು ತಲುಪುತ್ತದೆ. ಈ ಸಂದರ್ಭದಲ್ಲಿ ನಿಮ್ಮ ನಿದ್ರೆಯೂ ಒಂದು ಪವಿತ್ರವಾದ ಪೂಜೆ, ನಿಮ್ಮ ಕೈಂಕರ್ಯಗಳನ್ನು ಅವನು ಮೆಚ್ಚಿಕೊಂಡು ನಿಮ್ಮ ಪ್ರಾರ್ಥನೆಗೆ ತಕ್ಕ ಫಲ ಕೊಡುತ್ತಾನೆ. ಆದ್ದರಿಂದ ಅಲ್ಲಾಹನನ್ನು ಆರೋಗ್ಯಕರ ದೇಹ ಮತ್ತು ಜ್ಞಾನ ತುಂಬಿದ ಹೃದಯವನ್ನು ಕೊಡು ಎಂದು ಪ್ರಾರ್ಥಿಸಿ. ಇದರಿಂದ ನಿಮಗೆ ಉಪವಾಸ ಮಾಡಲು ಹಾಗೂ ಅಲ್ಲಾಹನ ಪರಮ ಪವಿತ್ರ ಕುರಾನ್ ಗ್ರಂಥವನ್ನು ಪಠಿಸಲು ಶಕ್ತಿ ದೊರೆಯುತ್ತದೆ. ಈ ರಂಜಾನ್ ತಿಂಗಳಲ್ಲಿ ಯಾರು ಕರುಣಾಳು ಅಲ್ಲಾಹನ ಕೃಪೆಗೆ ಪಾತ್ರರಾಗುವುದಿಲ್ಲವೋ ಅವರೇ ಪಾಪಿಗಳು. ಉಪವಾಸ ಎಲ್ಲಾ ಕೆಟ್ಟ ಕಾಟಗಳಿಗೂ ಸೂಕ್ತ ರಕ್ಷಣೆ ನೀಡುತ್ತದೆ. ಪ್ರವಾದಿ ಮಹಮ್ಮದರೇ ಹೇಳುವಂತೆ ಪವಿತ್ರ ರಂಜಾನ್‌ನ ಮೂಲ ತತ್ವವಿದು. ಇಸ್ಲಾಂ ಧರ್ಮದ ಪ್ರವರ್ತಕ ಪ್ರವಾದಿ ಮಹಮ್ಮದ್‌ರು ಕೆಡುಕಿನಿಂದ ಸಮಾಜವನ್ನು ಮುಕ್ತಗೊಳಿಸಲು ತಮ್ಮದೇ ಆದ ತತ್ವಾದರ್ಶಗಳ ಒಳಿತಿನ ತಳಹದಿಯ ಮೇಲೆ ಇಸ್ಲಾಂ ಧರ್ಮವನ್ನು ಸ್ಥಾಪಿಸಿದರು. ಈ ಧರ್ಮದ ಅರ್ಥಾತ್ ಈ ಸಮಾಜದ ಪಾವಿತ್ರ್ಯತೆಯನ್ನು ಕಾಪಾಡಲು ಸೂಕ್ತ ವ್ಯಕ್ತಿತ್ವವನ್ನು, ವ್ಯಕ್ತಿಗಳನ್ನು ನಿರ್ಮಿಸಲು ರಂಜಾನ್ ಎಂಬ ಈ ಪವಿತ್ರ ತಿಂಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದೊಂದು ರೀತಿ ಪಾಪ ಕಳೆದು ಪುಣ್ಯ ಗಳಿಸಲು ತರಬೇತುಗೊಳಿಸುವ ಒಂದು ತಿಂಗಳ ಕಾರ್ಯಾಗಾರವೆನ್ನಬಹುದು. ಇಲ್ಲಿ ಉಪವಾ ಸವೇ ಬ್ರಹ್ಮಾಸ್ತ್ರ. ಇದರಿಂದ ಏನನ್ನು ಬೇಕಾದರೂ ಗೆಲ್ಲಬಹುದು. ಎಂಥಾ ಪಾಪಗಳನ್ನೂ ದಹಿಸಬಹುದೆಂಬುದು ರಂಜಾನ್ ನಲ್ಲಡಗಿ ರುವ ಹೂರಣ. ಅಷ್ಟೇ ಅಲ್ಲ ಎಂಥಾ ಕಾಠಿಣ್ಯ ವನ್ನೂ ಕಾರುಣ್ಯಗೊಳಿಸುವ ಪವಾಡ ಸದೃಶ ಇಲ್ಲಿದೆ. ಉಪವಾಸ ವ್ರತಾನುಷ್ಠಾನಕ್ಕೆ ಅಲ್ಲಾಹು ಆಯ್ಕೆ ಮಾಡಿರುವ ಈ ತಿಂಗಳಿಗೆ ರಂಜಾನ್ ಹೆಸರು ಬಂದಿರುವುದು ಕೂಡ ಬಹು ಅರ್ಥಪೂರ್ಣವಾಗಿದೆ.

ರಂಜಾನ್ ಹಬ್ಬ, ದಾನದ ಹಬ್ಬವೂ ಹೌದು. ರಂಜಾನ್ ಆಚರಣೆಯ ಸಂದರ್ಭದಲ್ಲಿ ಇರುವವರು ಇಲ್ಲದವರಿಗೆ ಸಾಕಷ್ಟು ದಾನ–ಧರ್ಮ ಮಾಡುತ್ತಾರೆ. ಹಣವಂತರಾದ ಶ್ರೀಮಂತ ಮುಸ್ಲಿಮರು ಇಂತಿಷ್ಟು ಮೊತ್ತದ ಹಣವನ್ನು ಬಡವರಿಗೆ ಅಂದು ಅಥವಾ ಹಿಂದಿನ ದಿನ ಕೊಡುವಂತೆ ಪ್ರವಾದಿ ಮಹಮ್ಮದರೇ ಆಜ್ಞಾಪಿಸಿದ್ದಾರೆ. ಇದನ್ನು ಸದಾಕಾ ಉಲ್ ಫಿತರ್ (ಫಿತ್ರಾ) ಎನ್ನುತ್ತಾರೆ. ಈ ಹಣ ಧಾನ್ಯದ ಬೆಲೆಯ ಮೇಲೆ ಅವಲಂಬಿಸಿರುತ್ತದೆ. ಈ ಹಣದ ಬಹುಭಾಗವನ್ನು ಹಬ್ಬದ ದಿನ ಬಡವರಿಗಾಗಿ ಖರ್ಚು ಮಾಡಲಾಗುವುದು. ಉಳಿದುದನ್ನು ಇತರೆ ಕಷ್ಟಕಾಲದಲ್ಲಿ ಬಡವರ ಸಹಾಯಕ್ಕೆ ಬಳಸಲಾಗುತ್ತದೆ.

ಒಟ್ಟಾರೆ ರಂಜಾನ್ ಜಗತ್ತಿನ ಆಕರ್ಷಣೆಯ ಸಾತ್ವಿಕ ಭಾವದ ಹಬ್ಬ. ಹಾಗೆಯೇ ಉಪವಾಸದ ಮಹತ್ವವನ್ನು ಜಗತ್ತಿಗೇ ಸಾರುವ ಪವಿತ್ರ ಮಾಸವೂ ಹೌದು. ಇಂಥ ರಂಜಾನ್ ಎಲ್ಲರಿಗೂ ಒಳಿತನ್ನುಂಟು ಮಾಡಲೆಂಬುದೇ ನಮ್ಮ ಆಶಯ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರ ಬರಲು ಮೈಸೂರು ಭಾಗದಲ್ಲಿ ಹೆಚ್ಚು ಸೀಟು ಗೆಲ್ಲಿಸಿ

ಮೈಸೂರಲ್ಲಿ ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಡಿಜಿಟಲ್ ಕಾರ್ಯಕರ್ತರಿಗೆ ಕರೆ

ಮೈಸೂರು, ಏ.21(ಆರ್‌ಕೆ)–ರಾಜ್ಯದಲ್ಲಿ ಬಿಜೆಪಿ ಸರ್ಕಾರ ಮತ್ತೊಮ್ಮೆ ಅಧಿಕಾರಕ್ಕೆ ಬರಬೇಕಾದರೆ ಮೈಸೂರು ಭಾಗದಲ್ಲಿ ಅತೀ ಹೆಚ್ಚು ಸೀಟುಗಳನ್ನು ಗೆಲ್ಲಿಸಿಕೊಡಿ ಎಂದು ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್, ಇಂದಿಲ್ಲಿ ಕಾರ್ಯಕರ್ತರಿಗೆ ಟಾಸ್ಕ್ ನೀಡಿದ್ದಾರೆ.

ಮೈಸೂರಿನ ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ಇಂದು ಆಯೋಜಿಸಿದ್ದ ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ, ಹಾಸನ ಜಿಲ್ಲೆಗಳ ಬಿಜೆಪಿ ಡಿಜಿಟಲ್ ಕಾರ್ಯಕರ್ತರ ಸಮ್ಮೇಳನ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಉಡುಪಿ, ಚಿಕ್ಕಮಗಳೂರಲ್ಲಿ ತಲಾ 5, ಮಂಗಳೂರಲ್ಲಿ 7, ಕೊಡಗಿನಲ್ಲಿ 2 ಸೀಟುಗಳನ್ನು ಗೆದ್ದಿದ್ದೇವೆ. ಬಿಜೆಪಿ ಈಗ ಬಹುಮತ ಪಡೆಯಬೇಕಾದರೆ ಮೈಸೂರು ಭಾಗದಲ್ಲಿ ಹೆಚ್ಚು ಮಂದಿಯನ್ನು ಆರಿಸಬೇಕು ಎಂದರು.

ನಮ್ಮ ನಾಯಕರಾದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇನ್ನೂ ಚುನಾವಣಾ ಪ್ರಚಾರಕ್ಕಿಳಿದಿಲ್ಲ. ಆಗಲೇ ವಿವಿಧ ಸಮೀಕ್ಷೆಗಳು ಬಿಜೆಪಿಗೆ 103 ಸ್ಥಾನ ಸಿಗಲಿದೆ ಎಂದು ಹೇಳಿವೆ. ಪ್ರಧಾನಿಗಳು ಪ್ರಚಾರಕ್ಕೆ ಬಂದ ಮೇಲೆ ಸಂಪೂರ್ಣ ಬಹುಮತ ಬರಲಿದೆ. ಕಾಂಗ್ರೆಸ್ 130 ಸೀಟು ಗೆಲ್ಲುತ್ತದೆಂದು ಹೇಳಿರುವ ಸಂಸ್ಥೆಗಳ ಹೆಸರನ್ನೇ ನಾವು ಕೇಳಿಲ್ಲ ಎಂದ ಅವರು, 2018ರ ಚುನಾವಣೆಯಲ್ಲೂ ಕಾಂಗ್ರೆಸ್ 130 ಸೀಟು ಗೆಲ್ಲುತ್ತದೆ ಎಂದು ಸಮೀಕ್ಷೆಗಳು ಹೇಳಿದ್ದವು. ಆದರೆ ಕಾಂಗ್ರೆಸ್ 79 ಸ್ಥಾನಕ್ಕೆ ತೃಪ್ತಿ ಪಡಬೇಕಾಯಿತು ಎಂದರು.

ಯಕ್ಷಗಾನ ಪ್ರದರ್ಶನದ ಆರಂಭದಲ್ಲಿ ಬಾಲಗೋಪಾಲನ ನೃತ್ಯವಿರುವಂತೆ ಕರ್ನಾಟಕದ ಚುನಾವಣೆಯಲ್ಲಿ ಈಗ ಬಾಲಗೋಪಾಲನ ನೃತ್ಯ ನಡೆಯುತ್ತಿದೆ. ಏಪ್ರಿಲ್ 29ರ ನಂತರ ಬಣ್ಣದ ವೇಷ ಧರಿಸಿ ಯಜಮಾನರಾದ ನರೇಂದ್ರ ಮೋದಿ ಅವರು ರಂಗ ಪ್ರವೇಶ ಮಾಡುತ್ತಾರೆ. ನಂತರ ಬಿಜೆಪಿ ಸ್ಥಾನಗಳು 113, 123, 133 ದಾಟಬಹುದು. ಹಾಗೆಂದ ಮಾತ್ರಕ್ಕೆ ನಾವೆಲ್ಲಾ ಮೈಮರೆಯಬಾರದು. ನಮ್ಮೆಲ್ಲರ ಚಿತ್ತ ಸಂಪೂರ್ಣ ಬಹುಮತದತ್ತ ಎಂದು ಸಂಕಲ್ಪ ಮಾಡಬೇಕು ಎಂದು ಅವರು ಸಲಹೆ ನೀಡಿದರು.

ಮರಳಿ ವರುಣಾಗೆ ಬಂದಿದ್ದಾರೆ: ನಮ್ಮ ಮುಖ್ಯಮಂತ್ರಿಗಳಿಗೆ ಎಲ್ಲಿ ಸ್ಪರ್ಧಿಸಬೇಕೆಂಬ ಗೊಂದಲವಿರಲಿಲ್ಲವಾದ್ದರಿಂದ ಸಿಗ್ಗಾಂವಿಯಲ್ಲಿ ಸ್ಪರ್ಧಿಸಿದ್ದಾರೆ. ಬಿಜೆಪಿಯಲ್ಲಿ ಒಳೇಟು ಕೊಡುವುದಿಲ್ಲ ಎಂಬ ನಂಬಿಕೆ ಇದೆ ಎಂದ ಸಂತೋಷ್, ಆದರೆ, ಮೈಸೂರು ಯಜಮಾನರು ಬಾದಾಮಿಯಿಂದ ಕೋಲಾರಕ್ಕೆ ಹೋಗಿ ಮರಳಿ ವರುಣಾಗೆ ಬಂದಿದ್ದಾರೆ ಎಂದು ಸಿದ್ದರಾಮಯ್ಯರ ಬಗ್ಗೆ ಪರೋಕ್ಷವಾಗಿ ವ್ಯಂಗ್ಯವಾಡಿದರು.

ತಂದೆಗಾಗಿ ಮಗ ಸೀಟು ತ್ಯಾಗ ಮಾಡಿದರೆಂದು ಸಿದ್ದರಾಮಯ್ಯ ಜೊತೆಗಿದ್ದು ಸಂಬಳ ಪಡೆದ ಪತ್ರಕರ್ತರೊಬ್ಬರು ಬರೆದುಕೊಂಡಿದ್ದಾರೆ. ಏನು ತ್ಯಾಗ ಮಾಡಿದ? ಒಲಿಂಪಿಕ್ಸ್, ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಪದಕ ಗೆದ್ದಿದ್ದರೆ, ಅಥವಾ ದೇಶ ಕಟ್ಟಿದ್ದರೆ ಎಂದು ಪ್ರಶ್ನಿಸಿದ ಅವರು, ಕೆ.ಎಸ್.ಈಶ್ವರಪ್ಪ, ಎಸ್.ಎ.ರಾಮದಾಸ್, ರಘುಪತಿ ಭಟ್ ಮಾಡಿದ್ದು ತ್ಯಾಗ ಎಂದು ಸಿದ್ದರಾಮಯ್ಯ ವಿರುದ್ಧ ಟೀಕಾಪ್ರಹಾರ ನಡೆಸಿದರು.

ಅಯ್ಯೋ ಎನ್ನಿಸುತ್ತಿದೆ: ಕನ್ನಡ ಬಾರದ ಮೊಮ್ಮಗನನ್ನು ಸಿದ್ದರಾಮಯ್ಯ ರಾಜಕೀಯಕ್ಕೆ ಪರಿಚಯ ಮಾಡಿಸುತ್ತಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರ ಬಗ್ಗೆ ಅಯ್ಯೋ ಅನ್ನಿಸುತ್ತದೆ. ಆದರೆ ಬಿಜೆಪಿ 48 ಸಾಮಾನ್ಯ ಕಾರ್ಯಕರ್ತರಿಗೆ ಟಿಕೆಟ್ ಕೊಟ್ಟಿದೆ. ಪಕ್ಷ ಸಂಘಟನೆ ಮಾಡಿದವರಿಗೆ ಫಲ ಸಿಗುತ್ತದೆ ಎಂಬುದಕ್ಕೆ ಇದೇ ನಿದರ್ಶನ ಎಂದ ಸಂತೋಷ್ ಅವರು, ಹುಡುಕಾಡಿದರೂ ಸುರಕ್ಷಿತ ಕ್ಷೇತ್ರ ಸಿಗಲಿಲ್ಲ, ಮರ್ಯಾದೆ ಹಾಳಾಗುತ್ತದೆ ಎಂದು ಮಗ ಕ್ಷೇತ್ರ ಬಿಟ್ಟುಕೊಟ್ಟಿದ್ದಾರೆಯೇ ಹೊರತು, ಅದನ್ನು ತ್ಯಾಗ ಎನ್ನಲಾಗದು ಎಂದರು.

ಅಭಿವೃದ್ಧಿ ಚಕ್ರಕ್ಕೆ ಕಲ್ಲು ಹಾಕಿದರು: ಅಭಿವೃದ್ಧಿ ಚಕ್ರಕ್ಕೆ ಕಲ್ಲು ಹಾಕಿದವರು, ಪಿಎಫ್‌ಐ ನಿಷೇಧಿಸಿದ್ದನ್ನು ವಿರೋಧಿಸಿದವರು, ಬಿಜೆಪಿ ಕೊಟ್ಟ ಮೀಸಲಾತಿ ಹಿಂಪಡೆಯುತ್ತೇವೆಂದು ಹೇಳುತ್ತಿರುವ ಕಾಂಗ್ರೆಸ್ಸಿಗರನ್ನು ವಿಧಾನಸೌಧಕ್ಕೆ ಹೋಗಲು ಬಿಡಬೇಕಾ? ವರುಣದಲ್ಲಿ ವಿ.ಸೋಮಣ್ಣ ಸ್ಪರ್ಧಿಸುತ್ತಿದ್ದಂತೆಯೇ ಸಿದ್ದರಾಮಯ್ಯ ಧನಿ ಅಡಗಿದೆ ಎಂದು ಲೇವಡಿ ಮಾಡಿದ ಸಂತೋಷ್ ಅವರು, ಮುಂದಿನ ಲೋಕಸಭಾ ಚುನಾವಣೆಗೆ ಕರ್ನಾಟಕವನ್ನು ಎಟಿಎಂ ಮಾಡಿಕೊಳ್ಳುತ್ತಿರುವವರಿಗೆ ಅಧಿಕಾರ ಹೋಗದಂತೆ ತಡೆಯಬೇಕು ಎಂದರು.

ನಮೋ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ: ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಕನಿಷ್ಠ 5 ಸಾವಿರ ಕಾರ್ಯಕರ್ತರು ನಮೋ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ. ಮತಗಟ್ಟೆವಾರು ವಾಟ್ಸ್ ಅಪ್ ಗ್ರೂಪ್ ರಚಿಸಿ ಆರೋಗ್ಯಕರ ಯುದ್ಧಕ್ಕೆ ಸನ್ನದ್ಧರಾಗಿ, ಚುನಾವಣೆಯ ವಿಜಯ ರಥ ಎಳೆಯಿರಿ. ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಂಡು ಸರ್ಕಾರ, ಪಕ್ಷದ ಕೆಲಸ, ಯೋಜನೆಗಳನ್ನು ಜನರಿಗೆ ತಿಳಿಸಿ ಎಂದು ಅವರು ತಿಳಿಸಿದರು. ಸಂಸದ ಪ್ರತಾಪ್ ಸಿಂಹ, ವಿಧಾನ ಪರಿಷತ್ ಸದಸ್ಯರಾದ ಛಲವಾದಿ ನಾರಾಯಣಸ್ವಾಮಿ, ಮುನಿರಾಜು ಗೌಡ, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಸಾಮಾಜಿಕ ಜಾಲತಾಣದ ಸಂಚಾಲಕ ವಿಕಾಸ್, ಬಿಜೆಪಿ ರಾಜ್ಯ ಕಾರ್ಯದರ್ಶಿ ಜಗದೀಶ್, ಹಿರೇಮನಿ, ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಹಾಗೂ ಇತರರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ಶುಕ್ರವಾರ ಏರ್ಪಡಿಸಿದ್ದ ಬಿಜೆಪಿ ಡಿಜಿಟಲ್ ಕಾರ್ಯಕರ್ತರ ಸಮ್ಮೇಳನವನ್ನು ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಉದ್ಘಾಟಿಸಿದರು. ಸಂಸದ ಪ್ರತಾಪ್ ಸಿಂಹ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ನಾನು ಯಾರಿಗೂ ಪ್ರತಿಸ್ಪರ್ಧಿಯಾಗಲು ಬಯಸುವುದಿಲ್ಲ

ಮೈಸೂರು, ಏ.21(ಆರ್‌ಕೆ)–ಸಿಕ್ಕಾಪಟ್ಟೆ ಲೀಡರ್‌ಗಳಾಗಿದ್ದಾರೆ. ನಾನು ಯಾರಿಗೂ ಪ್ರತಿಸ್ಪರ್ಧಿಯಾಗಲು ಬಯಸುವುದಿಲ್ಲ ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ತಿಳಿಸಿದ್ದಾರೆ.

ಮೈಸೂರಿನ ರಿಯೋ ಮೆರಿಡಿಯನ್‌ನ ಹೋಟೆಲ್‌ನಲ್ಲಿ ಇಂದು ಆಯೋಜಿಸಿದ್ದ ಬಿಜೆಪಿ ಡಿಜಿಟಲ್ ಕಾರ್ಯಕರ್ತರ ಸಮ್ಮೇಳನದಲ್ಲಿ ಪಾಲ್ಗೊಳ್ಳಲೆಂದು ಆಗಮಿಸಿದ್ದ ಅವರು ಮಾಧ್ಯಮ ಪ್ರತಿನಿಧಿಗಳಿಗೆ ಮಾರ್ಮಿಕವಾಗಿ ಪ್ರತಿಕ್ರಿಯಿಸಿ, ರಾಜ್ಯದಲ್ಲಿ ಈಗ ಸಿಕ್ಕಾಪಟ್ಟೆ ಲೀಡರ್‌ಗಳಾಗಿದ್ದಾರೆ. ನಾನು ಯಾರಿಗೂ ಪ್ರತಿಸ್ಪರ್ಧಿಯಲ್ಲ ಎಂದರು.

ತಮ್ಮ ವಿರುದ್ಧ ಹರಿದಾಡುತ್ತಿರುವ ಸುದ್ದಿ ಬಗ್ಗೆ ಸ್ಪಷ್ಟನೆ ನೀಡಲು ನಿರಾಕರಿಸಿದರಾದರೂ, ನನ್ನನ್ನು ಮಾತನಾಡಿಸಲು ಮಾಧ್ಯಮದವರು ನೂರು ಬಾರಿ ಪ್ರಯತ್ನ ಮಾಡಿದ್ದಾರೆ. ನಾನು ಮಾತನಾಡಿಲ್ಲ, ಮಾತನಾಡುವುದೂ ಇಲ್ಲ. ನಮ್ಮಲ್ಲಿ ಮಾತನಾಡಲು ಪ್ರತಾಪ್ ಸಿಂಹರಂತಹವರಿದ್ದಾರೆ, ಅವರು ಮಾತನಾಡಲಿ, ನಾನು ಮಾತನಾಡಿ ಪ್ರತಿಸ್ಪರ್ಧಿ ಏಕಾಗಲೀ ಎಂದಷ್ಟೇ ಹೇಳಿ ಅವರು ಸಮ್ಮೇಳನಕ್ಕೆ ತೆರಳಿದರು.

ಜಾತಿವಾದಿ ಕಾಂಗ್ರೆಸ್, ಜೆಡಿಎಸ್ ಅನ್ನು ಮಟ್ಟಹಾಕಿ

- ನಾವೆಲ್ಲಾ ಮೋದಿ ಅಭಿಮಾನಿಗಳೇ ಹೊರತು ಜಾತಿವಾದಿಗಳಲ್ಲ
- ಬಿಜೆಪಿ ಡಿಜಿಟಲ್ ಕಾರ್ಯಕರ್ತರಿಗೆ ಸಂಸದ ಪ್ರತಾಪ್‌ಸಿಂಹ ಕರೆ

ಮೈಸೂರು, ಏ.21(ಆರ್‌ಕೆ)–ಜಾತಿ ವಾದಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷವನ್ನು ಮಟ್ಟಹಾಕಬೇಕು ಎಂದು ಸಂಸದ ಪ್ರತಾಪ್ ಸಿಂಹ ಬಿಜೆಪಿ ಕಾರ್ಯ ಕರ್ತರಿಗೆ ಇಂದಿಲ್ಲಿ ಕರೆ ನೀಡಿದ್ದಾರೆ. ಮೈಸೂರಿನ ರಿಯೋ ಮೆರಿ ಡಿಯನ್ ಹೋಟೆಲ್‌ನಲ್ಲಿ ಆಯೋಜಿಸಿದ್ದ ಬಿಜೆಪಿ ಡಿಜಿಟಲ್ ಕಾರ್ಯಕರ್ತರ ಸಮ್ಮೇ ಳನದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ಪ್ರತ್ಯಕ್ಷವಾಗಿ ಚುನಾವಣೆ ಎದು ರಿಸಲಾರದ ಕಾಂಗ್ರೆಸ್, ಬಿಜೆಪಿ ವಿರುದ್ಧ ಆರೋಪಗಳನ್ನು ಮಾಡುತ್ತಾ ಹಿಂಬಾ ಗಿಲ ರಾಜಕೀಯ ಮಾಡುತ್ತಿವೆ. ಅಂತಹ ಜಾತಿವಾದಿ ಪಕ್ಷವನ್ನು ಮಟ್ಟಹಾಕಿ. ನಾವೆಲ್ಲಾ ಮೋದಿ ಅಭಿಮಾನಿಗಳೇ ಹೊರತು ಜಾತಿವಾದಿಗಳಲ್ಲ ಎಂಬುದನ್ನು ಸಾಬೀತು ಪಡಿಸಬೇಕು ಎಂದರು.

ಯಾರು ಯಾರಿಗೆ ಬೇಕಾದರೂ ಬೈದು ವಿಡಿಯೋ ಮಾಡಬಹುದಾಗಿದೆ. ಸತ್ಯಕ್ಕಿಂತ ಕಚ್ಚಾ ವಸ್ತುಗಳೇ ಈಗ ಜನರಿಗೆ ತಲುಪುತ್ತಿವೆ. ಸೋಷಿಯಲ್ ಮೀಡಿಯಾ ದಲ್ಲಿ ಪಾಸಿಟಿವ್–ನೆಗೆಟಿವ್ ಅಂಶಗಳೆರಡೂ ಹೊರ ಬರುತ್ತಿವೆ. ಆದರೆ ಕಾರ್ಯಕರ್ತರು ಬಿಜೆಪಿ ಸರ್ಕಾರದ ಸಾಧನೆಗಳನ್ನು ಬಿತ್ತರಿಸಬೇಕು. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ರಸ್ತೆ ದಕ್ಷಿಣ ಭಾರತದ ಮೊದಲ ಅತೀ ದೊಡ್ಡ ಯೋಜನೆ ಎಂಬು ದನ್ನು ಜನರಿಗೆ ತಿಳಿಸಿ ಎಂದು ನುಡಿದರು.

ಸೋಮಣ್ಣಗೂ ವರುಣಗೂ ಏನು ಸಂಬಂಧ ಎನ್ನುವ ಸಿದ್ದರಾಮಯ್ಯಗೂ ಬಾದಾಮಿಗೂ ಏನ್ ಸಂಬಂಧ? ಇಟಲಿಯ ಸೋನಿಯಾ ಗಾಂಧಿಗೂ ಬಳ್ಳಾರಿಗೂ ಏನ್ ಸಂಬಂಧ? ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಮಾತೆತ್ತಿದರೆ 10 ಕೆಜಿ ಅಕ್ಕಿ ಕೊಡುತ್ತೇವೆ ಅಂತಿದ್ದೀರಲ್ಲಾ, ಸಿದ್ದರಾಮನಹುಂಡಿ ಗದ್ದೆಯಲ್ಲಿ ಬೆಳೆದು ಕೊಡುತಿದ್ರಾ ಎಂದು ವ್ಯಂಗ್ಯವಾಡಿದರು.

ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆ ಬಗ್ಗೆ ವ್ಯಂಗ್ಯವಾಡಿದ ಅವರು, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಕೆ.ಜೆ.ಜಾರ್ಜ್ ಅವರು ದುಡಿದು ಅನ್ನ ತರಲ್ಲ. ಸರ್ಕಾರದಿಂದ ಕೊಟ್ಟರೆ ಭಾರತವು ಶ್ರೀಲಂಕಾ, ಪಾಕಿಸ್ತಾನದಂತಾಗುತ್ತದೆ ಎಂದು ಪ್ರತಾಪ್‌ಸಿಂಹ ಇದೇ ಸಂದರ್ಭ ನುಡಿದರು. ವರುಣ ಕ್ಷೇತ್ರದಲ್ಲಿ ಗ್ರಾಮಸ್ಥ ರೊಂದಿಗಿನ ಮಾತಿನ ಚಕಮಕಿ ಬಗ್ಗೆ ಪ್ರಸ್ತಾಪಿಸಿದ ಅವರು, ಕಾಂಗ್ರೆಸ್ ಕಮಂಗಿ ಗಳಿಂದ ಪ್ರತಾಪ್ ಸಿಂಹಗೆ ತರಾಟೆ ಎಂದು ಹಬ್ಬಿಸಲಾಗುತ್ತಿದೆ. ನಮಗೂ ಎದುರಿಸುವ ಶಕ್ತಿ ಇದೆ. 1950ರಲ್ಲಿ ಡಾ.ಅಂಬೇಡ್ಕರ್ ತಂದ ಹೆಣ್ಣು ಮಕ್ಕಳಿಗೆ ಆಸ್ತಿ ಹಕ್ಕು ಕಾಯ್ದೆ ಯನ್ನು ನೆಹರು ಪಾಸಾಗದಂತೆ ನೋಡಿ ಕೊಂಡಾಗ ಇವರ್‍ಯಾರೂ ಮಾತಾಡಲಿಲ್ಲ ಎಂದು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

ಮೈಸೂರು–ಬೆಂಗಳೂರು ಹೆದ್ದಾರಿಯನ್ನು ನಾನೇ ಹೇಳಿ ಮಂಡ್ಯದಲ್ಲೇ ಉದ್ಘಾಟನೆ ಮಾಡಿಸಿದೆ. ಕಾರ್ಯಕ್ರಮ ತಡೆಯಲು ಸಾಕಷ್ಟು ಪ್ರಯತ್ನಪಟ್ಟರು. ಅಂದೇ ರಾಹುಲ್‌ಗಾಂಧಿ ಕಾರ್ಯಕ್ರಮ ಇಟ್ಟುಕೊಂಡರು. ಆದರೆ ಮಂಡ್ಯ ಜನ ಅದಕ್ಕೆ ಸೊಪ್ಪು ಹಾಕಲಿಲ್ಲ ಎಂದು ಪ್ರತಾಪ್ ಸಿಂಹ ನುಡಿದರು.

ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪರಿಗೆ ಕರೆ ಮಾಡಿದ ಪ್ರಧಾನಿ ಮೋದಿ



ಶಿವಮೊಗ್ಗ: ಚುನಾವಣಾ ರಾಜಕೀಯಕ್ಕೆ ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ ನಿವೃತ್ತಿ ಘೋಷಿಸಿದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಕರೆ ಮಾಡಿ ಧನ್ಯವಾದ ಹೇಳಿದ್ದಾರೆ. ಕೆ.ಎಸ್. ಈಶ್ವರಪ್ಪ ಅವರ ನಡೆಯನ್ನು ಶ್ಲಾಘಿಸಿದ ಪ್ರಧಾನಿ ಮೋದಿ, ಪಕ್ಷ ಸದಾ ನಿಮ್ಮೊಂದಿಗೆ ಇರುತ್ತದೆ ಎಂದು ಭರವಸೆ ನೀಡಿದ್ದಾರೆ.

ಪ್ರಧಾನಿ ಮೋದಿ ಅವರ ಕರೆ ತೀವ್ರ ಕುತೂಹಲ ಮೂಡಿಸಿದೆ ಈಶ್ವರಪ್ಪನವರದು ಪ್ರಬುದ್ಧ ನಡೆ ಎಂದು ಮೋದಿ ಶ್ಲಾಘಿಸಿದ್ದಾರೆ. ಪ್ರಧಾನಿಯವರೇ ಕರೆ ಮಾಡಿದ್ದಕ್ಕೆ ಕೃತಜ್ಞತೆ ಸಲ್ಲಿಸಿದ ಈಶ್ವರಪ್ಪ, ನಿಮ್ಮ ಆಶೀರ್ವಾದದೊಂದಿಗೆ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವುದಾಗಿ ಭರವಸೆ ನೀಡಿದ್ದಾರೆ. ಈಶ್ವರಪ್ಪನವರು ಚುನಾವಣಾ ರಾಜಕೀಯದಿಂದ ಸ್ವಯಂ ನಿವೃತ್ತಿ ಘೋಷಿಸಿ ಪಕ್ಷದ ಕುರಿತಾಗಿ ತಮ್ಮ ಬದ್ಧತೆಯನ್ನು ತೋರಿಸಿದ ಹಿನ್ನೆಲೆಯಲ್ಲಿ ನರೇಂದ್ರ ಮೋದಿಯವರೇ ದೂರವಾಣಿ ಕರೆ ಮಾಡಿ. ಈಶ್ವರಪ್ಪನವರ ಪ್ರಬುದ್ಧ ನಡೆಯನ್ನು ಪ್ರಶಂಸಿಸಿದ್ದು, ಪಕ್ಷ ಸದಾ ನಿಮ್ಮ ಜೊತೆ ಇದೆ ಎಂದು ಭರವಸೆ ನೀಡಿದ್ದಾರೆ.

ನಾನು ಪಕ್ಷದ ಸೂಚನೆ ಪಾಲಿಸುವ ಕಾರ್ಯಕರ್ತ. ಪಕ್ಷ ನನ್ನನ್ನು ರಾಜ್ಯ ಉಪಮುಖ್ಯಮಂತ್ರಿ ಹುದ್ದೆವರೆಗೆ ತೆಗೆದುಕೊಂಡು ಹೋಗಿದೆ. ನಾನು ಸಂಘಟನೆ ಕೆಲಸ ಮುಂದುವರೆಸುತ್ತೇನೆ ಎಂದು ಈಶ್ವರಪ್ಪ ಹೇಳಿದ್ದಾರೆ.



ಮೋದಿ ರಾಜ್ಯಕ್ಕೆ ಬಂದಾಗ ಭೇಟಿಯಾಗ್ತೀನಿ ಅಂದ್ರು: ಮೋದಿ ಫೋನ್ ಮಾಡಿದ್ದ ಬಗ್ಗೆ ಮಾಧ್ಯಮದವರೊಂದಿಗೆ ಈಶ್ವರಪ್ಪ ಮಾತನಾಡಿ, ಪಕ್ಷ ಸದಾ ನಿಮ್ಮ ಜೊತೆ ಇದೆ ಎಂದು ಮೋದಿ ಭರವಸೆ ನೀಡಿದ್ದಾರೆ. ಮೋದಿಯವರು ಬೆಳಗ್ಗೆ ಕಾಲ್ ಮಾಡಿದಾಗ ನನಗೆ ಆಶ್ಚರ್ಯ ಆಯಿತು, ಮೋದಿ ಹೀಗೆ ಸಾಮಾನ್ಯ ಕಾರ್ಯಕರ್ತರನ್ನು ಗುರುತಿಸುತ್ತಿರುವುದು ಸಂತೋಷವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಪಕ್ಷದಲ್ಲಿ ಶಿಸ್ತು ಪಾಲನೆ ಮಾಡಿದ್ದಕ್ಕೆ ಮೋದಿ ಸಂತಸ ವ್ಯಕ್ತಪಡಿಸಿದ್ದು, ರಾಜ್ಯಕ್ಕೆ ಬಂದ ಸಮಯದಲ್ಲಿ ಭೇಟಿಯಾಗುವುದಾಗಿ ತಿಳಿಸಿದ್ದಾರೆ. ಅಲ್ಲದೇ ರಾಜ್ಯದಲ್ಲಿ ಬಿಜೆಪಿ ಸರಕಾರ ಮತ್ತೆ ಅಧಿಕಾರಕ್ಕೆ ಬರಲು ಮೋದಿ ಸೂಚನೆ ನೀಡಿದ್ದಾರೆ ಎಂದು ಹೇಳಿದರು.

ಶಿವಮೊಗ್ಗದಲ್ಲಿ ನಾವು ಗೆಲ್ಲುತ್ತೇವೆ. ನನ್ನಂತಹ ಸಾಮಾನ್ಯ ಕಾರ್ಯಕರ್ತನಿಗೆ ನೀವು ಕರೆ ಮಾಡಿದ್ದು ಬಹಳ ಖುಷಿ ಆಗಿದೆ ಎಂದು ಮೋದಿಯವರಿಗೆ ಪ್ರತಿಕ್ರಿಯಿಸಿದ್ದೇನೆ ಎಂದು ತಿಳಿಸಿದ್ದಾರೆ.

ಡಿ.ಕೆ.ಶಿವಕುಮಾರ್ ನಾಮಪತ್ರ ಸ್ವೀಕೃತಿ

ಕರಗಿತು ಕಾಂಗ್ರೆಸ್‌ನಲ್ಲಿ ಆವರಿಸಿದ್ದ ಆತಂಕದ ಕಾರ್ಮೋಡ



ಬೆಂಗಳೂರು, ಏ.21(ಕೆಎಂಶಿ)– ತೀವ್ರ ಕುತೂಹಲ ಕೆರಳಿಸಿದ್ದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ನಾಮಪತ್ರ ಕ್ರಮಬದ್ಧವಾಗಿದೆ. ಇದರಿಂದ ನಾಮಪತ್ರ ತಿರಸ್ಕಾರಗೊಳ್ಳುವ ಆತಂಕದಲ್ಲಿದ್ದ ಡಿ.ಕೆ.ಶಿವಕುಮಾರ್‌ಗೆ ಈಗ ನಿರಾಳವಾಗಿದೆ. ಕನಕಪುರ ಕ್ಷೇತ್ರದ ನಾಮಪತ್ರಗಳ ಪರಿಶೀಲನೆ ನಡೆಸಿದ ಚುನಾವಣಾಧಿಕಾರಿಗಳು ಶಿವಕುಮಾರ್ ಸಲ್ಲಿಸಿದ್ದ ನಾಮಪತ್ರವು ಕ್ರಮಬದ್ಧವಾಗಿದೆ ಎಂದು ಹೇಳಿದ್ದಾರೆ.

ಹೀಗಾಗಿ ಅವರ ಚುನಾವಣೆ ಸ್ಪರ್ಧೆಯ ಬಗ್ಗೆ ಇದ್ದ ಊಹಾಪೋಹಗಳಿಗೆ ತೆರೆ ಬಿದ್ದಿದೆ. ಶಿವಕುಮಾರ್ ಮಾತನಾಡಿ, ನನ್ನ ಅಧ್ಯಕ್ಷತೆಯಲ್ಲಿ ಬಿಜೆಪಿ ಸರ್ಕಾರದ ವಿರುದ್ಧ ದೊಡ್ಡ ಮಟ್ಟದ ಹೋರಾಟ ನಡೆದಿದ್ದು, ರಾಜಕೀಯದಿಂದ ನನ್ನನ್ನು ದೂರಮಾಡಲು ಷಡ್ಯಂತ್ರ ನಡೆಯುತ್ತಿದೆ ಎಂದು ಆರೋಪಿಸಿದ್ದರು. ಇದಕ್ಕಾಗಿ ಅಧಿಕಾರಿಗಳ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಈ ಬಗ್ಗೆ ನಮಗೆ ಮಾಹಿತಿ ಬಂದಿರುವ ಕಾರಣ ಮುನ್ನೆಚ್ಚರಿಕೆ ಕ್ರಮವಾಗಿ ಸಂಸದ ಡಿ.ಕೆ. ಸುರೇಶ್ ಅವರು ಕನಕಪುರದಿಂದ ನಾಮಪತ್ರ ಸಲ್ಲಿಸಿದ್ದಾರೆ ತಿಳಿಸಿದ್ದರು. ಈಗಿನ ತಂತ್ರಜ್ಞಾನದಲ್ಲಿ ಯಾರು ಮಾಹಿತಿ ನೋಡುತ್ತಾರೆ, ಡೌನ್‌ಲೋಡ್ ಮಾಡಿಕೊಳ್ಳುತ್ತಾರೆ ಎಂಬ ಮಾಹಿತಿ ಸಿಗುತ್ತದೆ. ಬಿಜೆಪಿ ಸೆಲ್ ನನ್ನ ದಾಖಲೆ ಪರಿಶೀಲಿಸುತ್ತಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಅಧಿಕಾರಿಗಳ ದುರ್ಬಳಕೆಗೆ ಪ್ರಯತ್ನಿಸಲಾಗುತ್ತಿದೆ. ಹೀಗಾಗಿ ನಾವು ಜಾಗರೂಕವಾಗಿ ಹೆಜ್ಜೆ ಇಟ್ಟಿದ್ದೇವೆ. ನನಗೆ ಅರ್ಜಿ ಹೇಗೆ ತುಂಬಬೇಕು ಗೊತ್ತಿದೆ. ನನ್ನ ದಾಖಲೆಗಳು ಸರಿಯಾಗಿವೆ. ನನ್ನ ಅರ್ಜಿ ಸ್ವೀಕೃತವಾಗಲಿದೆ ಎಂಬ ನಂಬಿಕೆ ಇತ್ತು. ಆದರೆ ಬಿಜೆಪಿಯವರ ಷಡ್ಯಂತ್ರ ಏನು ಬೇಕಾದರೂ ಆಗಬಹುದು. ಕಳೆದ ಬಾರಿಯೇ ನನ್ನ ಅರ್ಜಿ ತಿರಸ್ಕರಿಸಲು ಮುಂದಾಗಿದ್ದರು. ಆದರೆ ನಾನು ಐಟಿ ಅಧಿಕಾರಿಗಳ ಮುಂದೆ ಹೋಗಿ ಎಲ್ಲ ಮಾಹಿತಿ ನೀಡಿದೆ. ಅವರು ನನಗೆ ಕಿರುಕುಳ ನೀಡುವ ಪ್ರಯತ್ನ ನಡೆಯುತ್ತಿವೆ. ಕಳೆದ 15 ವರ್ಷಗಳಲ್ಲಿ ನಾನು ಒಂದು ಮನೆ ಬಿಟ್ಟರೆ ಉಳಿದಂತೆ ಯಾವುದೇ ಆಸ್ತಿ ಖರೀದಿ ಮಾಡಿಲ್ಲ ಎಂದು ಹೇಳಿದರು. ಅವರು ಏನೇ ಕುತಂತ್ರ ಪ್ರಯೋಗ ಮಾಡಿದರೂ ನಾನು ನ್ಯಾಯಾಲಯ ಹಾಗೂ ಜನರ ತೀರ್ಪು ನಂಬಿದ್ದೇನೆ ಎಂದರು.

ಯುಕೆ ಉಪ ಪ್ರಧಾನಿ ಡೊಮಿನಿಕ್ ರಾಬ್ ರಾಜೀನಾಮೆ

ಲಂಡನ್, ಏ.21– ಯುಕೆ ಉಪ ಪ್ರಧಾನಿ ಡೊಮಿನಿಕ್ ರಾಬ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ತಮ್ಮ ವಿರುದ್ಧದ ಬೆದರಿಕೆ ಆರೋಪ ತನಿಖೆ ಹಿನ್ನೆಲೆಯಲ್ಲಿ ಅವರು ರಾಜೀನಾಮೆ ನೀಡಿದ್ದಾರೆ. ತನಿಖೆಯ ಫಲಿತಾಂಶ ಸ್ವೀಕರಿಸಲು ಕರ್ತವ್ಯಬದ್ಧನಾಗಿರುವುದಾಗಿ ಭಾವಿಸಿರುವುದಾಗಿ ಅವರು ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ. ನನ್ನ ವಿರುದ್ಧದ ಎರಡು ಆರೋಪಗಳನ್ನು ಹೊರತುಪಡಿಸಿ ಉಳಿದೆಲ್ಲಾ ಆರೋಪಗಳನ್ನು ವರದಿ ವಜಾಗೊಳಿಸಿದೆ. ಈ ಎರಡು ಆರೋಪಗಳು ದೋಷಪೂರಿತವಾಗಿವೆ ಮತ್ತು ಉತ್ತಮ ಸರ್ಕಾರದ ನಡವಳಿಕೆಗೆ ಅಪಾಯಕಾರಿ ನಿದರ್ಶನವಾಗಿದೆ ಎಂದು ಭಾವಿಸುವುದಾಗಿ ಅವರು ಹೇಳಿದ್ದಾರೆ. ಕಳೆದ ವರ್ಷ ಅಕ್ಟೋಬರ್ ನಲ್ಲಿ ಉಪ ಪ್ರಧಾನ ಮಂತ್ರಿಯಾಗಿ ಡೊಮಿನಿಕ್ ರಾಬ್ ಅವರನ್ನು ಪ್ರಧಾನಿ ರಿಷಿ ಸುನಕ್ ನೇಮಕ ಮಾಡಿದ್ದರು.

ಚುನಾವಣಾ ಅಕ್ರಮ ತಡೆಯಲು ಸಹಕರಿಸಿ

ಡಿಸಿ ಡಾ.ಕೆ.ವಿ.ರಾಜೇಂದ್ರ ಮನವಿ

ಮೈಸೂರು,ಏ.21– ಚುನಾವಣೆಯಲ್ಲಿ ಅಕ್ರಮ ನಡೆಯದಂತೆ ತಡೆಯಲು ಎಲ್ಲರೂ ಸಹಕಾರ ನೀಡಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಾದ ಡಾ.ಕೆ.ವಿ.ರಾಜೇಂದ್ರ ಹೇಳಿದರು.


ಹೆಚ್.ಡಿ.ಕೋಟೆ ತಾಲೂಕಿನ ಅಂಬೇಡ್ಕರ್ ಭವನದಲ್ಲಿ ನಡೆದ ಮತಗಟ್ಟೆ ಮಟ್ಟದ ಜಾಗೃತಿ ಸಮಿತಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ನೈತಿಕ ಮತದಾನ ಮಾಡಿಸಲು ಮತ್ತು ಕಡಿಮೆ ಮತದಾನವಾಗುವ ಕಡೆಗಳಲ್ಲಿ ಹೆಚ್ಚು ಮತದಾನವಾಗುವಂತೆ ಕ್ರಮವಹಿಸಿ. ಮತದಾರರಲ್ಲಿ ಮತದಾನದ ಕುರಿತು ಜಾಗೃತಿ ಮೂಡಿಸಿ, ಮತದಾರರ ಪಟ್ಟಿಯಲ್ಲಿ ಕ್ರಮ ಸಂಖ್ಯೆ ಹಾಗೂ ಹೆಸರು ಇರುವುದರ ಬಗ್ಗೆ ಮಾಹಿತಿ ನೀಡಿ. ಮತದಾನ ಮಾಡಲು ಬರುವವರಿಗೆ ಕುಡಿಯುವ ನೀರು ಹಾಗೂ ನೆರಳು ಒದಗಿಸಲು ವ್ಯವಸ್ಥೆ ಮಾಡಿ ಎಂದು ಸೂಚಿಸಿದರು.

ಮತದಾರರಿಗೆ ಆಮಿಷ ಒಡ್ಡಿ ಹಣ, ಮದ್ಯ ಹಾಗೂ ಇತರೆ ವಸ್ತುಗಳನ್ನು ಹಂಚುತ್ತಿರುವುದು ಕಂಡು ಬಂದಲ್ಲಿ, ತಕ್ಷಣ ಮಾಹಿತಿಯನ್ನು ಎಫ್‌ಎಸ್‌ಟಿ ತಂಡಕ್ಕೆ ಮಾಹಿತಿ ನೀಡಿ ಎಂದರು. ಸಭೆಯಲ್ಲಿ ಎಸ್.ಡಿ.ಕೋಟೆ ಚುನಾವಣಾ ಅಧಿಕಾರಿ ಕುಮುದಾ ಶರತ್ ಸೇರಿದಂತೆ ಇತರರಿದ್ದರು.



ರಾಜ್ಯದಲ್ಲಿ ಅತಂತ್ರ ಸ್ಥಿತಿಗೆ ಮತದಾರರು ಅವಕಾಶ ಮಾಡಿಕೊಡಲ್ಲ

- ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ವಾಸ
- ರಾಜ್ಯ, ಕೇಂದ್ರದಲ್ಲಿ ಮತ್ತೆ ಬಿಜೆಪಿ ಸರ್ಕಾರ ಬರುವುದು ಶತಸಿದ್ಧ



ಮೈಸೂರು, ಏ.21(ಎಂಕೆ)– ರಾಜ್ಯದ ಮತದಾರರು ಅತಂತ್ರ ವಿಧಾನಸಭೆಗೆ ಅವಕಾಶ ಮಾಡಿಕೊಡುವುದಿಲ್ಲ. ರಾಜ್ಯದಲ್ಲಿ ಸ್ಪಷ್ಟ ಬಹುಮತದೊಂದಿಗೆ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲಿದೆ. ಇದನ್ನು ತಪ್ಪಿಸಲು ಯಾವ ಶಕ್ತಿಯಿಂದಲೂ ಸಾಧ್ಯವಿಲ್ಲ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಹಾಗೂ ಶಿಕಾರಿಪುರದ ಬಿಜೆಪಿ ಅಭ್ಯರ್ಥಿ ಬಿ.ವೈ.ವಿಜಯೇಂದ್ರ ಭವಿಷ್ಯ ನುಡಿದರು.

ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ರಾಜೇಂದ್ರ ಕಲಾಮಂದಿರದಲ್ಲಿ ಆಯೋಜಿಸಿದ್ದ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್‌ನಂತೆ ಬಿಜೆಪಿ ಬೆರಳೆಣಿಕೆ ವ್ಯಕ್ತಿಗಳ ಆಧಾರದ ಮೇಲೆ ನಿಂತಿಲ್ಲ. ಜೆಡಿಎಸ್‌ನಂತೆ ಒಂದು ಕುಟುಂಬಕ್ಕೂ ಸೀಮಿತವಾಗಿಲ್ಲ. ಲಕ್ಷಾಂತರ ಕಾರ್ಯಕರ್ತರ ಶಕ್ತಿಯ ಮೇಲೆ ನಿಂತಿದೆ. ರಾಜ್ಯದಲ್ಲಿ ಮತ್ತೆ, ಕೇಂದ್ರದಲ್ಲಿ ಮಗದೊಮ್ಮೆ ಬಿಜೆಪಿ ಸರ್ಕಾರ ಬರಲಿದ್ದು, 3ನೇ ಬಾರಿಗೆ ನರೇಂದ್ರ ಮೋದಿಯವರು ಪ್ರಧಾನಿಯಾಗಲಿದ್ದಾರೆ ಎಂದರು. ದೇಶದಲ್ಲಿ 50–60 ವರ್ಷಗಳ ಸುದೀರ್ಘ ಆಡಳಿತ ನಡೆಸಿದ ಕಾಂಗ್ರೆಸ್ ಉಚಿತ ಘೋಷಣೆಗಳ ಮೂಲಕ ಚುನಾವಣೆ ಗೆಲ್ಲಲು ಹೊರಟಿದೆ. ಕಾಂಗ್ರೆಸ್ ಪಕ್ಷಕ್ಕೆ ನಾಚಿಕೆಯಾಗಬೇಕು. ಬಡವರನ್ನು ಬಡವರಾಗಿಯೇ ಇರಿಸಿ, ಅಲ್ಪಸಂಖ್ಯಾತರನ್ನು ಮತ ಬ್ಯಾಂಕ್ ಆಗಿ ಮಾಡಿಕೊಂಡಿರುವ ಕಾಂಗ್ರೆಸ್ ಬಡವರು, ಯುವಕರು, ನಿರುದ್ಯೋಗಿಗಳಿಗೆ ಶಕ್ತಿ ತುಂಬುವ ಕೆಲಸವನ್ನು ಮಾಡಿಲ್ಲ. ದೇಶದ ಅಭಿವೃದ್ಧಿ ಏನನ್ನೂ ಮಾಡದಿದ್ದರೂ ಪುಕ್ಸಟ್ಟೆಗಳ ಮಾತನಾಡುತ್ತಾರೆ ಎಂದು ವಾಗ್ದಾಳಿ ನಡೆಸಿದರು.

> **ಸಾಮಾನ್ಯ ಕಾರ್ಯಕರ್ತನಾಗಿ, ಈಗ ಪಕ್ಷದ ನಗರಾಧ್ಯಕ್ಷನಾಗಿರುವ ನನಗೆ ಟಿಕೆಟ್ ನೀಡಿರುವುದಕ್ಕೆ ಬಿಜೆಪಿ ಪಕ್ಷಕ್ಕೆ ಹಾಗೂ ಕ್ಷೇತ್ರದ ಕಾರ್ಯಕರ್ತರ ಗೌರವಕ್ಕೆ ದಕ್ಕೆಯಾಗದಂತೆ ನಡೆದುಕೊಳ್ಳುತ್ತೇನೆ. ನಾನು ಬಿಜೆಪಿ ಕಾರ್ಯಕರ್ತರಿಗೆ ಚಿರಪರಿಚಿತ. ಆದರೆ ಜನಸಾಮಾನ್ಯರಿಗೆ ನಾನು ಅಪರಿಚಿತ. ಆದ್ದರಿಂದ ನಿಮ್ಮೊಂದಿಗೆ ಪ್ರಚಾರಕ್ಕೆ ಕರೆದುಕೊಂಡು ಹೋಗುವ ಮೂಲಕ ನನ್ನನ್ನು ಕ್ಷೇತ್ರಕ್ಕೆ ಪರಿಚಯಿಸಿಕೊಡಿ.**
> – ಟಿ.ಎಸ್.ಶ್ರೀವತ್ಸ,
> ಕೆ.ಆರ್.ಕ್ಷೇತ್ರದ ಬಿಜೆಪಿ ಅಭ್ಯರ್ಥಿ

ಮುಂದಿನ ಪೀಳಿಗೆ ಬಗ್ಗೆ ಚಿಂತನೆ: ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಮುಂದಿರುವ ಲೋಕಸಭಾ ಚುನಾವಣೆಯ ಬಗ್ಗೆ ಚಿಂತಿಸುತ್ತಿಲ್ಲ. ಮುಂದಿನ ಪೀಳಿಗೆಯ ಅಭಿವೃದ್ಧಿ ಕುರಿತು ಆಲೋಚಿಸುತ್ತಾ ಆಡಳಿತ ನಡೆಸುತ್ತಿದ್ದಾರೆ. ರಾಮಮಂದಿರ ನಿರ್ಮಾಣ, ಆರ್ಟಿಕಲ್ 370 ರದ್ದು ಸೇರಿದಂತೆ ಅನೇಕ ಸುದೀರ್ಘ ಕಾಲದ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ. ಇದೆಲ್ಲದರ ಫಲವಾಗಿ 2024ರ ಲೋಕಸಭಾ ಚುನಾವಣೆಯಲ್ಲೂ ಬಿಜೆಪಿ ಗೆಲ್ಲಲಿದ್ದು, ಮೋದಿಯವರು ಮತ್ತೊಮ್ಮೆ ಪ್ರಧಾನಿಯಾಗಲಿದ್ದಾರೆ ಎಂದರು.

ಊಹಿಸಿರಲಿಲ್ಲ: ಕೆಆರ್.ಕ್ಷೇತ್ರಕ್ಕೆ ಈ ಬಾರಿ ಶ್ರೀವತ್ಸರನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡುತ್ತಾರೆಂದು ನಾವು ಕಲ್ಪನೆ ಮಾಡಿಕೊಂಡಿರಲಿಲ್ಲ. ಎಸ್.ಎ. ರಾಮದಾಸ್ ಅವರು ನಾಲ್ಕು ಬಾರಿ ಶಾಸಕರಾಗಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಆದರೆ ಮುಂದಿನ 30–40 ವರ್ಷಗಳನ್ನು ಗಮನದಲ್ಲಿಟ್ಟುಕೊಂಡು ಯುವ ನಾಯಕರಿಗೆ ಪಕ್ಷ ಟಿಕೆಟ್ ನೀಡಿದೆ. ಟಿಕೆಟ್ ತಪ್ಪಿದರೂ ಬಹುತೇಕ ನಾಯಕರು ಪಕ್ಷದಲ್ಲೇ ಉಳಿದಿದ್ದಾರೆ. ಪಕ್ಷ ಬಿಟ್ಟವರಿಗೆ ಒಳ್ಳೆದಾಗಲಿ ಅದರಂತೆ ಪಕ್ಷದಲ್ಲೇ ಉಳಿದುಕೊಂಡಿರುವವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಶ್ರೀವತ್ಸರನ್ನು ಶಾಸಕರನ್ನಾಗಿಸಿ: ಹಳೇ ಮೈಸೂರು ಭಾಗವನ್ನು ಗಂಭೀರವಾಗಿ ಪರಿಗಣಿಸಿರುವುದರಿಂದ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಮೈಸೂರು–ಚಾಮರಾಜನಗರ ಜಿಲ್ಲೆಗಳ 15 ಕ್ಷೇತ್ರಗಳಲ್ಲಿಯೂ ಬಿಜೆಪಿ ಜಯ ಗಳಿಸಲಿದೆ. ಕೆ.ಆರ್.ಕ್ಷೇತ್ರದಲ್ಲಿ ಶ್ರೀವತ್ಸ ಅವರನ್ನು ಶಾಸಕರನ್ನಾಗಿಸುವ ನಿಟ್ಟಿನಲ್ಲಿ ತಾವೆಲ್ಲರೂ ಕುಂತಲ್ಲಿ–ನಿಂತಲ್ಲಿ ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರದ ಸಾಧನೆಗಳನ್ನು ಮನೆ ಮನೆಗೆ ತಲುಪಿಸಬೇಕು. 30–40 ಸಾವಿರ ಮತಗಳ ಅಂತರದಲ್ಲಿ ಗೆಲ್ಲಿಸುವಂತೆ ಕರೆ ನೀಡಿದರು.

ಮೇಯರ್ ಶಿವಕುಮಾರ್, ಕೆ.ಆರ್.ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ, ರಾಜ್ಯ ಬಿಜೆಪಿ ಉಪಾಧ್ಯಕ್ಷ ಎಂ ರಾಜೇಂದ್ರ, ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಬಿಜೆಪಿ ನಗರ ಕಾರ್ಯಾಧ್ಯಕ್ಷ ಹೆಚ್.ಜಿ.ಗಿರಿಧರ್, ಕೆ.ಆರ್.ಕ್ಷೇತ್ರದ ಅಧ್ಯಕ್ಷ ವಡಿವೇಲು, ಉಪ ಮೇಯರ್ ಡಾ.ಜಿ.ರೂಪ, ನಗರಪಾಲಿಕೆ ಸದಸ್ಯರು ಮತ್ತಿತರರು ಉಪಸ್ಥಿತರಿದ್ದರು.

ಶಾಸಕ ರಾಮದಾಸ್, ರಾಜೀವ್ ಗೈರು...!

ಕೆ.ಆರ್.ಕ್ಷೇತ್ರದ ಕಾರ್ಯಕರ್ತರ ಸಭೆಯಲ್ಲಿ ಹಾಲಿ ಶಾಸಕ ಎಸ್.ಎ.ರಾಮದಾಸ್ ಹಾಗೂ ಟಿಕೆಟ್ ಆಕಾಂಕ್ಷಿಯಾಗಿದ್ದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಗೈರು ಹಾಜರಿ ಎದ್ದು ಕಾಣುತ್ತಿತ್ತು. ನಿನ್ನೆಯಷ್ಟೇ ನಾಮಪತ್ರ ಸಲ್ಲಿಸುವ ವೇಳೆ ಭಾಗಿಯಾಗಿದ್ದ ಶಾಸಕ ಎಸ್.ಎ.ರಾಮದಾಸ್ ಕಾರ್ಯಕರ್ತರ ಸಭೆಯಿಂದ ದೂರ ಉಳಿದರೆ, ಅಭ್ಯರ್ಥಿ ಘೋಷಣೆಯಾದಾಗಿನಿಂದಲೂ ಬಿಜೆಪಿಯಿಂದ ದೂರ ಉಳಿದಿರುವ ಹೆಚ್.ವಿ.ರಾಜೀವ್ ಕಾರ್ಯಕರ್ತರ ಸಭೆಗೂ ಗೈರಾಗಿದ್ದರು.

ಮೈಸೂರು ಮಿತ್ರ

ಪಿಯುಸಿ: ಮಂಡ್ಯಕ್ಕೆ ಶೇ.77.47 ಫಲಿತಾಂಶ

ಮಂಡ್ಯ, ಏ.21– ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಗೊಂಡಿದ್ದು, ಈ ಬಾರಿ ಮಂಡ್ಯ ಜಿಲ್ಲೆ ಶೇ.77.47ರಷ್ಟು ಫಲಿತಾಂಶ ಪಡೆದಿದೆ.

ಎಂದಿನಂತೆ ಗ್ರಾಮೀಣ ವಿದ್ಯಾರ್ಥಿಗಳು ಹಾಗೂ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. ಕಳೆದ ಸಾಲಿನಲ್ಲಿ ಶೇ.58.77ರಷ್ಟು ಫಲಿತಾಂಶದೊಂದಿಗೆ ರಾಜ್ಯದಲ್ಲೇ 27ನೇ ಸ್ಥಾನ ಪಡೆದಿದ್ದ ಮಂಡ್ಯ ಪ್ರಸಕ್ತ ಸಾಲಿನಲ್ಲಿ ಶೇ.77.47 ರಷ್ಟು ಫಲಿತಾಂಶದೊಂದಿಗೆ 20ನೇ ಸ್ಥಾನಕ್ಕೇರಿದೆ. ಇದರೊಂದಿಗೆ ಉತ್ತಮ ಫಲಿತಾಂಶ ಪಡೆಯುವಲ್ಲಿ ಸ್ವಲ್ಪಮಟ್ಟಿಗೆ ಚೇತರಿಸಿಕೊಂಡಿದ್ದು, ಶೇಖಡವಾರು ಫಲಿತಾಂಶದಲ್ಲಿಯೂ ಏರಿಕೆ ಕಂಡಿದೆ.

ಜಿಲ್ಲೆಯಲ್ಲಿ ಒಟ್ಟು 14,524 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಈ ಪೈಕಿ 10,609 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಲಾ ವಿಭಾಗದಲ್ಲಿ ಒಟ್ಟು 3828 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಈ ಪೈಕಿ 2219 (ಶೇ.77.47) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ 5185 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 3691 (ಶೇ.71.19) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ, ವಿಜ್ಞಾನ ವಿಭಾಗದಲ್ಲಿ 5511 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 4699 (ಶೇ.85.27) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಪಟ್ಟಣ ಪ್ರದೇಶದ 8208 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಈ ಪೈಕಿ 5795 (ಶೇ.70.6) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಗ್ರಾಮೀಣ ಪ್ರದೇಶದ 6316 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 4814 (ಶೇ.76.22) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಇದರೊಂದಿಗೆ ನಗರ ಪ್ರದೇಶದ ವಿದ್ಯಾರ್ಥಿಗಳಿಗಿಂತ ಗ್ರಾಮೀಣ ವಿದ್ಯಾರ್ಥಿಗಳು ಮೇಲುಗೈ ಸಾಧಿಸಿದ್ದಾರೆ.

ಕಳೆದ ಸಾಲಿನಲ್ಲಿ ಶೇ.58.77ರಷ್ಟು ಫಲಿತಾಂಶದೊಂದಿಗೆ ಮಂಡ್ಯ ರಾಜ್ಯದಲ್ಲೇ 27ನೇ ಸ್ಥಾನದಲ್ಲಿತ್ತು. ಪ್ರಸ್ತುತ 77.47ರಷ್ಟು ಫಲಿತಾಂಶದೊಂದಿಗೆ 20ನೇ ಸ್ಥಾನಕ್ಕೇರಿದ್ದೇವೆ. ವಿಷಯವಾರು ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಅಭ್ಯಾಸ ಮಾಡಿಸಿ, ವಿಷಯವಾರು ಕಾರ್ಯಾಗಾರ ಹಮ್ಮಿಕೊಂಡ ಕಾರಣ ಹಾಗೂ ಎಲ್ಲಾ ಉಪನ್ಯಾಸಕರು ಕೈ ಜೋಡಿಸಿದ್ದರಿಂದ ಉತ್ತಮ ಫಲಿತಾಂಶ ಲಭಿಸಿದೆ. ಮುಂದಿನ ದಿನಗಳಲ್ಲಿ ಇನ್ನೂ ಉತ್ತಮ ಫಲಿತಾಂಶ ತರಲು ಅಗತ್ಯ ಕ್ರಮ ವಹಿಸಲಾಗುವುದು.

-ಎಸ್.ಉಮೇಶ್, ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಮಂಡ್ಯ.

ಕೆ.ಆರ್.ಪೇಟೆ ಸಮಗ್ರ ಅಭಿವೃದ್ಧಿಗೆ ನನ್ನನ್ನು ಬೆಂಬಲಿಸಿ

ಬಿಜೆಪಿ ಅಭ್ಯರ್ಥಿ, ಸಚಿವ ಕೆ.ಸಿ.ನಾರಾಯಣಗೌಡ ಮನವಿ



ಕೆ.ಆರ್.ಪೇಟೆ, ಏ.21– ತಾಲೂಕಿನ ಸಮಗ್ರ ಅಭಿವೃದ್ಧಿಗೆ ಮತ್ತೊಮ್ಮೆ ನನ್ನನ್ನು ಗೆಲ್ಲಿಸಿ, ನಿಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಿ ಎಂದು ಬಿಜೆಪಿ ಅಭ್ಯರ್ಥಿ ಹಾಗೂ ಸಚಿವ ಕೆ.ಸಿ.ನಾರಾಯಣಗೌಡ ಮನವಿ ಮಾಡಿದರು.

ತಾಲೂಕಿನ ಸಂತೆಬಾಚಹಳ್ಳಿ ಹೋಬಳಿ ದೊಡ್ಡಕ್ಯಾತನಹಳ್ಳಿ ಗ್ರಾಮದ ಪುರಾಣ ಪ್ರಸಿದ್ಧ ಶ್ರೀರಾಮದೇವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ದೊಡ್ಡಕ್ಯಾತನಹಳ್ಳಿ, ಸಂತೆಬಾಚಹಳ್ಳಿ, ರಂಗನಾಥಪುರ–ಹರಪನಹಳ್ಳಿ ಕ್ರಾಸ್ ಗ್ರಾಮ ಗ್ರಾಮಗಳಲ್ಲಿ ಬಿರುಸಿನ ಪ್ರಚಾರ ಕೈಗೊಂಡು ಮತಯಾಚಿಸಿದ ಅವರು, ಬಿಲ್ಲೇನಹಳ್ಳಿ ಗ್ರಾಮಕ್ಕೆ ತೆರಳಿ ಜೆಡಿಎಸ್ ಮುಖಂಡ ರಾಜಾಪುರದ ದಿನೇಶ್ ಮನೆಗೆ ಭೇಟಿ ನೀಡಿ ಬಿಜೆಪಿ ಪಕ್ಷ ಸೇರಿ ತಮ್ಮನ್ನು ಬೆಂಬಲಿಸುವಂತೆ ಮನವಿ ಮಾಡಿದರು. ನಾರಾಯಣಗೌಡರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ದಿನೇಶ್ ತಮ್ಮ ಬೆಂಬಲಿಗರೊಂದಿಗೆ ಚರ್ಚಿಸಿ ಪಕ್ಷ ಸೇರಿ ಬಿಜೆಪಿ ಅಭ್ಯರ್ಥಿ ಗೆಲುವಿಗೆ ಶ್ರಮಿಸುವುದಾಗಿ ಭರವಸೆ ನೀಡಿದರು.

ಇದೇ ವೇಳೆ ಸಚಿವರು ಚಿಕ್ಕಕ್ಯಾತನಹಳ್ಳಿ, ಮಾಳಗೂರು, ರಂಗನಾಥಪುರ, ಬಿಕ್ಕನಂದ್ರ, ನಾಯಕನಹಳ್ಳಿ, ಅಘಲಯ, ಹಡವನಹಳ್ಳಿ, ಅದಿಹಳ್ಳಿ, ಹರಪನಹಳ್ಳಿ ಕ್ರಾಸ್‌ನಲ್ಲಿ ಜಿಪಂ ಮಾಜಿ ಉಪಾಧ್ಯಕ್ಷ ಅಂಬರೀಶ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಶ್ರೀಧರ್, ಕುಮಾರ್, ಜವರಯ್ಯ ಗೌಡ, ಚಂದ್ರಶೇಖರ್, ಮೋಗಣ್ಣಗೌಡ, ಮೋಹನ್, ಶಿವಣ್ಣ, ಜಯರಾಮೇಗೌಡರ ನೇತೃತ್ವದಲ್ಲಿ ಬಿರುಸಿನ ಪ್ರಚಾರ ನಡೆಸಿ ಮತಯಾಚನೆ ಮಾಡಿದರು.

ನಂತರ ಮಾತನಾಡಿದ ಅವರು, ಈ ಭಾಗದ ಗ್ರಾಮಗಳು ಬರದು ಭೂಮಿಯಾಗಿದ್ದು, ಸಂಪೂರ್ಣ ಮಳೆಯಾಶ್ರಿತ ಪ್ರದೇಶವಾಗಿರುವ ಸಂತೆಬಾಚಹಳ್ಳಿ ಹೋಬಳಿಯ ಕೆರೆ ಕಟ್ಟೆಗಳನ್ನು ಏತ ನೀರಾವರಿ ಯೋಜನೆ ಮೂಲಕ ತುಂಬಿಸಿ ಜನ ಜಾನುವಾರುಗಳಿಗೆ ಕುಡಿಯುವ ನೀರು ಕಲ್ಪಿಸಿ, ರೈತರಿಗೆ ಬೇಸಾಯ ಮಾಡಲು ಅನುಕೂಲವಾಗುವಂತೆ 212 ಕೋಟಿ ರೂ.ವೆಚ್ಚದಲ್ಲಿ ಗೂಡೆಹೊಸಳ್ಳಿ ಬಳಿ ಜಾಕ್‌ವೆಲ್ ನಿರ್ಮಿಸಿ ಹೇಮಾವತಿ ನದಿ ನೀರನ್ನು ಪಂಪ್ ಮಾಡಿ ಅಘಲಯ ದೊಡ್ಡ ಕೆರೆ ತುಂಬಿಸಿ ಹೋಬಳಿಯ ಎಲ್ಲಾ ಕೆರೆಗಳನ್ನು ತುಂಬಿಸುವ 40 ವರ್ಷಗಳ ಮಹತ್ವಾಕಾಂಕ್ಷೆಯ ಗೂಡೆಹೊಸಳ್ಳಿ ಏತನೀರಾವರಿ ಯೋಜನೆಗೆ ಚಾಲನೆ ನೀಡಿದ್ದೇನೆ. ಶೇ.70ರಷ್ಟು ಪೈಪ್‌ಲೈನ್ ಕಾಮಗಾರಿ ಸಂಪೂರ್ಣಗೊಂಡಿದ್ದು, ಜಾಕ್‌ವೆಲ್‌ಗಳಿಗೆ ಬೃಹತ್ ಮೋಟಾರ್ ಪಂಪುಗಳನ್ನು ಅಳವಡಿಸುವ ಕಾಮಗಾರಿ ಭರದಿಂದ ಸಾಗುತ್ತಿದೆ. ತಾಲೂಕಿನ ಜನತೆಯ ಆಶೀರ್ವಾದದಿಂದ ಬಿಜೆಪಿ ಪಕ್ಷದಿಂದ ಗೆದ್ದು ಶಾಸಕನಾದ ಕಾರಣ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಸಂಪುಟದಲ್ಲಿ ಸಚಿವನಾಗಿ ತಾಲೂಕಿನ ಸಮಗ್ರ ಅಭಿವೃದ್ಧಿಗಾಗಿ 1800 ಕೋಟಿ ರೂಗಳಿಗೂ ಹೆಚ್ಚಿನ ಅನುದಾನ ತಂದು ಇತಿಹಾಸ ನಿರ್ಮಿಸಿ ಒಬ್ಬ ಸಾಮಾನ್ಯ ಸೇವಕನಂತೆ ಕೆಲಸ ಮಾಡುತ್ತಿದ್ದೇನೆ. ಕೆ.ಆರ್. ಪೇಟೆ ತಾಲೂಕಿನ ಅಭಿವೃದ್ಧಿಗಾಗಿ ತಮ್ಮನ್ನು ಮತ್ತೊಮ್ಮೆ ಪುನರಾಯ್ಕೆ ಮಾಡುವ ಮೂಲಕ ನಿಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ನಾನು ಸಚಿವನಾದ ನಂತರ ವಿದ್ಯುತ್, ನೀರಾವರಿ, ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದ್ದೇನೆ. ಅದಿಹಳ್ಳಿ ಗ್ರಾಮದಲ್ಲಿ 40 ಕೋಟಿ ರೂ.ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಅಂತರರಾಷ್ಟ್ರೀಯ ಮಟ್ಟದ ನವೋದಯ ಮಾದರಿ ಅಲ್ಪಸಂಖ್ಯಾತರ ವಸತಿ ಶಾಲೆ ನನ್ನ ಹೋರಾಟದ ಫಲವಾಗಿ ಆರಂಭಗೊಂಡು ಅತ್ಯುತ್ತಮವಾಗಿ ಕೆಲಸ ಮಾಡುತ್ತಿದೆ. 6ನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗೆ 350ಕ್ಕೂ ಹೆಚ್ಚಿನ ಬಡ ವಿದ್ಯಾರ್ಥಿಗಳಿಗೆ ಗುಣಮಟ್ಟದ ಉಚಿತ ಶಿಕ್ಷಣ ನೀಡುತ್ತಿರುವ ಈ ವಸತಿ ಶಾಲೆಯು ತಾಲೂಕಿನ ಶಿಕ್ಷಣ ಕ್ಷೇತ್ರದ ಹಿರಿಮೆಗೆ ಗರಿ ಮೂಡಿಸಿದೆ. ಕೆ.ಆರ್.ಪೇಟೆ ಅಭಿವೃದ್ಧಿಗೆ ಸುವಿನ ನಾರಾಯಣಗೌಡರ ಕೊಡುಗೆ ಶೂನ್ಯ ಎಂದು ನನ್ನ ರಾಜಕೀಯ ವಿರೋಧಿಗಳು ಅಪಪ್ರಚಾರ ನಡೆಸುತ್ತಿದ್ದಾರೆ. ಇದಕ್ಕೆ ಕಾರ್ಯಕರ್ತರು ಮನ್ನಣೆ ನೀಡದೇ ನನ್ನ ಗೆಲುವಿಗೆ ಶ್ರಮಿಸುವ ಮೂಲಕ ತಾಲೂಕಿನ ಜನತೆ ಸೇವೆಗೆ ಮತ್ತೊಂದು ಅವಕಾಶ ಮಾಡಿಕೊಡಬೇಕು ಎಂದರು.

ಈ ವೇಳೆ ಸಚಿವರ ಪತ್ನಿ ದೇವಕಿ, ತಾಲೂಕು ಬಿಜೆಪಿ ಅಧ್ಯಕ್ಷ ಪರಮೇಶ್ ಅರವಿಂದ್, ಹೋಬಳಿ ಬಿಜೆಪಿ ಅಧ್ಯಕ್ಷ ರಂಗಸ್ವಾಮಿ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಶ್ರೀಧರ್, ಗ್ರಾಪಂ ಮಾಜಿ ಅಧ್ಯಕ್ಷ ಮೋಹನ್, ಮುಖಂಡರಾದ ಡಿ.ಪಿ.ಪರಮೇಶ್, ಕುಮಾರ್, ಶ್ರೀಧರ್, ನಾಗರಾಜು, ಲೋಕೇಶ್, ಮಂಜೇಗೌಡ, ಮರೀಗೌಡ, ಸೋಮಶೇಖರ್, ಚಂದ್ರ ಮೋಹನ್, ಸಚಿವರ ಆಪ್ತ ಸಹಾಯಕ ದಯಾನಂದ್ ಸೇರಿದಂತೆ ಇತರರಿದ್ದರು.

ನಾಮಪತ್ರ ಪರಿಶೀಲನೆ ಮುಕ್ತಾಯ: 11 ತಿರಸ್ಕೃತ

ಮಂಡ್ಯ, ಏ.21– ಜಿಲ್ಲೆಯ 7 ಕ್ಷೇತ್ರಗಳ ನಾಮಪತ್ರ ಪರಿಶೀಲನಾ ಕಾರ್ಯ ಮುಗಿದಿದ್ದು, 11 ನಾಮಪತ್ರಗಳು ತಿರಸ್ಕೃತಗೊಂಡಿವೆ. ಮಳವಳ್ಳಿ ಕ್ಷೇತ್ರದಲ್ಲಿ ಕರುನಾಡು ಪಾರ್ಟಿ ಅಭ್ಯರ್ಥಿ ಹೆಚ್.ಕೆ.ಕೃಷ್ಣ–1 ನಾಮಪತ್ರ, ಪಕ್ಷೇತರ ಅಭ್ಯರ್ಥಿ ಆರ್.ನಾಗೇಶ್ –1 ನಾಮಪತ್ರ, ಭಾರತೀಯ ಬೆಳಕು ಪಾರ್ಟಿ ಅಭ್ಯರ್ಥಿ ಸಿ.ಎಂ.ನಾಗರಾಜಮೂರ್ತಿ ಅವರು ಸಲ್ಲಿಸಿರುವ 2 ನಾಮಪತ್ರಗಳ ಪೈಕಿ 1 ನಾಮಪತ್ರ ಸೇರಿದಂತೆ 3 ನಾಮಪತ್ರ ತಿರಸ್ಕೃತಗೊಂಡಿದೆ.

ಮದ್ದೂರು ಕ್ಷೇತ್ರದಲ್ಲಿ ಆಮ್ ಆದ್ಮಿ ಪಾರ್ಟಿ ಅಭ್ಯರ್ಥಿ ಮಂಜುಳಾ–1 ನಾಮಪತ್ರ, ಪಕ್ಷೇತರ ಅಭ್ಯರ್ಥಿ ಎನ್.ಸಿ. ಮಟ್ಟರಾಜು –1 ನಾಮಪತ್ರ, ಪಕ್ಷೇತರ ಅಭ್ಯರ್ಥಿ ನದೀಂ ಬೇಗ್–1 ನಾಮಪತ್ರ ಸೇರಿದಂತೆ 3 ನಾಮಪತ್ರ ತಿರಸ್ಕೃತಗೊಂಡಿವೆ.

ಮಂಡ್ಯದಲ್ಲಿ ಆಮ್ ಆದ್ಮಿ ಪಕ್ಷದ ಅಭ್ಯರ್ಥಿ ಬೊಮ್ಮಯ್ಯ–1 ನಾಮಪತ್ರ, ವಿಜಯಾನಂದ, ಎಂ.ಜಿ.ಚಿಕ್ಕಣ್ಣ ಅವರುಗಳು ಸಲ್ಲಿಸಿದ 2 ನಾಮಪತ್ರಗಳ ಪೈಕಿ ತಲಾ 1 ನಾಮಪತ್ರ ಸೇರಿದಂತೆ 3 ನಾಮಪತ್ರ ತಿರಸ್ಕೃತಗೊಂಡಿವೆ. ಶ್ರೀರಂಗಪಟ್ಟಣದಲ್ಲಿ ಆಮ್ ಆದ್ಮಿ ಪಕ್ಷದ ಅಭ್ಯರ್ಥಿ ಬಿ.ಪುಷ್ಪ–1 ನಾಮಪತ್ರ, ಪಾಂಡವಪುರದಲ್ಲಿ ಚಂದ್ರಶೇಖರ್ ಸಲ್ಲಿಸಿದ 2 ನಾಮಪತ್ರಗಳ ಪೈಕಿ 1 ನಾಮಪತ್ರ ಸೇರಿದಂತೆ 2 ನಾಮಪತ್ರಗಳು ತಿರಸ್ಕೃತಗೊಂಡಿವೆ. ಇನ್ನು ಮೇಲುಕೋಟೆ, ನಾಗಮಂಗಲ ಹಾಗೂ ಕೆ.ಆರ್.ಪೇಟೆ ಕ್ಷೇತ್ರದಲ್ಲಿ ಯಾವುದೇ ನಾಮಪತ್ರ ತಿರಸ್ಕೃತಗೊಂಡಿಲ್ಲ ಎಂದು ಪ್ರಕಟಣೆ ತಿಳಿಸಿದೆ.


ದಾಖಲೆ ಇಲ್ಲದ 10 ಲಕ್ಷ ರೂ. ವಶ

ಮಳವಳ್ಳಿ, ಏ.21– ದಾಖಲೆ ಇಲ್ಲದೇ ಬೈಕ್‌ನಲ್ಲಿ ಸಾಗಿಸುತ್ತಿದ್ದ 10 ಲಕ್ಷ ರೂ.ಗಳನ್ನು ತಾಲೂಕಿನ ಕಿರುಗಾವಲು ಪೊಲೀಸ್ ಠಾಣಾ ವ್ಯಾಪ್ತಿಯ ಬೆಂಡರವಾಡಿ ಚೆಕ್‌ಪೋಸ್ಟ್ ಬಳಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಬೆಂಡರವಾಡಿ ಚೆಕ್‌ಪೋಸ್ಟ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಫ್ಲೈಯಿಂಗ್ ಸ್ಕ್ವಾಡ್ ತಂಡದ ಅಧಿಕಾರಿಗಳಾದ ಶಿವಸ್ವಾಮಿ, ಸುರೇಶ್, ಎಎಸ್ಐ ಸತೀಶ್ ನೇತೃತ್ವದಲ್ಲಿ ವಾಹನಗಳ ತಪಾಸಣೆ ವೇಳೆ ಮೈಸೂರು ಮೂಲಕ ವ್ಯಕ್ತಿ ಬೈಕ್‌ನಲ್ಲಿ 10 ಲಕ್ಷ ರೂ. ಸಾಗಿಸುತ್ತಿದ್ದದ್ದು ಪತ್ತೆಯಾಗಿದೆ. ಸೂಕ್ತ ದಾಖಲೆ ಇಲ್ಲದ ಕಾರಣ ಹಣ ವಶಕ್ಕೆ ಪಡೆದು ತಾಲೂಕು ಕಚೇರಿಯಲ್ಲಿ ಇಡಲಾಗಿದೆ.

ಈ ಸಂಬಂಧ ತಹಸೀಲ್ದಾರ್ ಕೆ.ಎನ್.ಲೋಕೇಶ್ ಮಾತನಾಡಿ, ಅಧಿಕಾರಿಗಳ ತಪಾಸಣೆ ವೇಳೆ ಸೂಕ್ತ ದಾಖಲೆ ಇಲ್ಲದೇ ವಶಪಡಿಸಿಕೊಂಡಿರುವ ಹಣವನ್ನು ಶನಿವಾರ ಬೆಳಗ್ಗೆ ಜಿಲ್ಲಾ ಚುನಾವಣಾಧಿಕಾರಿಗಳಿಗೆ ನೀಡಲಾಗುವುದು ಎಂದರು.

ಎಸ್‌ಎಂಕೆ ಸಹೋದರನ ಪುತ್ರ ಗುರುಚರಣ್ ಜೆಡಿಎಸ್ ಸೇರ್ಪಡೆ



ಮದ್ದೂರು, ಏ.21– ಮದ್ದೂರು ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಎಸ್.ಗುರುಚರಣ್ ಮತ್ತು ಬೆಂಬಲಿಗರು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸಮ್ಮುಖದಲ್ಲಿ ಅಧಿಕೃತವಾಗಿ ಜೆಡಿಎಸ್‌ಗೆ ಸೇರ್ಪಡೆಗೊಂಡರು.

ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಸಹೋದರ ದಿ.ಎಸ್.ಎಂ.ಶಂಕರ್ ಅವರ ಪುತ್ರ, ಜಿಪಂ ಮಾಜಿ ಅಧ್ಯಕ್ಷ ಎಸ್.ಗುರುಚರಣ್ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ ಕಾಂಗ್ರೆಸ್ ಟಿಕೆಟ್ ನೀಡದೆ ಉದ್ಯಮಿ ಕದಲೂರು ಉದಯ್ ಅವರಿಗೆ ಟಿಕೆಟ್ ನೀಡಿದ ಹಿನ್ನೆಲೆಯಲ್ಲಿ ಅಸಮಾಧಾನಗೊಂಡಿದ್ದ ಎಸ್.ಗುರುಚರಣ್ ಅವರ ನಿವಾಸಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಮತ್ತು ಶಾಸಕ ಡಿ.ಸಿ.ತಮ್ಮಣ್ಣ ಭೇಟಿ ನೀಡಿ ಚರ್ಚಿಸಿ, ಜೆಡಿಎಸ್ ಪಕ್ಷಕ್ಕೆ ಬರಮಾಡಿಕೊಂಡರು.

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿ, ಕಳೆದ ಹಲವು ವರ್ಷಗಳಿಂದಲೂ ಕಾಂಗ್ರೆಸ್ ಕಟ್ಟಿ ಬೆಳೆಸಿದ ಗುರುಚರಣ್‌ಗೆ ಟಿಕೆಟ್ ನೀಡದೆ ಅನ್ಯಾಯವೆಸಗಿರುವುದರಿಂದ ಜೆಡಿಎಸ್‌ಗೆ ಸೇರ್ಪಡೆಗೊಂಡಿರುವುದಾಗಿ ಹೇಳಿದರು. ರಾಜ್ಯದಲ್ಲಿ ಜೆಡಿಎಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದ್ದು, ಮಂಡ್ಯ ಜಿಲ್ಲೆಯಲ್ಲಿಯೂ ಉತ್ತಮ ಫಲಿತಾಂಶ ನೀಡುವ ನಿಟ್ಟಿನಲ್ಲಿ ಸ್ಥಳೀಯ ಜನತೆ ಉತ್ಸುಕತೆ ಹೊಂದಿರುವುದಾಗಿ ಹೇಳಿದರು.

ಮುಂದಿನ ದಿನಗಳಲ್ಲಿ ಎಸ್.ಗುರುಚರಣ್ ಅವರ ರಾಜಕೀಯ ಭವಿಷ್ಯಕ್ಕೆ ಎಲ್ಲಾ ರೀತಿಯ ಸಹಕಾರ, ಬೆಂಬಲ ನೀಡುವ ಭರವಸೆ ನೀಡಿದಲ್ಲದೇ ಗುರುಚರಣ್ ಅವರ ಸ್ಥಾನಮಾನಗಳ ಬಗ್ಗೆ ಮುಂದಿನ ದಿನಗಳಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳುವುದಾಗಿ ಹೇಳಿದರು.

ಪಕ್ಷ ಸೇರ್ಪಡೆ: ಜಿಪಂ ಮಾಜಿ ಅಧ್ಯಕ್ಷ ಎಸ್.ಗುರುಚರಣ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ನಾಗೇಗೌಡ, ಪುರಸಭೆ ಸದಸ್ಯೆ ಪ್ರಿಯಾಂಕ, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ. ಸಂದರ್ಶ ಸೇರಿದಂತೆ ಹಲವು ಮುಖಂಡರು ಮುಖಂಡ ಸ್ವಾಮಿ ನೇತೃತ್ವದಲ್ಲಿ ಜೆಡಿಎಸ್‌ಗೆ ಸೇರ್ಪಡೆಯಾದರು. ಶಾಸಕ ಡಿ.ಸಿ. ತಮ್ಮಣ್ಣ, ಮಾಜಿ ಶಾಸಕ ಕೆ.ಟಿ.ಶ್ರೀಕಂಠೇಗೌಡ, ಯುವ ಮುಖಂಡ ಡಿ.ಟಿ.ಸಂತೋಷ್, ಪಕ್ಷದ ಪದಾಧಿಕಾರಿಗಳಾದ ಬಳಿಯಪ್ಪ, ಹನುಮಂತೇಗೌಡ, ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ಚಿಕ್ಕತಿಮ್ಮೇಗೌಡ ಇತರರಿದ್ದರು.

ಡಿಕೆಶಿ ಎಂಟ್ರಿ: ಮಂಡ್ಯ ಕಾಂಗ್ರೆಸ್ ಬಂಡಾಯ ಶಮನ



ಮಂಡ್ಯ, ಏ.21– ಮಂಡ್ಯ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಗಣಿಗ ರವಿಕುಮಾರ್ ವಿರುದ್ಧ ಎದ್ದಿದ್ದ ಬಂಡಾಯ ಬಹುತೇಕ ಶಮನಗೊಂಡಿದ್ದು, ಸ್ವತಃ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬಂಡಾಯಗಾರರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಗುರುವಾರ ಸಂಜೆ ಮಂಡ್ಯದ ಸಿಲ್ವರ್ ಜುಬಿಲಿ ಪಾರ್ಕ್‌ನಲ್ಲಿ ಆಯೋಜಿಸಿದ್ದ ಕಾಂಗ್ರೆಸ್ ಬೃಹತ್ ಸಮಾವೇಶಕ್ಕೆ ಗಣಿಗ ರವಿಕುಮಾರ್‌ಗೆ ಟಿಕೆಟ್ ಬದಲಿಸಿ ಎಂದು ಮನವಿ ಮಾಡಿದ್ದವರೆಲ್ಲಾ ಆಗಮಿಸಿ ಬೆಂಬಲ ಸೂಚಿಸಿದರು. ಟಿಕೆಟ್ ಘೋಷಣೆಯಾದ ದಿನ ಬೆಂಬಲಿಗರ ಸಭೆ ಕರೆದು ಬಂಡಾಯವಾಗಿ ಸ್ಪರ್ಧಿಸುವುದಾಗಿ ಘೋಷಿಸಿದ್ದ ಡೀಲರ್ ರಾಧಾಕೃಷ್ಣ ನಿನ್ನೆ ರವಿ ನಾಮಪತ್ರ ಸಲ್ಲಿಕೆ ವೇಳೆ ಭಾಗವಹಿಸಿ ಅಚ್ಚರಿ ಮೂಡಿಸಿದ್ದರು. ಇದಾದ ಬಳಿಕ ಸಂಜೆ ನಡೆದ ಸಮಾವೇಶದಲ್ಲಿ ಖುದ್ದು ಡಿಕೆಶಿ ಅವರೇ ಬಂಡಾಯಗಾರರಿಗೆ ಕಾರ್ಯಕ್ರಮಕ್ಕೆ ಬರುವಂತೆ ಸೂಚಿಸಿದ್ದರು. ಈ ನಿಟ್ಟಿನಲ್ಲಿ ರವಿ ವಿರುದ್ಧ ಬಂಡಾಯ ಸಾರಿದ್ದ ಮಾಜಿ ಸಚಿವ ಎಂ.ಎಸ್. ಆತ್ಮಾನಂದ, ಮುಖಂಡರಾದ ಅಮರಾವತಿ ಚಂದ್ರಶೇಖರ್, ಬಿ.ಸಿ.ಶಿವಾನಂದ, ಹಾಲಹಳ್ಳಿ ರಾಮಲಿಂಗಯ್ಯ ಸೇರಿದಂತೆ ಬಹುತೇಕರು ಕಾರ್ಯಕ್ರಮಕ್ಕೆ ಆಗಮಿಸಿ ರವಿ ಪರ ಶ್ರಮಿಸುವುದಾಗಿ ಘೋಷಿಸಿದರು.

ಇನ್ನು ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಕೆ ಮಾಡಿದ್ದ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಡಾ.ಕೃಷ್ಣ ನಿವಾಸಕ್ಕೆ ರಾತ್ರಿ ಭೇಟಿ ನೀಡಿದ ಡಿಕೆಶಿ, ಬಹಳ ಹೊತ್ತು ಮಾತುಕತೆ ನಡೆಸಿ, ಮುಂದಿನ ದಿನಗಳಲ್ಲಿ ಪಕ್ಷದಲ್ಲಿ ಒಳ್ಳೆಯ ಸ್ಥಾನಮಾನ ಕೊಡುವ ಭರವಸೆ ನೀಡಿ, ನಾಮಪತ್ರ ಹಿಂಪಡೆಯಲು ಕೊಳ್ಳುವಂತೆ ಮನವಿ ಮಾಡಿದರು. ಡಾ.ಕೃಷ್ಣ ಸಹ ಇದಕ್ಕೆ ಸಹಮತ ವ್ಯಕ್ತಪಡಿಸಿ, ರವಿಗೆ ಬೆಂಬಲ ನೀಡುವುದಾಗಿ ಹೇಳಿದ್ದು, ಬಹುತೇಕ ಸೋಮವಾರ ಡಾ.ಕೃಷ್ಣ ನಾಮಪತ್ರ ವಾಪಸ್ ತೆಗೆಯಲಿದ್ದಾರೆ.

ಒಂದನೇ ಪುಟದಿಂದ

ಮೈಸೂರಲ್ಲಿ ಇಂದು ರಂಜಾನ್ ಆಚರಣೆ

ಮಕ್ಬೂಲ್ ಅಹಮದ್ ನಿಜಾಮಿ ಸಾಹೇಬ್, ಹಜರತ್ ಮೌಲಾನಾ ಮುಫ್ತಿ ಸಯೀದ್ ತಜುದ್ದೀನ್, ಹಜರತ್ ಮೌಲಾನ ಸೈಯ್ಯದ್ ಶಾ ವಾಲಿ ಉಲ್ಲಾ ಖುದ್ರಿ, ಮೌಲಾನಾ ಅಬ್ದುಸ್ ಸಲಾಮ್ ಸಾಹೇಬ್ ರಿಜ್ವಿ, ಮೌಲಾನಾ ಇನಾಯತ್ ಉರ್ ರೆಹಮಾನ್ ಸಾಹೇಬ್ ರಿಜ್ವಿ, ಗಯಾಜ್ ಅಹಮದ್ ಅಕ್ರಮ್, ಮೆಹಮ್ಮದ್ ಮುಮ್ತಾಜ್ ಅಹಮದ್, ಜಮೀಲ್ ಅಹಮದ್ ಅಶ್ರಫಿ, ಸುಹೇಲ್ ಬೇಗ್, ಮುಷ್ತಾಕ್ ಅಹಮದ್ ಹಾಜರಿದ್ದರು. ರಂಜಾನ್ ತಿಂಗಳ ಉಪವಾಸ (ರೋಜಾ) ಕೈಗೊಂಡ ನಂತರ ಈದ್–ಉಲ್–ಫಿತರ್ ಹಬ್ಬವನ್ನು ಆಚರಿಸಲಾಗುತ್ತದೆ. ಇಸ್ಲಾಮಿಕ್ ಧರ್ಮದಲ್ಲಿ ಅತ್ಯಂತ ಮಹತ್ವದ ಹಬ್ಬಗಳಲ್ಲಿ ಇದು ಒಂದು.

ಮೈಸೂರು ಜಿಲ್ಲೆಗೆ 13ನೇ ಸ್ಥಾನ

ಶೇ.65.45ರಷ್ಟು ದಾಖಲಾಗಿತ್ತು ಆದರೆ ಈ ಬಾರಿ ಶೇ.79.89ರಷ್ಟು ದಾಖಲಾಗಿದೆ. ತೇರ್ಗಡೆಯಾದ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಸುಧಾರಣೆ ಕಂಡಿದ್ದರೂ ಮೂವರು ವಿದ್ಯಾರ್ಥಿನಿಯರನ್ನು ಹೊರತು ಪಡಿಸಿದರೆ ರಾಜ್ಯ ಮಟ್ಟದಲ್ಲಿ ಅತಿ ಹೆಚ್ಚು ಅಂಕ ಪಡೆದ ಸಾಧನೆ ಮಾಡುವಲ್ಲಿ ಮೈಸೂರು ವಿದ್ಯಾರ್ಥಿಗಳು ವಿಫಲರಾಗಿದ್ದಾರೆ.

ಬಾಲಕಿಯರೇ ಮೇಲುಗೈ: ಕಳೆದ ತಿಂಗಳು ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಮೈಸೂರು ಜಿಲ್ಲೆಯಲ್ಲಿ 16,462 ಬಾಲಕರು, 17,420 ಬಾಲಕಿಯರು ಒಳಗೊಂಡಂತೆ 33,882 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ 25,476 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರೆ, 8,406 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. 11,046 ಬಾಲಕರು ಹಾಗೂ 14,430 ವಿದ್ಯಾರ್ಥಿನಿಯರು ಪಾಸ್ ಆಗಿದ್ದಾರೆ.

ಈ ಬಾರಿ ಪರೀಕ್ಷೆ ಬರೆದಿದ್ದ 28,944 ಮಂದಿ ಫ್ರೆಶರ್‌ನಲ್ಲಿ 23,124 ಮಂದಿ ತೇರ್ಗಡೆಯಾಗಿದ್ದಾರೆ. 1,175 ಖಾಸಗಿ ವಿದ್ಯಾರ್ಥಿಗಳಲ್ಲಿ 512 ಮಂದಿ ಪಾಸ್ ಆಗಿದ್ದಾರೆ. 3,763 ಪುನರಾವರ್ತಿತ ವಿದ್ಯಾರ್ಥಿಗಳಲ್ಲಿ 1,840 ಮಂದಿ ತೇರ್ಗಡೆಯಾಗಿದ್ದಾರೆ. ಜಿಲ್ಲೆಯ ಒಟ್ಟು ಫಲಿತಾಂಶ ಶೇ.75.19ರಷ್ಟಿದ್ದರೆ, ಫ್ರೆಶರ್ ಫಲಿತಾಂಶ ಶೇ.79.89ರಷ್ಟು ದಾಖಲಾಗಿದೆ. ತೇರ್ಗಡೆಯಾದ ಬಾಲಕರ ಫಲಿತಾಂಶ ಶೇ.67.01ರಷ್ಟಿದ್ದರೆ, ಬಾಲಕಿಯರ ಫಲಿತಾಂಶ ಶೇ.82.84ರಷ್ಟು ದಾಖಲಾಗಿದೆ. ಆಂಗ್ಲ ಮಾಧ್ಯಮದ 20,423 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಅವರಲ್ಲಿ 16,919(ಶೇ.82.84) ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಪರೀಕ್ಷೆ ಬರೆದಿದ್ದ ಕನ್ನಡ ಮಾಧ್ಯಮ 13,459 ವಿದ್ಯಾರ್ಥಿಗಳಲ್ಲಿ 8,557(ಶೇ.63.58) ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಕಲಾ ವಿಭಾಗ: ಮೈಸೂರು ಜಿಲ್ಲೆಯಲ್ಲಿ ಕಲಾ ವಿಭಾಗದಲ್ಲಿ 9,370 ಮಂದಿಯಲ್ಲಿ 5,634 ವಿದ್ಯಾರ್ಥಿಗಳು ಪಾಸ್ ಆಗಿದ್ದಾರೆ. ಅವರಲ್ಲಿ 5,239 ಬಾಲಕರು, 3,018 ಬಾಲಕಿಯರು ಸೇರಿದ್ದಾರೆ. ಕಲಾ ವಿಭಾಗದ ಫಲಿತಾಂಶ ಶೇ.65.04ರಷ್ಟು ದಾಖಲಾಗಿದೆ.

ವಾಣಿಜ್ಯ ವಿಭಾಗ: ಜಿಲ್ಲೆಯಲ್ಲಿ ಕಾಮರ್ಸ್ ವಿಭಾಗದಲ್ಲಿ 12,068 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಅವರಲ್ಲಿ 9,253 ಮಂದಿ ಪಾಸ್ ಆಗಿದ್ದಾರೆ. ಅವರಲ್ಲಿ 4,041 ಬಾಲಕರು, 5,212 ಬಾಲಕಿಯರು ತೇರ್ಗಡೆಯಾಗಿದ್ದಾರೆ. ವಾಣಿಜ್ಯ ವಿಭಾಗದ ಫಲಿತಾಂಶ ಶೇ.81.76 ಆಗಿದೆ.

ವಿಜ್ಞಾನ ವಿಭಾಗ: ವಿಜ್ಞಾನ ವಿಭಾಗದಲ್ಲಿ 12,444 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಅವರಲ್ಲಿ 10,589 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಅವರಲ್ಲಿ 4,389 ಬಾಲಕರು, 6,200 ಬಾಲಕಿಯರು ಪಾಸ್ ಆಗಿದ್ದಾರೆ. ಈ ವಿಭಾಗದ ಫಲಿತಾಂಶ ಶೇ.87.77ರಷ್ಟು ದಾಖಲಾಗಿದೆ.

ನಗರ ಪ್ರದೇಶದ ಫಲಿತಾಂಶ: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಮೈಸೂರು ನಗರ ಪ್ರದೇಶದಿಂದ 28,712 ವಿದ್ಯಾರ್ಥಿಗಳು ಭಾಗಿಯಾಗಿದ್ದರು. ಅವರಲ್ಲಿ 21,997 ವಿದ್ಯಾರ್ಥಿಗಳು ಪಾಸ್ ಆಗಿದ್ದಾರೆ. 9,410 ಬಾಲಕರು ಹಾಗೂ 12,587 ಬಾಲಕಿಯರು ತೇರ್ಗಡೆಯಾಗಿದ್ದಾರೆ. ನಗರದ ಒಟ್ಟು ಫಲಿತಾಂಶ ಶೇ.81.24 ಆಗಿದ್ದು, ಬಾಲಕರ ಫಲಿತಾಂಶ ಶೇ.83.81 ಹಾಗೂ ಬಾಲಕರ ಫಲಿತಾಂಶ ಶೇ.68.72ರಷ್ಟು ದಾಖಲಾಗಿದೆ.

ಗ್ರಾಮೀಣ ಪ್ರದೇಶದ ಫಲಿತಾಂಶ: ಜಿಲ್ಲೆಯ ಗ್ರಾಮೀಣ ಪ್ರದೇಶದಿಂದ 5,170 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಅವರಲ್ಲಿ 3,479 ವಿದ್ಯಾರ್ಥಿಗಳು ಪಾಸ್ ಆಗಿದ್ದಾರೆ. 1,636 ಬಾಲಕರು (ಶೇ.59.01) ಹಾಗೂ 1,843(ಶೇ.76.73) ಬಾಲಕಿಯರು ತೇರ್ಗಡೆಯಾಗಿದ್ದಾರೆ.



ಕಾಮರ್ಸ್ ವಿಭಾಗದಲ್ಲಿ ಹೆಚ್ಚು ಅಂಕ ಪಡೆದ ನಿಶಿತಾ ಅವರಿಗೆ ತಾಯಿ ಕಾತ್ಯಾಯಿನಿ, ತಂದೆ ಪರಮೇಶ್ ಹಾಗೂ ಸಹೋದರಿ ನಿರ್ಮಿತ ಅಭಿನಂದಿಸಿದರು.

ಕಾಂಗ್ರೆಸ್ ಒಬಿಸಿ ಪದಾಧಿಕಾರಿಗಳ ನೇಮಕ



ಮೈಸೂರು,ಏ.21– ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಚಾಮರಾಜ ಕ್ಷೇತ್ರದ ಕಾಂಗ್ರೆಸ್‌ನ ಒಬಿಸಿ ಇಂದಿರಾ ಗಾಂಧಿ ಬ್ಲಾಕ್‌ನ ಪದಾಧಿಕಾರಿಗಳ ನೇಮಕ ಹಾಗೂ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮ ನಡೆಯಿತು.

ನೂತನವಾಗಿ ನೇಮಕಗೊಂಡ ಚಾಮರಾಜ ಕ್ಷೇತ್ರದ ಇಂದಿರಾ ಗಾಂಧಿ ಬ್ಲಾಕ್‌ನ ಪದಾಧಿಕಾರಿಗಳಿಗೆ ಪಾಲಿಕೆ ಮಾಜಿ ಸದಸ್ಯ ಹಾಗೂ ಕಾಂಗ್ರೆಸ್ ಕಾರ್ಯದರ್ಶಿ ಶಿವಣ್ಣ ನೇಮಕಾತಿ ಪತ್ರ ವಿತರಿಸಿದರು. ಹಿಂದುಳಿದ ವರ್ಗಗಳ ಅಧ್ಯಕ್ಷ ಎನ್.ಆರ್.ನಾಗೇಶ್ ನೇತೃತ್ವದಲ್ಲಿ 25ಕ್ಕೂ ಅಧಿಕ ಮಂದಿ ಕಾಂಗ್ರೆಸ್ ಸೇರ್ಪಡೆಗೊಂಡರು.

ಈ ವೇಳೆ ಎನ್.ಆರ್.ನಾಗೇಶ್ ಮಾತನಾಡಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಅವಧಿಯಲ್ಲಿ ಹಿಂದುಳಿದ ವರ್ಗಗಳ ಹಾಗೂ ಎಲ್ಲಾ ಸಮುದಾಯಕ್ಕೆ ಹೆಚ್ಚು ಯೋಜನೆಗಳನ್ನು ಒದಗಿಸಿ ಕೊಟ್ಟಿದ್ದಾರೆ. ಹಾಗೇ ಅವುಗಳು ಅನುಷ್ಠಾನಗೊಂಡಿವೆ. ಮತ್ತೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ, ಎಲ್ಲಾ ವರ್ಗಗಳೂ ಒಳಿತಾಗುವುದು. ಆದ್ದರಿಂದ ಎಲ್ಲರೂ ಒಟ್ಟಾಗಿ ಶ್ರಮಿಸಿ ಮತ್ತೊಮ್ಮೆ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರಲು ಶ್ರಮಿಸೋಣ ಎಂದರು.

ಕಾರ್ಯಕ್ರಮದಲ್ಲಿ ರಾಜ್ಯ ಒಬಿಸಿ ಘಟಕದ ಕಾರ್ಯದರ್ಶಿಗಳಾದ ಕಮಲ, ಪ್ರಕಾಶ್ ಕುಂಬಾರ್, ಮೊಗ್ಗಣ್ಣಚಾರಿ, ಶ್ರೀಕಾಂತ್ ಈಡಿಗ, ಒಬಿಸಿ ನಗರ ಘಟಕದ ಪದಾಧಿಕಾರಿಗಳಾದ ಯೋಗೇಶ್ ಉಪ್ಪಾರ್, ರವಿನಂದನ್ ಮಡಿವಾಳ, ರವಿ ಕುಂಬಾರ್, ಆಶಾ ಕುಂಬಾರ್, ಈಡಿಗ ಸಮಾಜದ ಆನಂದ್, ಶಿವಶಂಕರ್, ಮಂಗಳ, ಶಾಂತ, ಒಬಿಸಿ ಘಟಕದ ಬ್ಲಾಕ್ ಅಧ್ಯಕ್ಷರುಗಳಾದ ಸಿದ್ದರಾಜಚಾರಿ, ಮಹೇಂದ್ರ ಕಾಗಿನೆಲೆ, ರವಿ ಮಡಿವಾಳ, ವೆಂಕಟೇಶ್ ಗಾಣಿಗ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮೇ ಮೊದಲವಾರ SSLC ಫಲಿತಾಂಶ

ಮೈಸೂರು, ಏ. 21– ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಇಂದು ಪ್ರಕಟವಾಗಿದೆ. ಇನ್ನು ಎಸ್‌ಎಸ್‌ಎಲ್‌ಸಿ ಫಲಿತಾಂಶವೂ ಮೇ ಮೊದಲ ವಾರ ಪ್ರಕಟವಾಗುವ ಸಾಧ್ಯತೆ ಇದೆ.

ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಶೀಘ್ರದಲ್ಲೇ ಫಲಿತಾಂಶಗಳನ್ನು ಪ್ರಕಟಿಸುವ ವ್ಯವಸ್ಥೆ ಮಾಡುತ್ತಿದ್ದು, ಅದರಂತೆ ಇಂದು ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟವಾಗಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮೌಲ್ಯಮಾಪನವು ಅಂತಿಮ ಹಂತದಲ್ಲಿದ್ದು, ಮೇ ಮೊದಲವಾರ ಫಲಿತಾಂಶ ಪ್ರಕಟವಾಗುವುದು ಖಚಿತ ಎಂದು ಬಲ್ಲ ಮೂಲಗಳು ತಿಳಿಸಿವೆ.

ಬೆಂಗಳೂರಿನ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ವಕೀಲರ ಮೇಲೆ ಚಾಕುವಿನಿಂದ ಯುವತಿ ಹಲ್ಲೆ

ಬೆಂಗಳೂರು, ಏ.21– ಚೆಕ್‌ಬೌನ್ಸ್ ಪ್ರಕರಣವನ್ನು ಮುಂದುವರೆಸುತ್ತಿರುವುದಾಗಿ ಹೇಳಿದ ವಕೀಲರ ಮೇಲೆ ಯುವತಿಯೊಬ್ಬಳು ನ್ಯಾಯಾಲಯದ ಆವರಣದಲ್ಲೇ ಚಾಕುವಿನಿಂದ ಹಲ್ಲೆ ನಡೆಸಿ ಪರಾರಿಯಾದ ಘಟನೆ ನಗರದಲ್ಲಿ ನಡೆದಿದೆ. ಪ್ರಕರಣ ಸಂಬಂಧ ಕಾರ್ಪೊರೇಷನ್ ಸರ್ಕಲ್ ಬಳಿಯಿರುವ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಹಾಜರಾದ ಕಾಂಚನ ಎಂಬ ಯುವತಿ ವಕೀಲ ಕೃಷ್ಣಾರೆಡ್ಡಿ ಎಂಬುವರ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿ ಪರಾರಿಯಾಗಿದ್ದಾಳೆ. ಘಟನೆ ನಂತರ ಹಲಸೂರು ಗೇಟ್ ಪೊಲೀಸ್ ಠಾಣೆಗೆ ಕೃಷ್ಣಾರೆಡ್ಡಿ ಅವರು ದೂರು ನೀಡಿದ್ದು, ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಹರೀಶ್ ಎಂಬ ವ್ಯಕ್ತಿಯಿಂದ 5 ಲಕ್ಷ ಹಣ ಪಡೆದಿದ್ದ ಕಾಂಚನಾ ವಾಪಸ್ ನೀಡಿರಲಿಲ್ಲ. ಕಳೆದ 3 ವರ್ಷಗಳಿಂದ ಹಣ ವಾಪಸ್ ನೀಡುವುದಾಗಿ ಹೇಳುತ್ತಿದ್ದ ಕಾಂಚನಾ ಚೆಕ್ ಕೂಡ ನೀಡಿದ್ದಳು. ಆದರೆ ಈ ಚೆಕ್ ಬೌನ್ಸ್ ಆಗಿರುವ ಹಿನ್ನೆಲೆ ದೂರು ಕೂಡ ದಾಖಲಾಗಿತ್ತು. ಈ ಸಂಬಂಧ ಇಂದು ಕೋರ್ಟ್‌ಗೆ ಕಾಂಚನಾ ಹಾಜರಾಗಿದ್ದಾಳೆ. ಇತ್ತ ಹರೀಶ್ ಪರ ವಕೀಲರಾಗಿರುವ ಕೃಷ್ಣಾರೆಡ್ಡಿ ಪ್ರಕರಣವನ್ನು ಮುಂದುವರೆಸುವುದಾಗಿ ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ಪ್ರಕರಣವನ್ನು ಮುಂದುವರೆಸುವುದಾಗಿ ಹೇಳಿದ ಹಿನ್ನೆಲೆ ಕಾಂಚನಾ ಕೋಪಗೊಂಡು ಕೋರ್ಟ್ ಒಳಗಿಂದ ಹೊರ ಬಂದಿದ್ದಾಳೆ. ಇತ್ತ ಕಲಾಪ ಮುಗಿಸಿದ ಬಳಿಕ ನ್ಯಾಯಾಲಯದ ಆವರಣಕ್ಕೆ ಬಂದ ಕೃಷ್ಣಾರೆಡ್ಡಿಯನ್ನು ತಡೆದ ಕಾಂಚನಾ, ಮತ್ತೆ ಕೇಸ್ ಮುಂದುವರೆಸುತ್ತೀಯಾ ಎಂದು ಹೇಳಿ ಚಾಕುವಿನಿಂದ ಹಲ್ಲೆ ನಡೆಸಿ ಸ್ಥಳದಿಂದ ಪರಾರಿಯಾಗಿದ್ದಾಳೆ.

ಘಟನೆಯಲ್ಲಿ ಕೃಷ್ಣಾರೆಡ್ಡಿ ಮುಖಕ್ಕೆ ಗಾಯಗಳಾಗಿದ್ದು, ಚಿಕಿತ್ಸೆ ಪಡೆದುಕೊಂಡಿದ್ದಾರೆ. ಅಲ್ಲದೆ, ಹಲಸೂರು ಗೇಟ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಅಭ್ಯರ್ಥಿಗಳಿಗೆ ಬಿ–ಫಾರಂ ಕೊಡಲು ಹಣ ವಸೂಲಿ ಆರೋಪ

ಡಿಕೆಶಿ ವಿರುದ್ಧ ಚುನಾವಣಾ ಆಯೋಗಕ್ಕೆ ಶೋಭಾ ಕರಂದ್ಲಾಜೆ ದೂರು



ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಬಿ–ಫಾರಂ ನೀಡುವುದರ ಜೊತೆಗೆ ಅವರಿಂದ ಹಣವನ್ನೂ ವಸೂಲಿ ಮಾಡಿದ್ದಾರೆ ಎಂದು ಆರೋಪಿಸಿ, ಬಿಜೆಪಿ ರಾಜ್ಯ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕಿಯೂ ಆಗಿರುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದಾರೆ.

ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿಗಳಿಂದ ಕೆಪಿಸಿಸಿ ಹಣ ಸಂಗ್ರಹಿಸಿದೆ ಎಂದು ಡಿಕೆ ಶಿವಕುಮಾರ್ ಬಹಿರಂಗವಾಗಿ ಹೇಳಿಕೆ ನೀಡಿದ್ದಾರೆ. ಇದು ಚುನಾವಣಾ ಕಾನೂನುಗಳು ಮತ್ತು ಮಾದರಿ ನೀತಿ ಸಂಹಿತೆಯ ಗಂಭೀರ ಉಲ್ಲಂಘನೆಯಾಗಿದೆ ಎಂದು ಅವರು ದೂರಿನಲ್ಲಿ ಹೇಳಿದ್ದಾರೆ. ಈ ಕುರಿತ ವರದಿಯನ್ನು ಬಿಜೆಪಿ ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದು, ರಾಜಕೀಯ ಎಂದರೆ ಬಿಸಿನೆಸ್, ಅದನ್ನು ಈಗ ಡಿಕೆ ಶಿವಕುಮಾರ್ ವ್ಯಾಪಾರ ಮಾಡಿಕೊಂಡಿದ್ದಾರೆ. ಹಣ ತೆಗೆದುಕೊಂಡು ಟಿಕೆಟ್ ನೀಡಿ, ನೀತಿ ಸಂಹಿತೆ ಉಲ್ಲಂಘಿಸಿರುವ ಬಗ್ಗೆ ಶೋಭಾ ಕರಂದ್ಲಾಜೆ ಅವರು ಚುನಾವಣಾ ಆಯೋಗಕ್ಕೆ ದೂರು ನೀಡಿದ್ದಾರೆ ಎಂದು ತಿಳಿಸಿದೆ.

ಹರೀಶ್ ಬೋಪಣ್ಣ ಕಾಂಗ್ರೆಸ್‌ಗೆ ಗುಡ್‌ಬೈ



ವಿರಾಜಪೇಟೆ, ಏ.21–ಹಿರಿಯ ಕಾಂಗ್ರೆಸ್ ಮುಖಂಡ ಕದ್ದಣಿಯಂಡ ಹರೀಶ್ ಬೋಪಣ್ಣ ಅವರು ಚುನಾವಣಾ ಸಂದರ್ಭದಲ್ಲಿ ಕಾಂಗ್ರೆಸ್‌ಗೆ ಗುಡ್‌ಬೈ ಹೇಳಿದ್ದಾರೆ.

ಕೊಡಗು ಜಿಲ್ಲಾ ಕಾಂಗ್ರೆಸ್ ಪಕ್ಷದಲ್ಲಿ ಕಳೆದ ಕೆಲವಾರು ವರ್ಷಗಳಿಂದ ಸಕ್ರೀಯ ಕಾರ್ಯಕರ್ತರಾಗಿ ಸೇವೆ ಸಲ್ಲಿಸುತ್ತಿದ್ದ ಹರೀಶ್ ಬೋಪಣ್ಣ ಇಂದು(ಏ.21) ಕೊಡಗು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಿಗೆ ರಾಜೀನಾಮೆ ಪತ್ರವನ್ನು ರವಾನಿಸಿದ್ದಾರೆ. ವಿರಾಜಪೇಟೆ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದ ಹರೀಶ್ ಬೋಪಣ್ಣ, ಈ ಹಿಂದೆ ಉಸ್ತುವಾರಿ ಸಚಿವರಾಗಿದ್ದ ಎ.ಆರ್.ಸೀತಾರಾಮ್ ಅವರ ನಿಕಟವರ್ತಿಯಾಗಿದ್ದರು. ಜೊತೆಗೆ ತಾಲೂಕಿನಲ್ಲಿ ಅನೇಕ ಸಮಾಜ ಸೇವೆ ಮತ್ತು ಜನಪರ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ತಮಗೆ ಟಿಕೆಟ್ ಸಿಗದಿದ್ದರಿಂದ ಅಸಮಾಧಾನಗೊಂಡು ರಾಜೀನಾಮೆ ನೀಡಿರುವ ಅವರು, ತಮ್ಮ ಬೆಂಬಲಿಗರು ಹಾಗೂ ಹಿತೈಷಿಗಳೊಂದಿಗೆ ಚರ್ಚೆ ನಡೆಸಿ, ಈ ನಿರ್ಧಾರ ಕೈಗೊಂಡಿರುವುದಾಗಿ ತಿಳಿಸಿದ್ದಾರೆ.

ರಾಜ್ಯದ ಹಲವೆಡೆ 5 ದಿನ ಭಾರೀ ಮಳೆ ಸಾಧ್ಯತೆ

ಬೆಂಗಳೂರು, ಏ.21– ತಮಿಳುನಾಡಿನಲ್ಲಿ ಟ್ರಫ್ ಉಂಟಾಗಿರುವ ಹಿನ್ನೆಲೆ ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ 5 ದಿನ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬೆಂಗಳೂರು ನಗರದಲ್ಲಿ 3 ದಿನಗಳ ಕಾಲ ಮಳೆಯಾಗುವ ಸಾಧ್ಯತೆಯಿದ್ದು, ದಕ್ಷಿಣ ಹಾಗೂ ಉತ್ತರ ಒಳನಾಡು, ಕರಾವಳಿಯಲ್ಲಿ ಮಳೆ ಆಗಲಿದೆ. ದಕ್ಷಿಣ ಒಳನಾಡಿನಲ್ಲಿ ಇಂದಿನಿಂದ ಐದು ದಿನ ಮಳೆ ಸಾಧ್ಯತೆಯಿದ್ದು, ಕೊಡಗು, ಚಾಮರಾಜನಗರ, ಮೈಸೂರು, ರಾಮನಗರ, ಮಂಡ್ಯ ವಿಜಯನಗರ, ಶಿವಮೊಗ್ಗ, ಹಾಸನ ತುಮಕೂರು, ಚಿಕ್ಕಮಗಳೂರು, ದಾವಣಗೆರೆ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ 15 ಜಿಲ್ಲೆಗಳಿಗೆ ಮಳೆಯ ಅಲರ್ಟ್ ಘೋಷಿಸಿದೆ. ಉತ್ತರ ಒಳನಾಡಿನ 8 ಜಿಲ್ಲೆಗಳಲ್ಲಿ 3 ದಿನ ಮಳೆಯಾಗುವ ಸಂಭವವಿದೆ. ಮತ್ತು ಕರಾವಳಿ ಜಿಲ್ಲೆಗಳಲ್ಲಿ 2 ದಿನಗಳ ಕಾಲ ಭಾರೀ ಮಳೆಯಾಗುವ ಸಾಧ್ಯತೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳಿಂದ ಮುನ್ಸೂಚನೆ ನೀಡಲಾಗಿದೆ.

ಮಾಡಾಳ್ ವಿರೂಪಾಕ್ಷಪ್ಪ ಪುತ್ರನಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು



ಬೆಂಗಳೂರು, ಏ.21– ಗುತ್ತಿಗೆದಾರರಿಂದ 40 ಲಕ್ಷ ರೂಪಾಯಿ ಲಂಚ ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತರ ಬಲೆಗೆ ಸಿಕ್ಕಿಬಿದ್ದಿದ್ದ ಬೆಂಗಳೂರು ಜಲ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ಪ್ರಧಾನ ಲೆಕ್ಕಾಧಿಕಾರಿ ಪ್ರಶಾಂತ್ ಮಾಡಾಳ್ ಅವರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.


ಬಿಜೆಪಿ ಶಾಸಕರ ಪುತ್ರ ಮಾಡಾಳ್ ಪ್ರಶಾಂತ್ ಅವರನ್ನು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (ಕೆಎಸ್‌ಡಿಎಲ್) ಕಚೇರಿಯಲ್ಲಿ ತಂದೆಯ ಪರವಾಗಿ 40 ಲಕ್ಷ ರೂಪಾಯಿ ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ಮಾ.2ರಂದು ಬಂಧಿಸಿದ್ದರು.

ಪ್ರಶಾಂತ್ ಮಾಡಾಳ್ ಬಂಧನದ ನಂತರ ಲೋಕಾಯುಕ್ತ ಪೊಲೀಸರು ಮಾಡಾಳ್ ವಿರೂಪಾಕ್ಷಪ್ಪ ಅವರ ಮನೆ ಮತ್ತು ಕಚೇರಿಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿ 8.23 ಕೋಟಿ ರೂಪಾಯಿ ಹಣವನ್ನು ವಶಪಡಿಸಿಕೊಂಡಿದ್ದಾರೆ.





ಎಸ್‌ಆರ್‌ಹೆಚ್ ವಿರುದ್ಧ ಸಿಎಸ್‌ಕೆಗೆ ಭರ್ಜರಿ ಜಯ



ಚೆನ್ನೈ, ಏ.21– ಡಿವೋನ್ ಕಾನ್ವೆ ಅವರ ಅರ್ಧ ಶತಕ ಹಾಗೂ ರವೀಂದ್ರ ಜಡೇಜಾ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಪ್ರಸಕ್ತ ಟೂರ್ನಿಯಲ್ಲಿ 4ನೇ ಗೆಲುವಿನೊಂದಿಗೆ ಅಂಕಪಟ್ಟಿಯಲ್ಲಿ 8 ಅಂಕಗಳಿಸಿ 3ನೇ ಸ್ಥಾನಕ್ಕೇರಿದೆ.

ಇಲ್ಲಿನ ಎಂ.ಚಿದಂಬರಂ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 134ರನ್‌ಗಳ ಸಾಧಾರಣ ಮೊತ್ತ ದಾಖಲಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಹ್ಯಾರಿ ಬ್ರೂಕ್ 3 ಬೌಂಡರಿ ಒಳಗೊಂಡ 18 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಬಳಿಕ 1 ಸಿಕ್ಸರ್, 3 ಬೌಂಡರಿ ಒಳಗೊಂಡ 34ರನ್ ಗಳಿಸಿದ್ದ ಅಭಿಷೇಕ್ ಶರ್ಮಾ 34ರನ್ ಪೇರಿಸಿ ನಿರ್ಗಮಿಸಿದರು. ಬಳಿಕ ನಿರಂತರವಾಗಿ ವಿಕೆಟ್ ಕಳೆದುಕೊಂಡ ಹೈದರಾಬಾದ್ ಕೇವಲ 134 ರನ್ ಗಳಿಸಲಷ್ಟೇ ಸಾಧ್ಯವಾಯಿತು. ತಂಡದ ಪರ ರಾಹುಲ್ ತ್ರಿಪಾಠಿ 21, ಐಡನ್ ಮಾರ್ಕ್ರಾಮ್ 12, ಕ್ಲಾಸೆನ್ 17, ಮಯಾಂಕ್ ಅಗರ್ವಾಲ್ 2, ಮಾರ್ಕೋ ಜಾನ್ಸೆನ್ 17, ವಾಷಿಂಗ್‌ಟನ್ ಸುಂದರ್ 9 ರನ್ ಗಳಿಸಿದರು. ಚೆನ್ನೈ ಪರ ರವೀಂದ್ರ ಜಡೇಜಾ 3, ಆಕಾಶ್ ಸಿಂಗ್, ಮತೀಶ ಪತಿರಾನ ಹಾಗೂ ಮಹೇಶ್ ತೀಕ್ಷಣ ತಲಾ ಒಂದೊಂದು ವಿಕೆಟ್ ಕಬಳಿಸಿದರು.

135 ರನ್‌ಗಳ ಸಾಧಾರಣ ಗೆಲುವಿನ ಗುರಿ ಬೆನ್ನತ್ತಿದ ಚೆನ್ನೈ ಸೂಪರ್ ಕಿಂಗ್ಸ್ 18.4 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 138 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಋತುರಾಜ್ ಗಾಯಕ್ವಾಡ್ ಹಾಗೂ ಡಿವೋನ್ ಕಾನ್ವೆ ಮೊದಲ ವಿಕೆಟ್‌ಗೆ 87ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿ ಕೊಟ್ಟರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಗಾಯಕ್ವಾಡ್ 35ರನ್ ಗಳಿಸಿ ರನೌಟ್‌ಗೆ ಬಲಿಯಾದರು. ನಂತರ ಬಂದ ಅಜಿಂಕ್ಯಾ ರಹಾನೆ ಹಾಗೂ ಅಂಬಟಿ ರಾಯುಡು ತಲಾ 9 ರನ್ ಗಳಿಸಿ ಮಯಾಂಕ್ ಮರ್ಕಂಡೆ ಅವರಿಗೆ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ತಾಳ್ಮೆ ಹಾಗೂ ಬಿರುಸಿನ ಆಟವಾಡಿದ ಡಿವೋನ್ ಕಾನ್ವೆ 57 ಎಸೆತಗಳಲ್ಲಿ 12 ಬೌಂಡರಿ, 1 ಸಿಕ್ಸರ್ ಒಳಗೊಂಡ ಅಜೇಯ 77 ರನ್ ಗಳಿಸಿ ತಂಡಕ್ಕೆ ಜಯ ತಂದು ಕೊಟ್ಟರು. ಹೈದರಾಬಾದ್ ಪರ ಮಯಾಂಕ್ ಮರ್ಕಂಡೆ 2 ವಿಕೆಟ್ ಪಡೆದರು. ಚೆನ್ನೈ ಪರ ರವೀಂದ್ರ ಜಡೇಜಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ರಾಜಸ್ಥಾನ್	6	4	2	0	8
ಲಕ್ನೋ	6	4	2	0	8
ಸಿಎಸ್‌ಕೆ	6	4	2	0	8
ಗುಜರಾತ್	5	3	2	0	6
ಆರ್‌ಸಿಬಿ	6	3	3	0	6
ಮುಂಬೈ	5	3	2	0	6
ಪಂಜಾಬ್	6	3	3	0	6
ಕೋಲ್ಕತ್ತಾ	6	2	4	0	4
ಎಸ್‌ಆರ್‌ಹೆಚ್	6	2	4	0	4
ಡೆಲ್ಲಿ	6	1	5	0	2

ಇಂದಿನ ಪಂದ್ಯಗಳು

[ಏಪ್ರಿಲ್ 22]

ಲಕ್ನೋ V/S ಗುಜರಾತ್
ಸ್ಥಳ: ಅಟಲ್ ಬಿಹಾರಿ ವಾಜಪೇಯಿ ಕ್ರಿಕೆಟ್ ಮೈದಾನ್, ಲಕ್ನೋ
ಸಮಯ: ಮಧ್ಯಾಹ್ನ 3.30

ಮುಂಬೈ V/S ಪಂಜಾಬ್
ಸ್ಥಳ: ವಾಂಖೆಡೆ ಮೈದಾನ ಮುಂಬೈ
ಸಮಯ: ರಾತ್ರಿ 7.30

ಜೆಎಸ್‌ಎಸ್ ಮಹಿಳಾ ಪಿಯು ಕಾಲೇಜಿಗೆ ಶೇ.90.03 ಫಲಿತಾಂಶ



ಮೈಸೂರು,ಏ.21–ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನ 80 ವಿದ್ಯಾರ್ಥಿನಿಯರು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದು, ಕಾಲೇಜು ಶೇ.90.03 ಫಲಿತಾಂಶವನ್ನು ಪಡೆದುಕೊಂಡಿದೆ.

ಪರೀಕ್ಷೆಗೆ ಹಾಜರಾದ 321 ವಿದ್ಯಾರ್ಥಿನಿಯರಲ್ಲಿ 289 ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದು, ಅದರಲ್ಲಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗದ 80 ವಿದ್ಯಾರ್ಥಿನಿಯರು ಅತ್ಯುನ್ನತ ಶ್ರೇಣಿ ಪಡೆದು ತೇರ್ಗಡೆಯಾಗಿದ್ದು, ವಾಣಿಜ್ಯ ವಿಭಾಗದಿಂದ ಬಾಂದವ್ಯ–592, ವಿಜ್ಞಾನ ವಿಭಾಗದಿಂದ ಕೆ.ಇಂಚರ–580 ಮತ್ತು ಕಲಾ ಆಂಗ್ಲ ಮಾಧ್ಯಮದಿಂದ ವಿ.ಎಸ್.ಕೋಪಿಕಾ–579 ಅಂಕಗಳನ್ನು ಪಡೆದುಕೊಂಡಿದ್ದಾರೆ.

161 ವಿದ್ಯಾರ್ಥಿನಿಯರು ಪ್ರಥಮ ದರ್ಜೆ ಹಾಗೂ 31 ವಿದ್ಯಾರ್ಥಿನಿಯರು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗುವ ಮೂಲಕ ಕಾಲೇಜಿನ ಮತ್ತು ಅವರ ತಂದೆ–ತಾಯಿಗೆ ಗೌರವ ತಂದಿರುವ ವಿದ್ಯಾರ್ಥಿನಿಯರಿಗೆ ಸಂಸ್ಥೆ, ಕಾಲೇಜಿನ ಪ್ರಾಂಶುಪಾಲರು ಹಾಗೂ ಬೋಧಕ ವೃಂದದಿಂದ ಅಭಿನಂದೆಗಳು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.



ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ.ಸೋಮಶೇಖರ್ ಸಿದ್ದಗಂಗಾ ಕ್ಷೇತ್ರದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು. ಈ ವೇಳೆ ಮೈಸೂರಿನ ಮಡಿವಾಳಸ್ವಾಮಿ ಮಠದ ಪೀಠಾಧ್ಯಕ್ಷ ಶ್ರೀ ಅಡವಿ ಮಹಾಸ್ವಾಮಿಗಳು, ಪ್ರಚಾರ ಸಮಿತಿ ಅಧ್ಯಕ್ಷ ಯೋಗೇಶ್, ವೀರಶೈವ ಮುಖಂಡರಾದ ಚಿನ್ನಸ್ವಾಮಿ, ಶಿವಕುಮಾರ್ ಉಪಸ್ಥಿತರಿದ್ದರು.



ಕಾಂಗ್ರೆಸ್ ಅಭ್ಯರ್ಥಿ ಪಡುವಾರಹಳ್ಳಿಯ ಯೋಗ ನರಸಿಂಹೇಗೌಡ ಹಾಗೂ ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ, ಜೆಡಿಎಸ್ ಮುಖಂಡ ವಿ. ಮಧು ಶುಕ್ರವಾರ ಶಾಸಕ ಎಲ್.ನಾಗೇಂದ್ರ ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಯಾದರು. ಈ ವೇಳೆ ಎಲ್. ಚೌಡಪ್ಪ, ಎಂ.ಜೆ.ಕಿರಣ್ ಗೌಡ, ಎಸ್.ಬಿ.ಶಿವು, ಪಡುವಾರಹಳ್ಳಿಯ ಎಂ. ರಾಮಕೃಷ್ಣ, ಲೋಕನಾಯಕನಗರದ ಶ್ರೀನಿವಾಸ್ ಗೌಡ, ಜಯಣ್ಣ, ಬುಲೆಟ್ ಬಸವರಾಜು, ದೀಪಕ್ ಗೌಡ, ಅಶೋಕ್, ಪ್ರಕಾಶ್ ಇನ್ನಿತರರಿದ್ದರು.

ಜೆಎಸ್‌ಎಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ನಿವೇಶನಾಕಾಂಕ್ಷಿಗಳಿಗೆ 55.14 ಲಕ್ಷ ವಂಚನೆ

ಕ್ರೈಂ ಬಾಕ್ಸ್

ಮೈಸೂರು, ಏ. 21– ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನಿವೇಶಾಕಾಂಕ್ಷಿಗಳಿಂದ ಪಡೆದ ಹಣಕ್ಕೆ ನಕಲಿ ಬಿಲ್ ನೀಡಿ 55.14 ಲಕ್ಷ ರೂ. ವಂಚಿಸಿರುವ ಬಗ್ಗೆ ಸಂಘದ ಇಬ್ಬರು ಹಿಂದಿನ ಸಿಬ್ಬಂದಿ ವಿರುದ್ಧ ದೂರು ದಾಖಲಾಗಿದೆ.

ಸಂಘದಲ್ಲಿ ಈ ಹಿಂದೆ ಎಸ್‌ಡಿಎ ಆಗಿದ್ದ ಬಿ.ಪಿ. ಜಗದೀಶ್ ಮತ್ತು ಡಿ ಗ್ರೂಪ್ ನೌಕರನಾಗಿದ್ದ ಕೆ. ರಾಜೇಂದ್ರ ಆರೋಪಕ್ಕೆ ಗುರಿಯಾದವರಾಗಿದ್ದು, ಇವರುಗಳು 2012ರಿಂದ 2017ರವರೆಗಿನ ಅವಧಿಯಲ್ಲಿ ನಿವೇಶಾಕಾಂಕ್ಷಿಗಳಾದ ಕೆ.ಎಸ್. ಸುಧಾ, ಸುಜಾತ, ಹೆಚ್.ಆರ್. ಉಮೇಶ್, ನಾಗರತ್ನಮ್ಮ, ಡಿ.ಪಿ. ಸಿದ್ದಪ್ಪ, ಬಿ.ಎಸ್. ಲೋಕಮಾತಾ, ಗಗನ್ ಚಿಲ್ಲಾಳ್, ಎಸ್. ಬಿಂದು ಬಿ. ನಾಗರಾಜು, ಇ.ಎನ್. ಮಂಜೇಶ್, ಧರ್ಮರಾಜ್, ರಾಮೇಗೌಡ, ಮಹಾಲಕ್ಷ್ಮಿ, ಸೌಮ್ಯ, ಬಿ.ಸಿ. ಭವ್ಯ ಮತ್ತು ಜಲಜ ಎಂಬುವರು ಪಾವತಿಸಿದ ಒಟ್ಟು 55,14,945 ರೂ.ಗಳಿಗೆ ನಕಲಿ ಬಿಲ್ ನೀಡಿ ವಂಚಿಸಿದ್ದಾರೆ ಎಂದು ಸಂಘದ ಕಾರ್ಯದರ್ಶಿ ಟಿ.ಎಂ. ಮಹದೇವಸ್ವಾಮಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಆರೋಪಿಗಳು ಮೂಲ ಬಿಲ್‌ನಲ್ಲಿರುವ ಕ್ರಮ ಸಂಖ್ಯೆಯನ್ನೇ ಬಳಸಿಕೊಂಡು ನಕಲಿ ಬಿಲ್ ತಯಾರಿಸಿ ಕಾರ್ಯದರ್ಶಿಯವರ ಸಹಿಯನ್ನು ನಕಲು ಮಾಡಿ ಸಂಘದ ಸದಸ್ಯರಿಗೆ ಮತ್ತು ಸಂಘಕ್ಕೆ ದ್ರೋಹ ಮಾಡಿದ್ದಾರೆ ಎಂದು ನೀಡಿದ ದೂರನ್ನು ದಾಖಲಿಸಿ ಕೊಂಡಿರುವ ಉದಯಗಿರಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಪಾರ್ಟ್‌ಟೈಂ ಕೆಲಸ ಕೊಡಿಸುವುದಾಗಿ ಹೇಳಿ ಶಿಕ್ಷಕಿಗೆ 1.60 ಲಕ್ಷ ವಂಚನೆ

ಮಡಿಕೇರಿ, ಏ. 21– ಪಾರ್ಟ್‌ಟೈಂ ಕೆಲಸ ನೀಡುವುದಾಗಿ ಮೊಬೈಲ್‌ಗೆ ಮೆಸೇಜ್ ಮಾಡಿ ನವೋದಯ ವಿದ್ಯಾಲಯದ ಕಂಪ್ಯೂಟರ್ ಶಿಕ್ಷಕಿಗೆ 1.60 ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಕೊಡಗಿನ ಗಾಳಿಬೀಡುವಿನಲ್ಲಿರುವ ನವೋದಯ ವಿದ್ಯಾಲಯದ ಕಂಪ್ಯೂಟರ್ ಶಿಕ್ಷಕಿ ಮೃನಾಲಿನಿ ಮೇಹತೊ(35) ವಂಚನೆಗೊಳಗಾದವರಾಗಿದ್ದು, ಪಾರ್ಟ್‌ಟೈಂ ಕೆಲಸ ಕೊಡುವುದಾಗಿ ಇವರ ಮೊಬೈಲ್‌ಗೆ ಬಂದ ಸಂದೇಶವನ್ನು ನಂಬಿ ಇವರು ವಂಚಕರು ಹೇಳಿದಂತೆ 1.60 ಲಕ್ಷ ರೂ.ಗಳನ್ನು ಗೂಗಲ್ ಪೇ ಮೂಲಕ ಅವರ ಖಾತೆಗೆ ವರ್ಗಾಯಿಸಿದ್ದಾರೆ. ಕೆಲಸವನ್ನೂ ಕೊಡದೇ ಮತ್ತೇ ಮತ್ತೆ ಹಣಕ್ಕೆ ಬೇಡಿಕೆ ಇಟ್ಟಾಗ ಅನುಮಾನಗೊಂಡ ಇವರು, ಕೊಡಗು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಜೆಎಸ್‌ಎಸ್ ಪಿಯು ಕಾಲೇಜಿಗೆ ಶೇ. 72.5 ಫಲಿತಾಂಶ



ಎಂ. ಮೇಘ | ತುಷಾರ್ | ಕೀರ್ತನಾ | ಪ್ರತೀಕ್ | ಸುಷ್ಮಾ

ಮೈಸೂರು, ಏ. 21– ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ. 72.50ರಷ್ಟು ಫಲಿತಾಂಶ ಪಡೆದಿದೆ. ಒಟ್ಟು 211 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಅವರಲ್ಲಿ 12 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ಹಾಗೂ 61 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಎಂ. ಮೇಘ(541), ಟಿ.ಹೆಚ್. ಹರ್ಷ(516), ಹೆಚ್.ಡಿ. ಕಾರ್ತಿಕ್(511), ಎಸ್.ಬಿ. ತುಷಾರ್(540), ಡಿ. ಸಚ್ಚಿನ್(511), ವಾಣಿಜ್ಯ ವಿಭಾಗದಲ್ಲಿ ಎನ್.ಎಸ್. ಕೀರ್ತನ(552), ಎಂ.ಪಿ. ಮನೋಜ್(510), ಎ.ಜಿ. ಪ್ರತೀಕ್(539), ಎಂ. ದೀಕ್ಷಿತಾ(533), ಎಂ.ಆರ್. ಮಹೇಂದ್ರ(528), ಎಂ.ಎನ್. ವಿವೇಕ(521), ಕಲಾ ವಿಭಾಗದಲ್ಲಿ ಸುಷ್ಮಾ ಸಾಮಂತಗೌಡ–550 ಅಂಕ ಪಡೆದಿದ್ದಾರೆ.

ಹರಿ ವಿದ್ಯಾಲಯಕ್ಕೆ ದ್ವಿತೀಯ ಪಿಯುನಲ್ಲಿ ಶೇ.87.71 ಫಲಿತಾಂಶ



ಪ್ರಜ್ವಲ್ | ಕುಶಾಲ್ | ಕುಶಾಗ್ರ | ಅಮೃತ | ಸವಿತಾ

ಮೈಸೂರು,ಏ.21– ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಮೈಸೂರಿನ ಬೋಗಾದಿಯಲ್ಲಿರುವ ಹರಿ ವಿದ್ಯಾಲಯ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆಗೈದಿದ್ದಾರೆ. ಕಾಲೇಜಿಗೆ ವಿಜ್ಞಾನ ವಿಭಾಗದಿಂದ ಶೇ.100 ಹಾಗೂ ವಾಣಿಜ್ಯ ವಿಭಾಗದಲ್ಲಿ ಶೇ.87.71 ಫಲಿತಾಂಶಗಳಿಸಿದೆ. ವಿಜ್ಞಾನ ವಿಭಾಗದ ಆರ್.ಪ್ರಜ್ವಲ್–541, ಕುಶಾಲ್ ಗೋವಿಂದ–506, ಜಿ.ಮನೀಶ್–486, ಶ್ರೀರಂಗ ಪ್ರಮೋದ್–478, ಜಿ.ಎಸ್.ಮಾಯಾಶ್ರೀ–428 ಅಂಕಗಳನ್ನು ಪಡೆದುಕೊಂಡರೆ, ವಾಣಿಜ್ಯ ವಿಭಾಗದಿಂದ ಕುಶಾಗ್ರ ಎಸ್.ಪ್ರಭು–548, ಎಂ.ಅಮೃತ–536, ಸವಿತಾ ಬಿ.ಹೊಸಮನೆ–510, ಆರ್.ಪವನ್–450, ವರುಣ್ ವಿಜಯ್–426, ಜಿ.ಲಿಖಿತ್–425 ಅಂಕಗಳನ್ನು ಪಡೆದು ತೇರ್ಗಡೆಯಾಗಿದ್ದಾರೆ.

ಶಾರದಾವಿಲಾಸ ಪದವಿಪೂರ್ವ ಕಾಲೇಜಿಗೆ ಶೇ.87.28 ಫಲಿತಾಂಶ

ಮೈಸೂರು, ಏ.21– ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾವಿಲಾಸ ಪದವಿಪೂರ್ವ ಕಾಲೇಜಿಗೆ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಯಲ್ಲಿ 87.28 ಫಲಿತಾಂಶ ಲಭಿಸಿದೆ.

ಕಾಲೇಜಿನ ಒಟ್ಟು 354 ವಿದ್ಯಾರ್ಥಿಗಳು ಪರೀಕ್ಷೆ ತೆಗದುಕೊಂಡಿದ್ದು 309 ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ. ಇದರಲ್ಲಿ ವಿಜ್ಞಾನ ವಿಭಾಗದಲ್ಲಿ 208 ವಿದ್ಯಾರ್ಥಿಗಳ ಪೈಕಿ 186 ವಿದ್ಯಾರ್ಥಿಗಳು ತೇರ್ಗಡೆ ಹೊಂದಿ ಶೇ.89.42 ರಷ್ಟು ಫಲಿತಾಂಶ ದೊರಕಿದೆ. ವಾಣಿಜ್ಯ ವಿಭಾಗದಲ್ಲಿ 146 ವಿದ್ಯಾರ್ಥಿಗಳ ಪೈಕಿ 123 ವಿದ್ಯಾರ್ಥಿಗಳು ತೇರ್ಗಡೆ ಹೊಂದಿ 84.24 ರಷ್ಟು ಶೇಕಡವಾರು ಫಲಿತಾಂಶ ಲಭಿಸಿದೆ. ಅತ್ಯುನ್ನತ ಶ್ರೇಣಿಯಲ್ಲಿ 50 ವಿದ್ಯಾರ್ಥಿಗಳು, ಪ್ರಥಮ ದರ್ಜೆ 170 ವಿದ್ಯಾರ್ಥಿಗಳು, ದ್ವಿತೀಯ ದರ್ಜೆ 60 ವಿದ್ಯಾರ್ಥಿಗಳು, 25 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಸಿ.ಕೆ.ಅಶೋಕ್ ಕುಮಾರ್ ತಿಳಿಸಿದ್ದಾರೆ.

ದೀಪಾ ಪದವಿಪೂರ್ವ ಕಾಲೇಜಿಗೆ ನೂರರಷ್ಟು ಫಲಿತಾಂಶ



ವರ್ಷಿತ | ಕಾವ್ಯ | ಮಾನಸ | ಐಶ್ವರ್ಯ | ಅನನ್ಯ

ಮೈಸೂರು, ಏ.21– ಮೈಸೂರಿನ ಬೋಗಾದಿಯ ರೂಪಾನಗರದ ದೀಪಾ ಸಂಯುಕ್ತ ಪದವಿಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ 2023ರ ಫಲಿತಾಂಶ ಶೇ.100ರಷ್ಟು ಬಂದಿದೆ. ಇದರಲ್ಲಿ ಅತ್ಯುನ್ನತ ಶ್ರೇಣಿ 9, ಪ್ರಥಮ ದರ್ಜೆ 25 ಸೇರಿರುತ್ತದೆ. ವಾಣಿಜ್ಯ ವಿಭಾಗದಲ್ಲಿ ಶೇಕಡಾ 100ರಷ್ಟು ಫಲಿತಾಂಶ ಲಭಿಸಿದೆ. ವರ್ಷಿತ.ಪಿ (589), ಕಾವ್ಯ ಕೆಯು. (545) ಮಾನಸ .ಜೆ (540) ಐಶ್ವರ್ಯ ಬಿ.ಎಂ.(527) ಅನನ್ಯ .ಎಂ(523)

ಬಿಜಿಎಸ್ ಪಿಯು ಕಾಲೇಜಿಗೆ ಶೇ. 99.23 ಫಲಿತಾಂಶ

ಮೈಸೂರು, ಏ. 21– ಮೈಸೂರಿನ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ಬಿಜಿಎಸ್ ಪಿಯು ಕಾಲೇಜಿಗೆ ಪ್ರಥಮ ಪಿಯು ಪರೀಕ್ಷೆಯಲ್ಲಿ ಶೇ. 99.23 ಫಲಿತಾಂಶ ಬಂದಿದೆ.

ಶಾಲೆಯ ಒಟ್ಟು 786 ವಿದ್ಯಾರ್ಥಿಗಳ ಪೈಕಿ 780 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದು, ಇವರನ್ನು 325 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಹಾಗೂ 280 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಿಜ್ಞಾನ ವಿಭಾಗದ ಜಾನ್ಹವಿ ಚೇತನ್ ಪಟೇಲ್ 593 ಅಂಕ ಗಳಿಸಿ ರಾಜ್ಯಕ್ಕೆ 4ನೇ ಸ್ಥಾನ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನ ಪಡೆಸಿದ್ದಾಳೆ. ವಾಣಿಜ್ಯ ವಿಭಾಗದಲ್ಲಿ ಪಿ. ನಿಖಿತಾ 595 ಅಂಕಗಳೊಂದಿಗೆ ರಾಜ್ಯಕ್ಕೆ 3ನೇ ಸ್ಥಾನ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ.

ಶಾರದಾದೇವಿ ನಗರ ಭಾಗದ ಅಭಿವೃದ್ಧಿಗೆ ಶ್ರಮಿಸುವೆ : ಶಾಸಕ ಭರವಸೆ





ಮೈಸೂರು, ಏ.21(ಎಸ್‌ಪಿಎನ್)– ಮೈಸೂರಿನ ನಿವೇದಿತಾ ನಗರ, ಶಾರದಾದೇವಿ ನಗರ, ರಾಮಕೃಷ್ಣ ನಗರ, ಆನಂದನಗರ ಹಾಗೂ ಇತರೆ ಬಡಾವಣೆಯ ಹಿರಿಯ ಬುದ್ಧಿಜೀವಿಗಳು ಒಗ್ಗೂಡಿ ಹಿರಿಯ ನಾಗರಿಕರ ವೇದಿಕೆ ಸ್ಥಾಪಿಸಿ, ಒಗ್ಗಟ್ಟು ಪ್ರದರ್ಶಿಸಿರುವುದು ಉತ್ತಮ ಬೆಳವಣಿಗೆ ಎಂದು ಶಾಸಕ ಜಿ.ಟಿ.ದೇವೇಗೌಡ ಅಭಿಪ್ರಾಯಪಟ್ಟರು.

ಮೈಸೂರು ನಿವೇದಿತಾನಗರದ ಸುಬ್ಬರಾವ್ ಪಾರ್ಕ್‌ನಲ್ಲಿರುವ ಅನುಭವ ಮಂಟಪದಲ್ಲಿ ಹಿರಿಯ ನಾಗರಿಕ ವೇದಿಕೆ ವತಿಯಿಂದ ಆಯೋಜಿಸಿದ್ದ ಹಿರಿಯ ನಾಗರಿಕರ ವೇದಿಕೆ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ, ತೆಂಗಿನ ಸಸಿ ನೆಟ್ಟು, ಅವರು ಮಾತನಾಡಿದರು.

ಈ ಭಾಗದಲ್ಲಿ ಅನೇಕ ಹಿರಿಯರು ಸಿಎಫ್‌ಆರ್‌ಟಿಐ, ಮೈಸೂರು ವಿವಿ ಹಾಗೂ ಬೇರೆ ಬೇರೆ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ, ನಿವೃತ್ತಿ ಜೀವನವನ್ನು ನಡೆಸುತ್ತಿದ್ದೀರಿ. ಅಲ್ಲದೆ, ಮೈಸೂರಿನ ಬೆಳವಣಿಗೆಗೂ ಸಲಹೆ–ಸಹಕಾರ ನೀಡುತ್ತಿರುವುದು ಸಂತೋಷದ ಸಂಗತಿ ಎಂದರು.

ಮುಂದಿನ ದಿನಗಳಲ್ಲಿ ಹಿರಿಯರ ನಾಗರಿಕ ವೇದಿಕೆಯ ಪದಾಧಿಕಾರಿಗಳು ಮೈಸೂರಿನ ಬೆಳವಣಿಗೆಗಳಿಗೆ ನೀಡುವ ಸಲಹೆ–ಸೂಚನೆಗಳನ್ನು ಚಾಚು ತಪ್ಪದೇ ಪಾಲಿಸುತ್ತೇನೆ. ಅಲ್ಲದೆ, ಮುಂದಿನ ದಿನಗಳಲ್ಲಿ ನಿಮ್ಮ ಬಡಾವಣೆಗಳ ಸಮಸ್ಯೆಗಳ ಕುರಿತು ಖುದ್ದು ನಾನೇ ನಿಂತು ಬಗೆಹರಿಸುತ್ತೇನೆ ಎಂದು ಭರವಸೆ ನೀಡಿದರು.

ಈ ವಾರ್ಡ್‌ನ ಜನಪ್ರತಿನಿಧಿಗಳು ಕೇಳಿರುವ ಯೋಜನೆಗಳಿಗೆ ನನ್ನ ಅಧಿಕಾರಾವಧಿಯಲ್ಲಿ ಸಾಧ್ಯವಾದಷ್ಟು ಅನುದಾನ ನೀಡಿ, ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಮುಂದಿನ ಚುನಾವಣೆಯಲ್ಲೂ ನಾನು ಆಯ್ಕೆಯಾದರೆ, ಹಿರಿಯ ನಾಗರಿಕರ ಎಲ್ಲಾ ಮನವಿಗಳಿಗೆ ಸ್ಪಂದಿಸುತ್ತೇನೆ ಎಂದ ಶಾಸಕರು, ನಿಮ್ಮ ಬೇಡಿಕೆಗಳಿಗೆ ಸ್ಪಂದಿಸಲು ಅನುಕೂಲವಾಗುವಂತೆ ಈ ಬಡಾವಣೆಯ ಎಲ್ಲಾ ನಾಗರಿಕರು ಸೇರಿ ಹಿರಿಯ ನಾಗರಿಕ ವೇದಿಕೆ ಆರಂಭಿಸಿದ್ದೀರಿ, ಈ ವೇದಿಕೆಯಿಂದ ಈ ಭಾಗದ ಬಡಾವಣೆಗಳ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದರು.

ಈ ವೇದಿಕೆಯಲ್ಲಿ ವಿವಿಧ ಇಲಾಖೆಯಲ್ಲಿ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವವರು ಇದ್ದೀರಿ. ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿರುವವರು ಇದ್ದೀರಿ. ಸಾಮಾಜಿಕ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡವರು ಇದ್ದಾರೆ. ಹಾಗಾಗಿ ನಿಮ್ಮ ಚಿಂತನೆಗೆ ಸದಾ ಬೆನ್ನೆಲುಬಾಗಿ ನಾನು ಇರುತ್ತೇನೆ ಎಂದು ಸಭೆಯಲ್ಲಿ ಭರವಸೆ ನೀಡಿದರು.

ನಿವೇದಿತಾನಗರದಲ್ಲಿರುವ ಸುಬ್ಬರಾವ್ ಉದ್ಯಾನವನ ಅಭಿವೃದ್ಧಿಗೆ ಹಾಲಿ ಮತ್ತು ಮಾಜಿ ಜನಪ್ರತಿನಿಧಿಗಳು ಶ್ರಮಿಸಿದ್ದಾರೆ. ಅವರು ಸಹ ಇಲ್ಲಿ ಸಭೆಯಲ್ಲಿ ಭಾಗವಹಿಸಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಪಾರ್ಕ್‌ಗಳ ಅಭಿವೃದ್ಧಿಗೆ ಅವರೊಂದಿಗೆ ಸೇರಿ ಶ್ರಮಿಸುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ನಗರ ಪಾಲಿಕೆ ಮಾಜಿ ಸದಸ್ಯರಾದ ಶಂಕರ್, ಜಗದೀಶ್, ಜೆಡಿಎಸ್ ಮುಖಂಡರಾದ ಹರೀಶ್, ಶೇಖರ್, ಹಿರಿಯರ ನಾಗರಿಕರ ವೇದಿಕೆ ಅಧ್ಯಕ್ಷ ಮಂಚೇಗೌಡ, ರೈಲ್ವೆ ಇಲಾಖೆಯ ನಿವೃತ್ತ ಡೆಪ್ಯೂಟಿ ಚೀಫ್ ಟಿಕೆಟ್ ಇನ್ಸ್‌ಪೆಕ್ಟರ್ ಹಾಗೂ ಕಾರ್ಯದರ್ಶಿ ಬಿ.ಬಸವರಾಜು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ನಿವೃತ್ತ ಪ್ರಾಂಶುಪಾಲ, ಖಜಾಂಚಿ ಪ್ರೊ.ಎ.ನಾಗರಾಜು, ವಕೀಲ ಸುರೇಶ್, ಡಾ.ಎನ್.ನಾಗರಾಜು, ಕುಮಾರ್, ಎಂ.ರಮೇಶ್, ಕೆ.ಟಿ.ಸುರೇಸ್, ಜೈನಹಳ್ಳಿ ಸತ್ಯನಾರಾಯಣ ಗೌಡ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಕೊಡಗು ಜಿಲ್ಲೆಯಲ್ಲಿ ನಾಮಪತ್ರ ಪರಿಶೀಲನೆ

ಮಡಿಕೇರಿ, ವಿರಾಜಪೇಟೆಯಲ್ಲಿ ತಲಾ ಒಂದೊಂದು ನಾಮಪತ್ರ ತಿರಸ್ಕೃತ

ಮಡಿಕೇರಿ, ಏ.21– ಕೊಡಗು ಜಿಲ್ಲೆಯ 2 ವಿಧಾನ ಸಭಾ ಕ್ಷೇತ್ರದ ಚುನಾವಣಾ ಅಭ್ಯರ್ಥಿಗಳ ನಾಮಪತ್ರ ಪರಿಶೀಲನೆ ನಡೆಸಲಾಗಿದ್ದು, ಈ ಪೈಕಿ ಮಡಿಕೇರಿ ವಿಧಾನ ಸಭಾ ಕ್ಷೇತ್ರದಲ್ಲಿ ಒಂದು ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಒಂದು ನಾಮಪತ್ರ ವಿವಿಧ ಕಾರಣಗಳಿಂದ ತಿರಸ್ಕೃತವಾಗಿದೆ.

ವಿರಾಜಪೇಟೆ ಕ್ಷೇತ್ರ: ವಿರಾಜಪೇಟೆ ತಾಲೂಕಿನ ಕಾನೂರು ಗ್ರಾಮ ನಿವಾಸಿ ಹೆಚ್.ಪಿ. ಸರೋಜ ಅವರು ಪಕ್ಷೇತರ ಅಭ್ಯರ್ಥಿಯಾಗಿ ಕೊನೆಯ ದಿನವಾದ ಗುರುವಾರ ಕ್ಷೇತ್ರ ಚುನಾವಣಾಧಿಕಾರಿ ಶಬಾನ ಎಂ.ಶೇಕ್ ಅವರಿಗೆ ನಾಮಪತ್ರ ಸಲ್ಲಿಸಿದ್ದರು. ಇಂದು ನಾಮಪತ್ರ ಪರಿಶೀಲನೆ ನಡೆಸಿದ ಸಂದರ್ಭ ಸರೋಜ ಅವರ ನಾಮಪತ್ರ ತಿರಸ್ಕೃತವಾಗಿದೆ ಎಂದು ಕ್ಷೇತ್ರ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ. ವಿರಾಜಪೇಟೆ ಕ್ಷೇತ್ರಕ್ಕೆ 10 ಮಂದಿಯಿಂದ ಒಟ್ಟು 12 ನಾಮಪತ್ರಗಳು ಸಲ್ಲಿಕೆಯಾಗಿದ್ದು, ಇದೀಗ ಕಣದಲ್ಲಿ 9 ಮಂದಿ ಸ್ಪರ್ಧಾಳುಗಳು ಉಳಿದಿದ್ದಾರೆ.

ಮಡಿಕೇರಿ ಕ್ಷೇತ್ರ: ಮಡಿಕೇರಿ ವಿಧಾನ ಸಭಾ ಕ್ಷೇತ್ರದಿಂದ ಒಟ್ಟು 22 ಮಂದಿ ನಾಮಪತ್ರ ಸಲ್ಲಿಸಿದ್ದರು. ಈ ಪೈಕಿ ಸೋಮವಾರಪೇಟೆ ತಾಲೂಕು ಕಿರಗಂದೂರು ಗ್ರಾಮ ನಿವಾಸಿ ಎ.ಎನ್.ಪದ್ಮನಾಭ ಜನ ಸಂಘ ಪಾರ್ಟಿಯಿಂದ ಸಲ್ಲಿಸಿದ ನಾಮಪತ್ರ ತಿರಸ್ಕೃತವಾಗಿದೆ. ಈ ಅಭ್ಯರ್ಥಿ ನೋಂದಾಯಿತ ಮಾನ್ಯತೆ ಪಡೆಯದ ಪಕ್ಷದಿಂದ ನಾಮಪತ್ರ ಸಲ್ಲಿಸಿದ್ದಾರೆ. ಜನ ಸಂಘ ಪಾರ್ಟಿಯ ಎ.ಎನ್. ಪದ್ಮನಾಭ ಅವರು ನಾಮಪತ್ರ ಭಾಗ–1 ಅನ್ನು ಭರ್ತಿ ಮಾಡಿದ್ದಾರೆ. ಆದರೆ ಭಾಗ–2ರಲ್ಲಿ 10 ಜನ ಸೂಚಕರ ವಿವರವನ್ನು ಭರ್ತಿ ಮಾಡದೇ ಇರುವ ಕಾರಣದಿಂದ ಅವರ ನಾಮಪತ್ರ ತಿರಸ್ಕೃತವಾಗಿದೆ ಎಂದು ಕ್ಷೇತ್ರ ಚುನಾವಣಾಧಿಕಾರಿ ಯತೀಶ್ ಉಲ್ಲಾಳ್ ಮಾಹಿತಿ ನೀಡಿದ್ದಾರೆ. ಇದೀಗ ಚುನಾವಣಾ ಕಣದಲ್ಲಿ 21 ಮಂದಿ ಉಳಿದಿದ್ದಾರೆ.

ಧೂಳೆಬ್ಬಿಸಿದ ರಾಷ್ಟ್ರಮಟ್ಟದ ಆಟೋಕ್ರಾಸ್

ರಾಜ್ಯದ ನಾನಾ ಭಾಗಗಳಿಂದ 53 ಸ್ಪರ್ಧಿಗಳು ಭಾಗಿ, ಪ್ರೇಕ್ಷಕರಿಗೆ ರಸದೌ







ಉತ್ತಮ ಚಾಲಕ ಕೃತನ್ ಕುಟ್ಟಪ್ಪ

- ಕೊಡಗಿನ ಕೃತನ್‌ಕುಟ್ಟಪ್ಪಗೆ ಉತ್ತಮ ಚಾಲಕ ಬಹುಮಾನ
- ಎಲ್ಲರ ಗಮನ ಸೆಳೆದ 9ರ ಬಾಲಕ

ಗೋಣಿಕೊಪ್ಪ, ಏ.21– ಟೀಂ 53 ಸಂಘಟನೆ ವತಿಯಿಂದ ಕುಂದ ಗ್ರಾಮದ ಕಾಫಿ ತೋಟದಲ್ಲಿ ಆಯೋಜಿಸಿದ್ದ ರಾಷ್ಟ್ರಮಟ್ಟದ ಆಟೋಕ್ರಾಸ್ ಸ್ಪರ್ಧೆಯಲ್ಲಿ ಚಾಲಕರು ದೂಳೆಬ್ಬಿಸಿದರು. ಗುಡ್ಡಗಾಡು ಟ್ರ್ಯಾಕ್‌ನಲ್ಲಿ ವೇಗದಲ್ಲಿ ಚಲಾಯಿಸಿ ಚಾಕಚಕ್ಯತೆ ತೋರಿದ್ದಾರೆ.

ಕಾಫಿ ತೋಟದ ನಡುವೆ ಸುಮಾರು 4 ಕಿಮೀ ಅಂತರದಿಂದ 25 ಕಿಮೀ ಅಂತರದವರೆಗೆ ಸ್ಪರ್ಧೆ ನಡೆಯಿತು. ದೇಶದ ವಿವಿಧ ರಾಜ್ಯಗಳಿಂದ ಸುಮಾರು 53 ಸ್ಪರ್ಧಿಗಳು ಭಾಗವಹಿಸಿ ತಮ್ಮ ಪ್ರತಿಭೆ ಅನಾವರಣಗೊಳಿಸಿದರು. ಹಳ್ಳ ಮತ್ತು ದಿಣ್ಣೆಗಳಿಂದ ಕೂಡಿದ ಜಾಗದಲ್ಲಿ ವಾಹನಗಳು ದೂಳೆಬ್ಬಿಸುತ್ತಾ ವೇಗವಾಗಿ ಮುನ್ನುಗ್ಗುತ್ತಿದ್ದವು. ಉತ್ತಮ ಚಾಲಕ ಬಹುಮಾನವನ್ನು ಕೊಡಗಿನ ಕೃತನ್ ಕುಟ್ಟಪ್ಪ ಪಡೆದು ಕೊಂಡರು. 9 ವರ್ಷದ ದವಿಕ್ ದೀರಜ್ ಪಾಲ್ಗೊಂಡು ವಿಶೇಷವಾಗಿ ಗಮನ ಸೆಳೆದರು.

ಫಲಿತಾಂಶ; ಜಿಪ್ಸಿ ವಿಭಾಗದಲ್ಲಿ ಕಾರ್ಯಪ್ಪ (ಪ್ರ), ದರ್ಶನ್ (ದ್ವಿ), ಕವನ್ ಕಾರ್ಯಪ್ಪ (ತೃ), ಡೀಸಲ್ ಕ್ಲಾಸ್ ವಿಭಾಗ ದಲ್ಲಿ ವಿಶಾಲ್ ತಿವಾರಿ (ಪ್ರ), ನಿಖಿಲ್ ಮುದ್ದಪ್ಪ (ದ್ವಿ), ವನಿಲ್ ಉತ್ತಪ್ಪ (ತೃ), ಕೂರ್ಗ್ ಓಪನ್ ವಿಭಾಗದಲ್ಲಿ ಕೀರ್ತನ್ ಕುಟ್ಟಪ್ಪ(ಪ್ರ), ಹರ್ಷಿತ್ ಗೌಡ (ದ್ವಿ), ನಿಖಿಲ್ ಮುದ್ದಪ್ಪ (ತೃ), ಮಹಿಳಾ ವಿಭಾಗದಲ್ಲಿ ನಿರ್ಮಲ (ಪ್ರ), ಧನಿ ರತನ್ (ದ್ವಿ), ಸ್ಟಾರ್ ಆಫ್ ಕರ್ನಾಟಕ ವಿಭಾಗದಲ್ಲಿ ದರ್ಶನ್, ಕಾರ್ಯಪ್ಪ, ಸೂರಜ್ ಮಂದಣ್ಣ ಪಡೆದುಕೊಂಡರು.

800 ಸಿಸಿ – 1400 ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿದ 5 ಸ್ಥಾನಗಳಿಗೆ ಬಹುಮಾನ ನೀಡಲಾಯಿತು. (ಕ್ರಮವಾಗಿ 1–5 ಸ್ಥಾನ) 800 ಸಿಸಿ ವಿಭಾಗದಲ್ಲಿ ಸೂರಜ್ ಮಂದಣ್ಣ, ವಿವೇಕ್, ಕೀರ್ತನ್ ಕುಟ್ಟಪ್ಪ, ಪ್ರಕಾಶ್ ಮೂಡೆಗೆರೆ, ಲೋಕೇಶ್ ಜೈನ್, 1100 ಸಿಸಿ ವಿಭಾಗದಲ್ಲಿ ಸೂರಜ್ ಮಂದಣ್ಣ, ಕೀರ್ತನ್ ಕುಟ್ಟಪ್ಪ, ಪ್ರಕಾಶ್, ಆಶಿತ್, ಸಾಗರ್, ಇಂಡಿಯನ್ ಓಪನ್ ವಿಭಾಗದಲ್ಲಿ ದರ್ಶನ್, ಕಾರ್ಯಪ್ಪ, ಪ್ರವೀಣ್, ನಿಕಿಲ್ ಮುದ್ದಪ್ಪ, 1400 ಸಿಸಿ ವಿಭಾಗದಲ್ಲಿ ಸೂರಜ್ ಮಂದಣ್ಣ, ಕಿಶೋರ್, ರಕ್ಷಕ್ ದಿವಾಕರ್, ವಿದೇಶ್ ಗೌಡ, ಪ್ರವೀಣ್, ನಾವಿಸ್ ಕ್ಲಾಸ್‌ನಲ್ಲಿ ರವಿಕಿರಣ್ ಗೌಡ, ಕಿಶೋರ್, ಅರ್ಬಾಸ್ ಖಾನ್, ಶಫಿ, ಪ್ರವೀಣ್ ಪಡೆದರು.

ಕ್ರೀಡಾಪಟುಗಳಾದ ದರ್ಶನ್ ನಂಜಪ್ಪ ಕಿಲನ್ ಗಣಪತಿ, ಜಗತ್ ನಂಜಪ್ಪ ಉದ್ಘಾಟಿಸಿದರು. ಸಂಘಟನೆಯ ಪ್ರಮುಖರಾದ ಶ್ರೀಮಂತ್ ಮುತ್ತಣ್ಣ, ಪಟ್ರಂಗಡ ಧನಿ ರತನ್, ಸೋಮಣ್ಣ ರಂಜನ್, ಪೊನ್ನಣ್ಣ ಧೀರಜ್, ದಿಲ್ರೋಪ್ ಇದ್ದರು.

ಕೊಡ್ಲಿಪೇಟೆ ಪಿಯು ಕಾಲೇಜಿಗೆ ಶೇ.95ರಷ್ಟು ಫಲಿತಾಂಶ



ಪೃಥ್ವಿ ಎಚ್.ಎಸ್.



ಕೆ.ಎನ್.ರಶ್ಮಿ



ಸಾನಿಯಾ

ಶನಿವಾರಸಂತೆ, ಏ.21– ಸಮೀಪದ ಕೊಡ್ಲಿಪೇಟೆ ಪದವಿ ಪೂರ್ವ ಕಾಲೇಜು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.95 ಫಲಿತಾಂಶ ಗಳಿಸಿದೆ.

ಕಾಲೇಜಿನ ವಾಣಿಜ್ಯ ವಿಭಾಗದಲ್ಲಿ ಶೇ.100ರಷ್ಟು ಫಲಿತಾಂಶ ಬಂದಿದ್ದು,31 ವಿದ್ಯಾರ್ಥಿಗಳ ಪೈಕಿ ಎಲ್ಲಾ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ವಿದ್ಯಾರ್ಥಿನಿ ಕೆ.ಎನ್.ರಶ್ಮಿ 568 (ಶೇ.94.6), ಸಾನಿಯ 568 (94.6) ಹಾಗೂ ತೊಂಟೇಶ್ 517 (ಶೇ.86) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಸಂಸ್ಥೆಗೆ ಕೀರ್ತಿ ತಂದಿದ್ದಾರೆ.

ಕಲಾ ವಿಭಾಗದಲ್ಲಿ ಶೇ.93.75 ಫಲಿತಾಂಶಗಳಿಸಿದ್ದು,32 ವಿದ್ಯಾರ್ಥಿಗಳ ಪೈಕಿ 30 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ವಿದ್ಯಾರ್ಥಿನಿ ಎಚ್.ಜೆ.ಪೃಥ್ವಿ 529 (ಶೇ.88) ಹಾಗೂ ಗಗನ ಗೌತಮ್ 516(ಶೇ.86) ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಸಂಸ್ಥೆಯ ಪ್ರಾಂಶುಪಾಲರು ಕೆ.ಪಿ.ಜಗದೀಶ್ ಬಾಬು ತಿಳಿಸಿದ್ದಾರೆ.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿ ಸಂಸ್ಥೆ ಕೀರ್ತಿ ತಂದಿರುವ ವಿದ್ಯಾರ್ಥಿಗಳಿಗೆ ವಿದ್ಯಾಸಂಸ್ಥೆಯ ಅಧ್ಯಕ್ಷ ಎಚ್.ಎಸ್. ಚಂದ್ರಮೌಳಿ ಹಾಗೂ ಆಡಳಿತ ಮಂಡಳಿ ಸದಸ್ಯರು ಹಾಗೂ ಉಪನ್ಯಾಸಕ ವೃಂದ, ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

ಮಡಿಕೇರಿಯಲ್ಲಿ ಶಾಸಕ ಅಪ್ಪಚ್ಚುರಂಜನ್ ಬಿರುಸಿನ ಚುನಾವಣಾ ಪ್ರಚಾರ



ಮಡಿಕೇರಿ, ಏ.21– ಈಗಾಗಲೇ ಕೊಡಗು ಜಿಲ್ಲೆಯಲ್ಲಿ ಬಿಸಿಲಿನ ತಾಪದ ಜೊತೆಯಲ್ಲೇ ಚುನಾವಣಾ ಕಾವು ಕೂಡ ಏರಿಕೆಯಾಗಿದೆ. ಮಡಿಕೇರಿ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಹಾಲಿ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್ ನಗರದಲ್ಲಿ ಬಿರುಸಿನ ಪ್ರಚಾರ ನಡೆಸಿದರು. ಪ್ರಚಾರ ಕಾರ್ಯ ಆರಂಭಕ್ಕೂ ಮುನ್ನ ಮಹದೇವಪೇಟೆಯ ಶ್ರೀ ಚೌಡೇಶ್ವರಿ ದೇವಾಲಯದಲ್ಲಿ ಶಾಸಕ ಅಪ್ಪಚ್ಚು ರಂಜನ್ ವಿಶೇಷ ಪೂಜೆ ಸಲ್ಲಿಸಿದರು. ನಂತರ ನಗರದ ಮಾರುಕಟ್ಟೆ ಹಾಗೂ ಮುಖ್ಯ ರಸ್ತೆಯಲ್ಲಿ ರೋಡ್ ಶೋ ಮೂಲಕ ಮತಯಾಚಿಸಿದರು. ಈ ಸಂದರ್ಭ ಬಿಜೆಪಿಯ ನಗರ ಸಭಾ ಸದಸ್ಯರು, ಪಕ್ಷ ಪ್ರಮುಖರು ಹಾಗೂ ಕಾರ್ಯಕರ್ತರು ಹಾಜರಿದ್ದರು.

ದ್ವಿತೀಯ ಪಿಯುಸಿ ಫಲಿತಾಂಶ: ಜಿಲ್ಲೆಗೆ 3ನೇ ಸ್ಥಾನ

ಮಡಿಕೇರಿ, ಏ.21– ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ಪ್ರಕಟಗೊಂಡಿದ್ದು, ಕೊಡಗು ಜಿಲ್ಲೆ ಶೇ.90.55ರಷ್ಟು ಅಂಕ ದಾಖಲಿಸಿ, ರಾಜ್ಯದಲ್ಲಿ 3ನೇ ಸ್ಥಾನ ಪಡೆದಿದೆ.

ಕಳೆದ 2021–22ನೇ ಸಾಲಿನಲ್ಲಿ 6ನೇ ಸ್ಥಾನದಲ್ಲಿದ್ದ ಕೊಡಗು ಈ ಬಾರಿ 3ನೇ ಸ್ಥಾನಕ್ಕೆ ಜಿಗಿದಿದೆ. ಮಾತ್ರವಲ್ಲದೇ, ಈ ಬಾರಿಯೂ ಫಲಿತಾಂಶದಲ್ಲಿ ಬಾಲಕಿಯರೇ ಮೇಲುಗೈ ಸಾಧಿಸಿ ಬೀಗಿದ್ದಾರೆ. ಜಿಲ್ಲೆ ಯಲ್ಲಿ 5340 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಈ ಪೈಕಿ 4609 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಕಲಾ ವಿಭಾಗದಲ್ಲಿ 1268 ವಿದ್ಯಾರ್ಥಿಗಳ ಪೈಕಿ 949 ಮಂದಿ ಉತ್ತೀರ್ಣರಾಗಿದ್ದು, ಶೇ.74.84 ಫಲಿತಾಂಶ ದಾಖಲಾಗಿದ್ದರೆ, ವಾಣಿಜ್ಯ ವಿಭಾಗದಲ್ಲಿ 2718 ವಿದ್ಯಾರ್ಥಿಗಳ ಪೈಕಿ 2388 ವಿದ್ಯಾರ್ಥಿಗಳು ತೇರ್ಗಡೆಯಾಗಿ, ಶೇ.87.86 ಫಲಿತಾಂಶ ಲಭಿಸಿದೆ. ಇನ್ನು ವಿಜ್ಞಾನ ವಿಭಾಗದಲ್ಲಿ 1354 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದ್ದು, ಈ ಪೈಕಿ 1272 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶೇ. 93.94 ಫಲಿತಾಂಶ ಲಭಿಸಿದೆ.

ಖಾಸಗಿಯಾಗಿ ಪರೀಕ್ಷೆ ಬರೆದಿದ್ದ ವಿದ್ಯಾರ್ಥಿಗಳ ಪೈಕಿ ಶೇ.60.49 ರಷ್ಟು ಫಲಿತಾಂಶ ಲಭಿಸಿದೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ತಿಳಿಸಿದೆ.

ನಾಪೋಕ್ಲು ಸುತ್ತಮುತ್ತ ಮಳೆಯ ಸಿಂಚನ



ನಾಪೋಕ್ಲು, ಏ.21– ಪಟ್ಟಣ ವ್ಯಾಪ್ತಿಯಲ್ಲಿ ಶುಕ್ರವಾರ ಉತ್ತಮ ಮಳೆಯಾಗಿದ್ದು, ಕಾದ ಭೂಮಿಗೆ ತಂಪೆರೆದಿದೆ. ಸುತ್ತಮುತ್ತಲಿನ ಗ್ರಾಮಗಳಲ್ಲಿಯೂ ಉತ್ತಮ ಮಳೆಯಾಗಿದ್ದು, ರೈತರು ಸಂತೋಷ ವ್ಯಕ್ತಪಡಿಸಿದ್ದಾರೆ. ಕಳೆದ ಕೆಲವು ದಿನಗಳಿಂದ ಧಗೆ ಹೆಚ್ಚಿದ್ದು, ಬಹುತೇಕ ಕಾಫಿಯ ತೋಟಗಳಲ್ಲಿ ಕಾಫಿಯ ಗಿಡಗಳು ಬಿಸಿಲಿನ ಝಳಕ್ಕೆ ಬಾಡಿದ್ದವು.ಈ ವರ್ಷ ಸರಿಯಾಗಿ ಮಳೆಯಾಗದೆ ಪರಿತಪಿಸುತ್ತಿದ್ದ ರೈತರು ಇಂದು ಸುರಿದ ಮಳೆಯ ಸಿಂಚನದಿಂದ ಸಮಾಧಾನ ಪಟ್ಟಿದ್ದಾರೆ. ಕಾಫಿ ಹಾಗೂ ಕಾಳು ಮೆಣಸಿನ ಬಳ್ಳಿಗಳಿಗೆ ಬೇಸಿಗೆ ಈ ಅವಧಿಯಲ್ಲಿ ಉತ್ತಮ ಮಳೆ ಅವಶ್ಯಕತೆ ಇದ್ದು ಈ ವರ್ಷ ಮಳೆಯಿಂದ ವಂಚಿತರಾಗಿದ್ದ ಬೆಳೆಗಾರರಿಗೆ ಮಳೆ ಖುಷಿ ತಂದಿದೆ. ಕೃಷಿ ಚಟುವಟಿಕೆಗಳಿಗೆ ಮಾತ್ರವಲ್ಲ. ಕುಡಿಯುವ ನೀರಿಗೂ ಸಮಸ್ಯೆಯಾಗಿದ್ದು ಹಲವೆಡೆ ನೀರು ಇಳಿಮುಖಗೊಂಡಿದ್ದು ಸಮಸ್ಯೆ ಕಾಡಿತ್ತು. ಇದೀಗ ಸುರಿದ ಮಳೆ ಜನರ ಭವಣೆಯನ್ನು ಕೊಂಚಮಟ್ಟಿಗೆ ದೂರ ಮಾಡಿದೆ.

ಇಂದಿನಿಂದ ಹೆಗ್ಗಳದ ಶ್ರೀ ಅಯ್ಯಪ್ಪ ಭಗವತಿ ದೇವಸ್ಥಾನದ ವಾರ್ಷಿಕ ಉತ್ಸವ

ವಿರಾಜಪೇಟೆ, ಏ.21– ವಿರಾಜಪೇಟೆ ನಾಡು ಹೆಗ್ಗಳ ಗ್ರಾಮದಲ್ಲಿರುವ ಶ್ರೀ ಅಯ್ಯಪ್ಪ ಭಗವತಿ ದೇವಸ್ಥಾನದ ವಾರ್ಷಿಕ ಉತ್ಸವವು ಏ.22 ರಿಂದ 26ರ ವರೆಗೆ ಐದು ದಿನಗಳ ಕಾಲ ನಡೆಯಲಿದೆ. ಏ.22 ಇಂದು ಶ್ರೀ ಅಯ್ಯಪ್ಪ ದೇವಸ್ಥಾನದಲ್ಲಿ ಪಟ್ಟಣಿ ಉತ್ಸವ, ಏ.23 ದೊಡ್ಡ ಹಬ್ಬದಂದು ಎತ್ತು ಪೋರಾಟ, ಬೆಳಿಗ್ಗೆಯಿಂದಲೇ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು, ನಡೆದು ಮಧ್ಯಾಹ್ನ 1 ಗಂಟೆಗೆ ಮಹಾಪೂಜೆ ಪ್ರಸಾದ ವಿನಿಯೋಗ ನಡೆಯಲಿದೆ. ಏ.24 ಕುದುರೆ, ಏ.25 ಕುಂದಚೂಳೆ, ಏ.26 ರಂದು ಶುದ್ಧ ಕಳಸ ನಡೆಯಲಿದ್ದು, ಭಕ್ತಾದಿಗಳು ಉತ್ಸವದಲ್ಲಿ ಭಾಗವಹಿಸಿ ದೇವರ ಕೃಪೆಗೆ ಪಾತ್ರರಾಗುವಂತೆ ದೇವಸ್ಥಾನದ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದ್ವಿತೀಯ ಪಿಯುಸಿಯಲ್ಲಿ ಚಾಮರಾಜನಗರಕ್ಕೆ ಶೇ. 81.92ರಷ್ಟು ಫಲಿತಾಂಶ

ಕಳೆದ ಬಾರಿ 18ನೇ ಸ್ಥಾನದಲ್ಲಿದ್ದ ಜಿಲ್ಲೆ ಈ ಬಾರಿ 12ನೇ ಸ್ಥಾನಕ್ಕೆ ಜಿಗತ

ಚಾಮರಾಜನಗರ, ಏ.21– ಕಳೆದ ಮಾರ್ಚ್‌ನಲ್ಲಿ ನಡೆದಿದ್ದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಶೇ. 81.92ರಷ್ಟು ಫಲಿತಾಂಶ ದೊರೆತಿದೆ. ಈ ಮೂಲಕ ರಾಜ್ಯದ ಗಡಿ ಜಿಲ್ಲೆಗಳಲ್ಲಿ ಒಂದಾಗಿರುವ ಚಾಮರಾಜನಗರವು ಒಟ್ಟಾರೆ ಫಲಿತಾಂಶ ದಲ್ಲಿ ರಾಜ್ಯದಲ್ಲಿ 12ನೇ ಸ್ಥಾನವನ್ನು ಪಡೆದು ಕೊಂಡಿದೆ. ಜಿಲ್ಲೆಯಲ್ಲಿ 6,329 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಇವರಲ್ಲಿ 5,185 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಳೆದ ಬಾರಿ 18 ಸ್ಥಾನದಲ್ಲಿದ್ದ ಜಿಲ್ಲೆ ಈ ಬಾರಿ 12 ಸ್ಥಾನಕ್ಕೆ ಏರಿಕೆಯಾಗಿದೆ.



ವರ್ಷಿತಾ



ನಂದಿತ ಎಸ್.ಕೆ.



ನೆಹಸಾಭಾಯ



ಸಾಜಿದಾ

ಬಾಲಕಿಯರೇ ಮೇಲುಗೈ: ಈ ಸಲವೂ ಜಿಲ್ಲೆಯಲ್ಲಿ ಬಾಲಕಿಯರೇ ಮೇಲುಗೈ ಸಾಧಿಸಿ ದ್ದಾರೆ. ಅಲ್ಲದೇ ಬಾಲಕರಿಗಿಂತ ಬಾಲಕಿಯರೇ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆ ಬರೆದಿದ್ದರೂ ಎಂಬುದೂ ವಿಶೇಷ. ಶೇ. 82.06ರಷ್ಟು ಬಾಲಕಿಯರು ಉತ್ತೀರ್ಣರಾಗಿದ್ದರೆ. ಶೇ. 71.37ರಷ್ಟು ಬಾಲಕರು ತೇರ್ಗಡೆ ಹೊಂದಿದ್ದಾರೆ. 3,626 ಬಾಲಕರು ಪರೀಕ್ಷೆಗೆ ಹಾಜರಾಗಿದ್ದು, ಇವರಲ್ಲಿ 2,588 ಮಂದಿ ಉತ್ತೀರ್ಣರಾಗಿದ್ದಾರೆ. 3,758 ಮಂದಿ ಬಾಲಕಿಯರು ಪರೀಕ್ಷೆಗೆ ಕುಳಿತಿದ್ದು, ಇದರಲ್ಲಿ 3,084 ಮಂದಿ ತೇರ್ಗಡೆಯಾಗಿದ್ದಾರೆ.

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಮುನ್ನಡೆ: ಪಟ್ಟಣ ಪ್ರದೇಶದ 4,324 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಇವರಲ್ಲಿ 3,540 ಮಂದಿ ತೇರ್ಗಡೆಯಾಗಿದ್ದಾರೆ (ಶೇ. 81.87). ಗ್ರಾಮೀಣ ಪ್ರದೇಶದ 2,005 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಇವರಲ್ಲಿ 1,645 ಮಂದಿ ಉತ್ತೀರ್ಣರಾಗಿದ್ದಾರೆ (ಶೇ. 82.04).

ವಾಣಿಜ್ಯ ವಿಭಾಗದಲ್ಲಿ ಹೆಚ್ಚಿನ ಫಲಿತಾಂಶ: ಜಿಲ್ಲೆಯಲ್ಲಿ ಈ ಬಾರಿ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಹೆಚ್ಚಿನ ಫಲಿತಾಂಶ ಪಡೆದಿದ್ದಾರೆ. (ಶೇ. 88.56) ವಿಜ್ಞಾನ ವಿಭಾಗ ಎರಡನೇ ಸ್ಥಾನ (ಶೇ. 85.92) ಹಾಗೂ ಕಲಾ ವಿಭಾಗ (ಶೇ. 72.42) ಮೂರನೇ ಸ್ಥಾನ ಪಡೆದಿದೆ.

> **"ಜಿಲ್ಲೆಯಲ್ಲಿ ದ್ವಿತೀಯ ಪಿಯುಸಿ ಫಲಿತಾಂಶವನ್ನು ಉತ್ತಮಗೊಳಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಉಪನ್ಯಾಸಕರು ಇಲ್ಲದೆ ಕಾಲೇಜುಗಳಿಗೆ ಅತಿಥಿ ಉಪನಾಸಕರನ್ನು ನೇಮಿಸಲಾಗಿತ್ತು. ವಿದ್ಯಾಭ್ಯಾಸದಲ್ಲಿ ಹಿಂದುಳಿದ ವಿದ್ಯಾರ್ತಿಗಳಿಗೆ ವಿಶೇಷ ತರಗತಿಗಳನ್ನು ನಡೆಸಲಾಗಿತ್ತು. ಹಿಗಾಗಿ ಫಲಿತಾಂಶದಲ್ಲಿ ಸುಧಾರಣೆ ಕಂಡಿದೆ. ನಮ್ಮ ನಿರೀಕ್ಷೆಯಂತೆ ಫಲಿತಾಂಶ ಬಂದಿದ್ದು, ಖುಷಿ ತಂದಿದೆ.**
> -ಸಿ.ಮಂಜುನಾಥ ಪ್ರಸನ್ನ, ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ

ವಾಣಿಜ್ಯ ವಿಭಾಗದಿಂದ 2325 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಇದರಲ್ಲಿ 2059 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ವಿಜ್ಞಾನ ವಿಭಾಗದಿಂದ 1676 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದು, ಇವರಲ್ಲಿ 1440 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಲಾ ವಿಭಾಗದಿಂದ 2328 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಇವರ ಪೈಕಿ 1686 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು: ಕಲಾವಿಭಾಗದಲ್ಲಿ ಕೊಳ್ಳೇಗಾಲದ ಎಸ್‌ಎಸ್‌ವಿಕೆ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ವರ್ಷಿತಾ 581 (ಶೇ. 96.8) ಅಂಕ ಪಡೆದು ಮೊದಲ ಪಡೆದಿದ್ದಾಳೆ. ವಾಣಿಜ್ಯ ವಿಭಾಗದಲ್ಲಿ ಗುಂಡ್ಲುಪೇಟೆಯ ಜೆಎಸ್‌ಎಸ್ ಕಾಲೇಜಿನ ಎಸ್.ಆರ್. ನೆಹಸಾಭಾಯ 586(ಶೇ. 97.66) ಹಾಗೂ ಹನೂರಿನ ವಿವೇಕನಂದ ಕಾಲೇಜಿನ ವಿ.ಎಸ್. ಸಾಜಿದಾ 586 (ಶೇ 96.8) ಅಂಕ ಪಡೆದು ಮೊದಲ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಕೊಳ್ಳೇಗಾಲ ನಿಸರ್ಗ ಕಾಲೇಜಿನ ಎಂ. ಹರ್ಷಿತಾ 589 (ಶೇ. 98.16) ಅಂಕ ಪಡೆದು ಮೊದಲ ಸ್ಥಾನ ಪಡೆದಿದ್ದಾರೆ.

ಅತಿ ಹೆಚ್ಚು ಫಲಿತಾಂಶ ಪಡೆದ ಕಾಲೇಜು: ಚಾಮರಾಜನಗರದ ವಿದ್ಯಾವಿಕಾಸ ಪಿಯು ಕಾಲೇಜು ಶೇ. 100ರಷ್ಟು, ಗುಂಡ್ಲುಪೇಟೆಯ ಜೆಎಸ್‌ಎಸ್ ಮಹಿಳಾ ಕಾಲೇಜು 95.65ರಷ್ಟು ಹಾಗೂ ಚಾಮರಾಜನಗರ ತಾಲೂಕಿನ ಕುದೇರು ಸರ್ಕಾರಿ ಪದವಿ ಪೂರ್ವ ಕಾಲೇಜು ಶೇ.91.59ರಷ್ಟು ಫಲಿತಾಂಶ ಪಡೆದಿದೆ.

ಜಿಲ್ಲೆಯಲ್ಲಿ ಕಳೆದ ವರ್ಷ ವಾಣಿಜ್ಯ ವಿಭಾಗದಲ್ಲಿ ಶೇ. 72.04ರಷ್ಟು, ಕಲಾ ವಿಭಾಗದಲ್ಲಿ ಶೇ. 51.93 ಹಾಗೂ ವಿಜ್ಞಾನ ವಿಭಾಗದಲ್ಲಿ 66.23 ರಷ್ಟು ಫಲಿತಾಂಶ ಬಂದಿತ್ತು. ಈ ಬಾರಿ ವಿಜ್ಞಾನ ವಿಭಾಗ ನಿರೀಕ್ಷೆಗೂ ಮೀರಿ ಉತ್ತಮ ಫಲಿತಾಂಶ ದಾಖಲಿಸಿದೆ. ಕಳೆದ ಬಾರಿ ಜಿಲ್ಲೆ ಶೇ. 63.03 ಫಲಿತಾಂಶದಿಂದ ರಾಜ್ಯದಲ್ಲೇ 18 ಸ್ಥಾನ ಪಡೆದಿತ್ತು.

ಈ ಬಾರಿ ಶೇ. 81.92ರಷ್ಟು ಫಲಿತಾಂಶ ದೊಂದಿಗೆ 12ಸ್ಥಾನಕ್ಕೆ ಏರಿಕೆಯಾಗಿದ್ದು, ಫಲಿತಾಂಶದಲ್ಲಿ ಬಾರಿ ಸುಧಾರಣೆಯಾಗಿದೆ.

ಪಿಯುಸಿಯಲ್ಲಿ ಅನುತ್ತೀರ್ಣ: ವಿದ್ಯಾರ್ಥಿನಿ ಆತ್ಮಹತ್ಯೆ



ಚಾಮರಾಜನಗರ, ಏ.21– ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀಣಗೊಂಡ ವಿದ್ಯಾರ್ಥಿನಿಯೊಬ್ಬಳು ಮನನೊಂದು ಹಾಸ್ಟೆಲ್‌ನ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದಲ್ಲಿ ಶುಕ್ರವಾರ ನಡೆದಿದೆ.

ಗುಂಡ್ಲುಪೇಟೆ ತಾಲೂಕಿನ ಮೂಡಗೂರು ಗ್ರಾಮದ ಮಹೇಶ್ ಎಂಬುವವರ ಪುತ್ರಿ ವಿಜಯಲಕ್ಷ್ಮೀ(18) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿ.

ವಿಜಯಲಕ್ಷ್ಮೀ ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪಿಸಿಎಂಸಿಎಸ್ (ಕಂಪ್ಯೂಟರ್ ಸೈಯನ್ಸ್) ವ್ಯಾಸಂಗ ಮಾಡುತ್ತಿದ್ದಳು. ಪರೀಕ್ಷೆ ಮುಗಿದ ನಂತರ ಸಿಇಟಿ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುವುದಕ್ಕಾಗಿ ಜೆಎಸ್‌ಎಸ್ ಕಾಲೇಜಿನ ಆವರಣದಲ್ಲಿರುವ ಜೆಎಸ್‌ಎಸ್ ಹಾಸ್ಟೆಲ್ ವಾಸ್ತವ್ಯ ಹೂಡಿದ್ದಳು. ಶುಕ್ರವಾರ ಬೆಳಗ್ಗೆ ಮೊಬೈಲ್‌ನಲ್ಲಿ ತನ್ನ ಪಿಯುಸಿ ಪರೀಕ್ಷೆ ಫಲಿತಾಂಶ ನೋಡಿದ್ದಾಳೆ. ನಾಲ್ಕು ವಿಷಯಗಳಲ್ಲಿ ಅನುತ್ತೀರ್ಣಗೊಂಡಿರುವುದು ತಿಳಿಯುತ್ತಿದ್ದಂತೆಯೇ ತಾನಿದ್ದ ಹಾಸ್ಟೆಲ್ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಪಟ್ಟಣ ಠಾಣೆಯ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಮೃತದೇಹವನ್ನು ಸಿಮ್ಸ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಾರುಸುದಾರರಿಗೆ ಒಪ್ಪಿಸಿದರು. ಈ ಸಂಬಂಧ ಪಟ್ಟಣ ಠಾಣೆಯಲ್ಲಿ ದೂರು ದಾಖಲಾಗಿದೆ.

ಚಾಮರಾಜನಗರ ವಿಧಾನಸಭಾ ಚುನಾವಣೆ

7 ಅಭ್ಯರ್ಥಿಗಳ ನಾಮಪತ್ರಗಳು ತಿರಸ್ಕೃತ, 69 ಅಭ್ಯರ್ಥಿಗಳ ನಾಮಪತ್ರ ಕ್ರಮಬದ್ಧ

ಚಾಮರಾಜನಗರ, ಏ.21– ವಿಧಾನಸಭಾ ಚುನಾವಣೆಗೆ ಜಿಲ್ಲೆಯ ಅಭ್ಯರ್ಥಿಗಳು ಸಲ್ಲಿಸಿದ್ದ ನಾಮಪತ್ರಗಳ ಪರಿಶೀಲನಾ ಕಾರ್ಯ ಇಂದು ನಡೆದಿದ್ದು, ಒಟ್ಟಾರೆ ನಾಮಪತ್ರಗಳನ್ನು ಸಲ್ಲಿಸಿದ್ದ 76 ಅಭ್ಯರ್ಥಿಗಳ ಪೈಕಿ 7 ಅಭ್ಯರ್ಥಿಗಳ ನಾಮಪತ್ರಗಳು ತಿರಸ್ಕೃತ ವಾಗಿವೆ. 69 ಅಭ್ಯರ್ಥಿಗಳ ನಾಮಪತ್ರಗಳು ಕ್ರಮಬದ್ಧವಾಗಿವೆ.

ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಬಹುಜನ ಸಮಾಜ ಪಕ್ಷದಿಂದ ನಾಮಪತ್ರ ಸಲ್ಲಿಸಿದ್ದ ನಾಗರಾಜು, ಇಂಡಿಯನ್ ಮೂವ್‌ಮೆಂಟ್ ಪಾರ್ಟಿಯಿಂದ ನಾಮಪತ್ರ ಸಲ್ಲಿಸಿದ್ದ ಅಂಜನ ಮೂರ್ತಿ ಅವರ ನಾಮಪತ್ರ ತಿರಸ್ಕೃತವಾಗಿವೆ. ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಸ್ವತಂತ್ರ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದ್ದ ಎಂ.ಮೂರ್ತಿ, ಮಹದೇವಸ್ವಾಮಿ.ಎಸ್., ಬಿ.ಎಂ. ಮಹದೇವ ಸ್ವಾಮಿ, ನಾಗಮಣಿ ಅವರ ನಾಮಪತ್ರ ತಿರಸ್ಕೃತವಾಗಿವೆ. ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಕುಮಾರಸ್ವಾಮಿ ಅವರ ನಾಮಪತ್ರ ತಿರಸ್ಕೃತವಾಗಿದೆ.

ಬಿಜೆಪಿಯ ಗೆಲುವು ಕೊಳ್ಳೇಗಾಲದಿಂದಲೇ ಆರಂಭವಾಗಲಿ: ವಿಜಯೇಂದ್ರ

- ಯಡಿಯೂರಪ್ಪ ಅವರನ್ನು ಸಿ ಎಂ ಮಾಡಲು ಅಂದು ಮಹೇಶಣ್ಣ ಬಿಎಸ್ಪಿ ತೊರೆದು ಷರತ್ತಿಲ್ಲದೆ ಬೆಂಬಲ ಸೂಚಿಸಿದ್ರು
- ಮಹೇಶ್ ಗೆದ್ದರೆ ಮಂತ್ರಿಯಾಗುತ್ತಾರೆ, ಅವರ ಗೆಲುವು ಯಡಿಯೂರಪ್ಪ ಗೆಲುವಾಗಲಿದೆ





ಕೊಳ್ಳೇಗಾಲ, ಏ.21– ಶಾಸಕ ಮಹೇಶ್ ದಲಿತರ ಧ್ವನಿ, ಅವರು ಈ ಬಾರಿ ಗೆದ್ದೇ ಗೆಲ್ಲುತ್ತಾರೆ, ಗೆದ್ದು ಮಂತ್ರಿಯಾಗುತ್ತಾರೆ, ಅವರ ಗೆಲುವು ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ ಅವರ ಗೆಲುವು ಮಾತ್ರವಲ್ಲ ನನಗೂ ಅಭೂತಪೂರ್ವ ಬೆಂಬಲ ನೀಡಿದಂತಾಗುತ್ತದೆ, ಹಾಗಾಗಿ ಮತದಾರರು ಈ ಬಾರಿ ಅವರನ್ನು ಹೆಚ್ಚು ಮತಗಳಿಂದ ಗೆಲ್ಲಿಸಿ ಬಿಜೆಪಿ ಗೆಲುವು ಇಲ್ಲಿಂದಲೇ ಆರಂಭವಾಗಲಿ ಎಂದು ಶಿಕಾರಿಪುರದ ಬಿಜೆಪಿ ಅಭ್ಯರ್ಥಿ ಬಿ.ವೈ. ವಿಜಯೇಂದ್ರ ಹೇಳಿದರು.

ತಾಲೂಕಿನ ಸಿದ್ದಯ್ಯನಪುರ ಗ್ರಾಮದಿಂದ ಬೊಮ್ಮೇಶ್ವರ ದೇವಾಲಯದಲ್ಲಿ ತೆರೆದ ವಾಹನದ ಮೂಲಕ ರೋಡ್ ಶೋ ನಡೆಸಿ ಕೊಳ್ಳೇಗಾಲದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಬಳಿಕ ದೇವಲ ಮಹರ್ಷಿ ವೃತ್ತದಲ್ಲಿ ಆಯೋಜಿಸಿದ್ದ ಪ್ರಚಾರ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಮಹೇಶ್ ಅವರ ಗೆಲ್ಲಿಸಿ ಎಂದು ಕೇಳಲು ಕ್ಷೇತ್ರದ ಜನರ ಬಳಿ ಪ್ರಾರ್ಥಿಸಲು ಬಂದಿದ್ದೇನೆ. ಮೇ 13ರ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವ ಕ್ಷೇತ್ರಗಳ ಪೈಕಿ ಕೊಳ್ಳೇಗಾಲದ ಫಲಿತಾಂಶದಲ್ಲಿ ಮಹೇಶ್ ಹೆಚ್ಚು ಮತಗಳಿಂದ ಗೆಲ್ಲುವಂತಹ ಸುದ್ದಿ ಕೇಳಬೇಕು, ಈ ನಿಟ್ಟಿನಲ್ಲಿ ಮತದಾರರು ಅವರನ್ನು ಬೆಂಬಲಿಸಿ ಎಂದು ಮನವಿ ಮಾಡಿದರು. ಕೊಳ್ಳೇಗಾಲಕ್ಕೂ ನನಗೂ ಅವಿನಾಭಾವ ಸಂಬಂಧವಿದೆ. 2 ವರ್ಷಗಳ ಕಾಲ ಲಯನ್ಸ್ ಶಾಲೆಯಲ್ಲಿ ಓದಿದ್ದೇನೆ. ಇಲ್ಲಿಗೆ ಬರಲೂ ನನಗೆ ಹೆಮ್ಮೆ ಮತ್ತು ಬಹಳ ಸಂತೋಷ ಎನಿಸುತ್ತದೆ ಎಂದು ಸ್ಮರಿಸಿದರು.

ರಾಜ್ಯದಲ್ಲಿ ಅತಂತ್ರ ವಿಧಾನಸಭೆ ನಿರ್ಮಾಣವಾಗಿದ್ದ ಸಂಧರ್ಭದಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಬಿಜೆಪಿಯನ್ನು ಅಧಿಕಾರದಿಂದ ದೂರವಿಡಬೇಕೆಂಬ ತಂತ್ರಗಾರಿಕೆ ಮಾಡುತ್ತಿವೆ. ಬಿಜೆಪಿ ಅಧಿಕಾರಕ್ಕೆ ಬಂದು ಯಡಿಯೂರಪ್ಪ ಮುಖ್ಯ ಮಂತ್ರಿಗಳಾಗಬೇಕೆಂದು ಜೆಡಿಎಸ್ ಹಾಗೂ ಕಾಂಗ್ರೆಸ್‌ನಿಂದ 15 ಶಾಸಕರು ಹೊರಬಂದರು. ಅಂತೆಯೇ, ಅಂದು ಶಾಸಕ ಮಹೇಶ್ ಅವರು ಬಿಎಸ್ಪಿಯಿಂದ ಹೊರಬಂದು ಬಿಜೆಪಿಗೆ ಷರತ್ತು ರಹಿತ ಬೆಂಬಲ ನೀಡಿದ್ದರು ಎಂದರು.

ಎಸ್. ಮಹೇಂದರ್, ಬಿಜೆಪಿ ಅಭ್ಯರ್ಥಿ ಎನ್ ಮಹೇಶ್, ಸೋಮಣ್ಣ ಉಪ್ಪಾರ್, ರಾಜೇಶ್, ಜಿಲ್ಲಾ ಬಿಜೆಪಿ ವಕ್ತಾರ ಬಸವರಾಜಪ್ಪ, ಕರ್ನಾಟಕ ಮೃಗಾಲಯದ ಪ್ರಾಧಿಕಾರ ನಿದೇಶಕಿ ಜ್ಯೋತಿ ರೇಚಣ್ಣ, ಅಲ್ಪ ಸಂಖ್ಯಾತ ಜಿಲ್ಲಾಧ್ಯಕ್ಷ ಜಕ್ಕಾವುಲ್ಲಾ, ನಗರಸಭೆ ಸದಸ್ಯ ಚಿಂತು ಪರಮೇಶ್, ಓಬಿಬಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ನಗರ ಮಂಡಲ ಯುವ ಮೋರ್ಚಾ ಅಧ್ಯಕ್ಷ ಕಿರಣ, ಜಕಾವುಲ್ಲಾ ಇನ್ನಿತರರು ಇದ್ದರು



ಕೇಸರಿ ಪಾಳೆಯ ಸೇರಿದ ಮಾಜಿ ಶಾಸಕ ಬಾಲರಾಜು

ಕೊಳ್ಳೇಗಾಲ, ಏ.21– 1999ರಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಗಮನ ಸೆಳೆದಿದ್ದ ಮಾಜಿ ಶಾಸಕ ಎಸ್ ಬಾಲರಾಜು ಪುನಃ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ.

ಬೆಂಗಳೂರಿನಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವ ಶೋಭ ಕರಂದ್ಲಾಜೆ, ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಇನ್ನಿತರರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರಿದರು.

ಈ ವೇಳೆ ಪಕ್ಷಕ್ಕೆ ಬರಮಾಡಿಕೊಂಡ ಮಾಜಿ ಸಿಎಂ ಯಡಿಯೂರಪ್ಪ ಮಾತನಾಡಿ, ಬಿಜೆಪಿಯ ಜನಪರ ಕಾರ್ಯಕ್ಕೆ ಮೆಚ್ಚಿ ಎಸ್ ಬಾಲರಾಜು ಬಿಜೆಪಿ ಸೇರ್ಪಡೆಯಾಗಿರುವುದು ಸಂತಸವಾಗಿದ್ದು, ಪಕ್ಷವನ್ನು ಗೆಲ್ಲಿಸುವ ಮೂಲಕ ರಾಜ್ಯದಲ್ಲಿ ಅಧಿಕಾರಕ್ಕೆ ತರುವಲ್ಲಿ ಶ್ರಮಿಸಿ, ಹಿಂದೆಯೇ ನನ್ನ ಜೊತೆ ಬಾಲರಾಜು ಪಕ್ಷ ಸೇರಿದ್ದರೆ ಸೂಕ್ತ ಸ್ಥಾನ ಮಾನ ಸಿಗುತ್ತಿತ್ತು, ಪಕ್ಷಕ್ಕಾಗಿ ದುಡಿದವರನ್ನು ಬಿಜೆಪಿ ಕಡೆಗಣಿಸಲ್ಲ, ಹಾಗಾಗಿ ಪಕ್ಷ ಸಂಘಟಿಸಿ, ನಿಮ್ಮ ಜೊತೆ ನಾವಿದ್ದೇವೆ ಎಂದರು.

> **"ಕಾಂಗ್ರೆಸ್‌ನಲ್ಲಿ ಪ್ರಾಮಾಣಿಕರಿಗೆ ಬೆಲೆ ಇಲ್ಲ, ಬೆಳೆಸುವ ಅವಕಾಶವಂತೂ ಖಂಡಿತ ಇಲ್ಲ, ದುಡಿಸಿಕೊಂಡು ನಮ್ಮನ್ನು ಕಡೆಗಣಿಸುತ್ತಾರೆ. ನಮಗೆ ಗಾಡ್ ಫಾದರ್ ಆಗಿದ್ದವರು ಧ್ರುವನಾರಾಯಣ್, ಅವರು ನಮ್ಮನ್ನು ಈಗ ಅಗಲಿದ್ದಾರೆ. ನನಗೆ ದಿಕ್ಕೇ ತೋಚದಂತಾಯಿತು. ನನ್ನ ಬೆಂಬಲಿಗರು, ಹಾಗೂ ಸಾವಿರಾರು ಹಿತೈಷಿಗಳು ಪಕ್ಷ ಬಿಡಿ ಎಂಬ ಸಂದೇಶ ನೀಡಿದರು. ಯಾರನ್ನ ನಾವು ವಿರೋಧಿಸುತ್ತಿದ್ದೆವೋ ಅವರನ್ನು ಪಕ್ಷಕ್ಕೆ ಸೇರಿಸಿಕೊಂಡಿದ್ದು ನನಗೆ ಬೇಸರವಾಯಿತು. ತೀರಾ ಬೇಸರಗೊಂಡು ಬಿಜೆಪಿ ಸೇರಿದೆ.**
> - ಎಸ್. ಬಾಲರಾಜು. ಮಾಜಿ ಶಾಸಕ.

ರಾಜಕೀಯ ಪ್ರಾರಂಭದ ಸಂದರ್ಭದಲ್ಲಿ ಬಸವರಾಜು, ಕೆ.ಕೆ ಮೂರ್ತಿ, ಪಿ ಎನ್ ಶಿವಕುಮಾರ್ ಸೇರಿದಂತೆ ಅಪಾರ ಬೆಂಬಲಿಗರೂ ಪಕ್ಷಕ್ಕೆ ಸೇರ್ಪಡೆಗೊಂಡರು. ರಾಜಕೀಯ ಪ್ರಾರಂಭದಲ್ಲಿ ಕಾಂಗ್ರೆಸ್, ನಂತರ ಬಿಜೆಪಿ, ಕೆಜೆಪಿ, ಬಳಿಕ ಕಾಂಗ್ರೆಸ್ ಸೇರಿದ್ದ ಬಾಲರಾಜು ಅವರು ಪುನಃ 24 ವರ್ಷಗಳ ಬಳಿಕ ಮರಳಿ ಬಿಜಪಿ ಪಕ್ಷದ ಗೂಡಿಗೆ ಸೇರಿದಂತಾಗಿದೆ.

ಮೈಸೂರು ಮಿತ್ರ

ಶನಿವಾರ 22 ಏಪ್ರಿಲ್ 2023

ಒಂದನೇ ಪುಟದಿಂದ

ನಾಮಪತ್ರ ತಿರಸ್ಕೃತಗೊಂಡವರು

ಚಾಮುಂಡೇಶ್ವರಿ: ಕುಮಾರ್ ಕ್ರಾಂತಿ, ಈಶ್ವರ್ ಕೆ.ಹೆಗ್ಡೆ, ಪಿ.ಮಂಜುನಾಥ, ಹೆಚ್.ಕೆ.ರಾಮೇಗೌಡ, ಹೆಚ್.ಎಂ.ಅಂಕಯ್ಯ, ಶ್ರೀನಿವಾಸ, ಮೆಹುಲ್ ಜೆ.ಪಟೇಲ್, ಎಸ್.ಹರೀಶ. **ಚಾಮರಾಜ ಕ್ಷೇತ್ರ:** ಎಸ್.ಜಯಪ್ರಕಾಶ್, ಎಂ.ಎನ್.ಹರೀಶ್‌ಗೌಡ, ಜೈಪ್ರಕಾಶ್. **ವರುಣಾ:** ಅಕ್ಕಮಹಾದೇವಿ, ಹೆಚ್.ಪಿ.ಸುಜಾತಾ, ಎನ್.ಎಂ.ಯೋಗೇಶ್. **ಹುಣಸೂರು:** ಜೆ.ಶಿವಕುಮಾರ, ಜಮೀರ್ ಪಾಷಾ. **ಕೃಷ್ಣರಾಜ:** ವೈ.ಪವನ್ ಕುಮಾರ್, ಎನ್.ಗುರುಶಂಕರ. **ಹೆಚ್.ಡಿ.ಕೋಟೆ:** ಮಹಾದೇವಿ, ಎಸ್.ರೂಪಾ. **ನರಸಿಂಹರಾಜ:** ಲಕ್ಷ್ಮಿಕಾಂತ ತಿವೇರಿ. **ಪಿರಿಯಾಪಟ್ಟಣ:** ನಾಗವೇಣಿ.

22 ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತ

ರಾಷ್ಟ್ರೀಯ ಸಮಿತಿ(ಕೆಆರ್‌ಎಸ್)ಯ ಎಂ.ರವಿಕುಮಾರ್, ಕರ್ನಾ ಟಕ ಪ್ರಜಾ ಪಕ್ಷದ ಈ. ಶಿವ, ಪಕ್ಷೇತರರಾದ ಎಲ್. ಕುಮಾರ್, ಖಲೀಲ್ ಉಲ್ಲಾ, ಗಿರೀಶ್, ಗುರುಲಿಂಗಯ್ಯ, ಈ.ಚೇತನ್, ಪ್ಯಾರಿ ಜಾನ್, ಎಂ.ಮಹೇಶ್, ಕೆ.ಎಸ್. ಮಾದಪ್ಪ, ಬಿ.ಶಿವಣ್ಣ, ಡಾ.ಯು.ಪಿ.ಶಿವಾನಂದ, ಸಿದ್ದ, ವಿ.ಸಿದ್ದರಾಜು, ಸುರೇಶ, ವಿ.ಪಿ.ಸುಶೀಲ.

ನರಸಿಂಹರಾಜ ಕ್ಷೇತ್ರ: ಕಾಂಗ್ರೆಸ್‌ನ ತನ್ವೀರ್ ಸೇಠ್, ಬಿಜೆಪಿಯ ಎಸ್.ಸತೀಶ್ ಸಂದೇಶ್ ಸ್ವಾಮಿ, ಜೆಡಿಎಸ್‌ನ ಅಬ್ದುಲ್ ಖಾದರ್, ಆಮ್ ಆದ್ಮಿ ಪಾರ್ಟಿಯ ಧರ್ಮಶ್ರೀ, ಎಸ್‌ಡಿಪಿಐನ ಕೆ.ಹೆಚ್.ಅಬ್ದುಲ್ ಮಜೀದ್, ಇಂಡಿಯನ್ ನ್ಯೂ ಕಾಂಗ್ರೆಸ್ ಪಾರ್ಟಿ ಅಯೂಬ್ ಖಾನ್, ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿಯ ರಿಹಾನ ಬಾನು, ಉತ್ತಮ ಪ್ರಜಾಕೀಯ ಪಾರ್ಟಿ ಜೆ.ಎಸ್.ಲೀಲಾವತಿ, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ(ಕರ್ನಾಟಕ) ವಿನೋಧ ಎಂ.ಚಾಕೋ, ಕೆಆರ್‌ಎಸ್ ಪಕ್ಷದ ಸುಂದರ್ ಪ್ರೇಂಕುಮಾರ್, ಪಕ್ಷೇತರರಾದ ಅಜೀಮುಲ್ಲಾ ಅಜ್ಜು, ಅಮ್ಜದ್ ಖಾನ್, ಖಲೀಲ್ ಉರ್ ರಹಮಾನ್ ಷರೀಫ್, ವಿ.ಗಿರಿಧರ್, ಎಂ.ಎನ್.ನೀಲಕಂಠ, ಆರ್.ಸಿ.ರಾಜ್, ರಾಬರ್ಟ್ ಇಮ್ಯಾನುಯಲ್, ಎಂ.ಲಿಂಗರಾಜ್, ಜಿ.ಲೋಕೇಶ್ ಕುಮಾರ್, ಜಿ.ಬಿ.ಶಿವಣ್ಣ, ಸೈಯದ್ ಆಲಿಷಾನ್.

ಕೃಷ್ಣರಾಜ ಕ್ಷೇತ್ರ: ಬಿಜೆಪಿ ಟಿ.ಎಸ್.ಶ್ರೀವತ್ಸ, ಕಾಂಗ್ರೆಸ್ ಎಂ.ಕೆ.ಸೋಮಶೇಖರ್, ಜೆಡಿಎಸ್‌ನ ಕೆ.ವಿ.ಮಲ್ಲೇಶ್, ಆಮ್ ಆದ್ಮಿ ಪಕ್ಷದ ವೈ.ಜಯಶ್ರೀ, ಬಿಎಸ್‌ಪಿಯ ಸಿ.ಶ್ರೀನಿವಾಸ ಪ್ರಸಾದ್, ಇಂಡಿಯನ್ ಮೂವ್‌ಮೆಂಟ್ ಪಕ್ಷದ ಎಂ.ಲಿಂಗರಾಜು, ಉತ್ತಮ ಪ್ರಜಾಕೀಯ ಪಕ್ಷದ ಎಸ್.ಸುಮಲತಾ, ಕೆಆರ್‌ಎಸ್ ಪಕ್ಷ ಕೆ.ಎಸ್.ಸೋಮಸುಂದರ್, ಎಸ್‌ಯುಸಿಐನ ಪಿ.ಎಸ್.ಸಂಧ್ಯಾ, ಪಕ್ಷೇತರರಾದ ಅಮಿತಾಭ, ಹೆಚ್.ಪಿ.ಉದಯಶಂಕರ, ಎಂ.ಆರ್.ತೇಜಸ್ವಿ ಕುಮಾರ್, ಹೆಚ್.ಎನ್. ಪಾರ್ಥಸಾರಥಿ, ಎಸ್.ಪ್ರಕಾಶ್ ಪ್ರಿಯಾದರ್ಶನ್, ಬಿ.ರೋಹಿತ್ ಕುಮಾರ್, ಲಕ್ಷ್ಮೀ ನಾರಾಯಣ ರಾವ್, ಎ.ಎಸ್.ಸತೀಶ್, ಸುಂಡಹಳ್ಳಿ ಸೋಮಶೇಖರ.

ಚಾಮರಾಜ ಕ್ಷೇತ್ರ: ಬಿಜೆಪಿ ಎಲ್.ನಾಗೇಂದ್ರ, ಕಾಂಗ್ರೆಸ್‌ನ ಕೆ.ಹರೀಶ್‌ಗೌಡ, ಜೆಡಿಎಸ್‌ನ ಹೆಚ್.ಕೆ.ರಮೇಶ್(ರವಿ), ಆಮ್ ಆದ್ಮಿ ಪಾರ್ಟಿಯ ಮಾಲವಿಕ ಗುಬ್ಬಿವಾಣಿ, ಬಿಎಸ್‌ಪಿ ಚಂದ್ರಶೇಖರ, ಕೆಆರ್‌ಎಸ್ ಪಕ್ಷ ಡಿಪಿಕೆ ಪರಮೇಶ, ಕಂಟ್ರಿ ಸಿಟಿಜನ್ ಪಾರ್ಟಿಯ ಎಂ.ಪಂಚಲಿಂಗು, ಉತ್ತಮ ಪ್ರಜಾಕೀಯ ಪಾರ್ಟಿಯ ಪ್ರಭ ನಂದೀಶ್, ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಫಾರ್ ಇಂಡಿಯಾ(ಕಮ್ಯುನಿಸ್ಟ್) ಜಿ.ಎಸ್.ಸೀಮಾ, ಪಕ್ಷೇತರರಾದ ಅಖೀಲ್ ಅಹಮದ್, ಎಂ.ಮನೋಜ್‌ಕುಮಾರ್, ಆರ್.ಯೋಗಾನರಸಿಂಹ ಮೂರ್ತಿ, ಸಲೀಂ ಅಹ್ಮದ್, ಹೆಚ್.ಡಿ.ಸಿದ್ದರಾಜು(ಕಾವೇರಿ ಮೆಸ್), ಟಿ.ಎಸ್.ಸುರೇಶ್, ಸುಹೇಲ್ ಬೇಗ್.

ಚಾಮುಂಡೇಶ್ವರಿ ಕ್ಷೇತ್ರ: ಜೆಡಿಎಸ್‌ನ ಜಿ.ಟಿ.ದೇವೇಗೌಡ, ಕಾಂಗ್ರೆಸ್ ಎಸ್.ಸಿದ್ದೇಗೌಡ, ಬಿಜೆಪಿಯ ವಿ.ಕವೀಶ್ ಗೌಡ, ಬಿಎಸ್‌ಪಿಯ ಜೆ.ಜಯಶಂಕರ(ಶ್ಯಾಮ್), ಆಮ್ ಆದ್ಮಿ ಪಾರ್ಟಿಯ ಕಿರಣ್ ನಾಗೇಶ್ ಕಲ್ಯಾಣಿ, ಉತ್ತಮ ಪ್ರಜಾಕೀಯ ಪಾರ್ಟಿಯ ಎಸ್.ಹರೀಶ, ಕೆಆರ್‌ಎಸ್ ಪಕ್ಷದ ಮಾ.ಸ.ಪ್ರವೀಣ್, ಕರ್ನಾಟಕ ಪ್ರಜಾ ಪಾರ್ಟಿ(ರೈತಪರ್ವ) ಬಿ.ಶಿವಣ್ಣ, ಪಕ್ಷೇತರರಾದ ಬಿ.ಪ್ರಕಾಶ, ಜಿ.ಎಂ.ಮಹದೇವ, ಸಿದ್ದೇಗೌಡ, ಎಂ.ನಾಗರಾಜು, ಎಂ.ಎಂ.ಮಹೇಶ್‌ಗೌಡ, ಎಂ.ರಂಗಸ್ವಾಮಿ, ಸುರೇಶ್.

ತಿ.ನರಸೀಪುರ ಕ್ಷೇತ್ರ ಜೆಡಿಎಸ್ ಎಂ.ಅಶ್ವಿನ್ ಕುಮಾರ್, ಕಾಂಗ್ರೆಸ್‌ನ ಡಾ.ಹೆಚ್.ಸಿ. ಮಹದೇವಪ್ಪ, ಬಿಜೆಪಿ ಡಾ.ಎಂ.ರೇವಣ್ಣ, ಬಿಎಸ್‌ಪಿ ಬಿ.ಆರ್.ಪುಟ್ಟಸ್ವಾಮಿ, ಆಮ್ ಆದ್ಮಿ ಪಾರ್ಟಿಯ ಎಂ.ಸಿದ್ದರಾಜು, ರಾಣಿ ಚೆನ್ನಮ್ಮ ಪಾರ್ಟಿಯ ಎನ್.ಚಂದ್ರಪ್ಪ, ಕೆಆರ್‌ಎಸ್ ಪಕ್ಷದ ಎಂ.ಡಿ.ಮಂಜುನಾಥ, ಕಂಟ್ರಿ ಸಿಟಿಜನ್ ಪಾರ್ಟಿಯ ಆರ್.ರೇಣುಕಾ, ಸಮಾಜವಾದಿ ಜನತಾ ಪಾರ್ಟಿಯ ಎ.ಎನ್.ಶಿವಲಿಂಗಪ್ಪ, ಇಂಡಿಯನ್ ಮೂವ್‌ಮೆಂಟ್ ಪಾರ್ಟಿಯ ಶ್ರೀನಿವಾಸ, ಪಕ್ಷೇತರರಾದ ಎಂ.ಕುಮಾರ್ ಕ್ರಾಂತಿ, ಕೆ.ಕೆಂಚಯ್ಯ, ಎಸ್.ಚಂದ್ರಶೇಖರ್, ಡಿ.ಮಹದೇವ, ಸಿ.ಪಿ.ಸುರೇಂದ್ರನಾಥ.

ಹುಣಸೂರು ಕ್ಷೇತ್ರ: ಜೆಡಿಎಸ್ ಜಿ.ಡಿ.ಹರೀಶ್‌ಗೌಡ, ಕಾಂಗ್ರೆಸ್‌ನ ಹೆಚ್.ಪಿ.ಮಂಜುನಾಥ್, ಬಿಜೆಪಿಯ ಸೋಮಶೇಖರ್, ಬಿಎಸ್‌ಪಿ ಪ್ರಸನ್ನಕುಮಾರ್, ಆಮ್ ಆದ್ಮಿ ಪಾರ್ಟಿಯ ಜಿ.ರವಿಕುಮಾರ್, ಕೆಆರ್‌ಎಸ್ ಪಕ್ಷ ತಿಮ್ಮಾಬೋವಿ, ಉತ್ತಮ ಪ್ರಜಾಕೀಯ ಪಾರ್ಟಿ ಡಿ.ಎನ್.ಸುನೀಲ್, ಪಕ್ಷೇತರರಾದ ಉಮೇಶ್, ಚನ್ನೇಗೌಡ, ಬೀರೇಶ್, ಪಿ.ಎಸ್.ಯಡಿಯೂರಪ್ಪ, ಹೆಚ್.ಬಿ.ರಾಜೇಂದ್ರ, ಬಿ.ಎಲ್.ಲೋಕೇಶ್, ಸೈಯದ್ ಅನೀಫ್.

ಕೆ.ಆರ್.ನಗರ ಕ್ಷೇತ್ರ: ಜೆಡಿಎಸ್ ಸಾ.ರಾ.ಮಹೇಶ್, ಕಾಂಗ್ರೆಸ್‌ನ ಡಿ.ರವಿಶಂಕರ್, ಬಿಜೆಪಿಯ ಹೊಸಹಳ್ಳಿ ವೆಂಕಟೇಶ್, ಬಿಎಸ್‌ಪಿಯ ಭರತ್‌ಕುಮಾರ್, ಆಮ್ ಆದ್ಮಿ ಪಾರ್ಟಿಯ ಮುರುಗೇಶ್, ಕೆಆರ್‌ಎಸ್ ಪಕ್ಷದ ಪರಮೇಶ, ಉತ್ತಮ ಪ್ರಜಾಕೀಯ ಪಾರ್ಟಿಯ ಕೆ.ಮೋಹನ್, ಪಕ್ಷೇತರರಾದ ಪರಶಿವನಾಯಕ, ಮಹದೇವ, ರಾಘವಾನ್‌ಗೌಡ, ಡಿ.ರಾಮಯ್ಯ, ಶಿವುಗೌಡ, ಹೆಚ್.ಎ.ಸುರೇಶ್ ಅವರ ನಾಮಪತ್ರ ಕ್ರಮಬದ್ಧವಾಗಿವೆ.

ಹೆಚ್.ಡಿ.ಕೋಟೆ ಕ್ಷೇತ್ರ: ಕಾಂಗ್ರೆಸ್ ಅನಿಲ್ ಚಿಕ್ಕಮಾದು, ಬಿಜೆಪಿ ಕೆ.ಎಂ.ಕೃಷ್ಣನಾಯಕ, ಜೆಡಿಎಸ್ ಜಯಪ್ರಕಾಶ ಚಿಕ್ಕಣ್ಣ, ಬಿಎಸ್‌ಪಿಯ ಹೋಟೆಲ್ ಶಿವಣ್ಣ, ಉತ್ತಮ ಪ್ರಜಾಕೀಯ ಪಾರ್ಟಿಯ ಹೆಚ್.ಎಂ.ನಾಗೇಶ, ಸಮಾಜವಾದಿ ಜನತಾ ಪಾರ್ಟಿ(ಕರ್ನಾಟಕ) ಕೆ.ವಿ.ರಾಜು, ಕೆಆರ್‌ಎಸ್ ಪಕ್ಷದ ಹೆಚ್.ಎಂ.ಶಿವಪ್ಪ, ಪಕ್ಷೇತರರಾದ ಗಿರಿಜಾಂಬ, ಜಿ.ಎನ್.ದೇವದತ್ತ, ಎ.ಎಂ.ಬಾಬು ನಾಯಕ, ಎಂ.ಎಸ್.ಶಿವಕುಮಾರ, ಸಣ್ಣನಾಯ್ಕ

ನಂಜನಗೂಡು ಕ್ಷೇತ್ರ: ಕಾಂಗ್ರೆಸ್ ದರ್ಶನ್ ಧ್ರುವನಾರಾಯಣ್, ಬಿಜೆಪಿ ಬಿ.ಹರ್ಷವರ್ಧನ್, ಬಿಎಸ್‌ಪಿಯ ಶ್ರೀಕಂಠ, ಆಮ್ ಆದ್ಮಿ ಪಾರ್ಟಿಯ ಹೆಚ್.ಹನುಮಯ್ಯ, ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಆರ್.ಮಾದೇಶನ್, ಕರ್ನಾಟಕ ರಾಷ್ಟ್ರ ಸಮಿತಿಯ ಎಂ.ಪಿ.ವಿಜಯ್ ಕುಮಾರ್, ಪಕ್ಷೇತರರಾದ ಆನಂದ ಜೀವನ್‌ರಾಂ, ವಿ.ಗೋವಿಂದರಾಜು, ಜಿ.ಡಿ.ರಾಜಗೋಪಾಲ, ಬಿ.ವಿದ್ಯಾಸಾಗರ್, ಹೆಚ್.ಕೆ.ಸ್ವಾಮಿ ಹರದನಹಳ್ಳಿ, ಸುಬ್ಬಯ್ಯ

ಪಿರಿಯಾಪಟ್ಟಣ ಕ್ಷೇತ್ರ ಜೆಡಿಎಸ್ ಕೆ.ಮಹದೇವ, ಕಾಂಗ್ರೆಸ್‌ನ ಕೆ.ವೆಂಕಟೇಶ್, ಬಿಜೆಪಿಯ ಸಿ.ಹೆಚ್.ವಿಜಯಶಂಕರ್, ಬಿಎಸ್‌ಪಿ ಸಿ.ಎಸ್.ಪ್ರದೀಪ, ಆಮ್ ಆದ್ಮಿ ಪಕ್ಷದ ರಾಜಶೇಖರ್ ದೊಡ್ಡಣ್ಣ, ಕರ್ನಾಟಕ ರಾಷ್ಟ್ರ ಸಮಿತಿಯ ಗುರುಮೂರ್ತಿ ಜೋಗನಹಳ್ಳಿ, ಉತ್ತಮ ಪ್ರಜಾಕೀಯ ಪಕ್ಷದ ಪಿ.ಎಸ್.ನವೀನ್ ಕುಮಾರ್, ಪಕ್ಷೇತರರಾದ ಕಿರಣ್ ಹರದೂರ್, ಪಿ.ಎಸ್.ಯಡಿಯೂರಪ್ಪ, ಆರ್.ತುಂಗಾ ಶ್ರೀನಿವಾಸ ಹಾಗೂ ಬಿ.ಎಸ್.ಸುಬ್ರಹ್ಮಣ್ಯ

ರಾಜ್ಯಾದ್ಯಂತ 518 ನಾಮಪತ್ರ ತಿರಸ್ಕೃತ

ಬೆಂಗಳೂರು, ಏ.21–ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ರಾಜ್ಯಾದ್ಯಂತ ಸಲ್ಲಿಸಲಾಗಿದ್ದ 5108 ನಾಮಪತ್ರಗಳ ಪೈಕಿ 518 ತಿರಸ್ಕೃತಗೊಂಡಿದ್ದು, 4351 ನಾಮಪತ್ರ ಕ್ರಮಬದ್ಧವಾಗಿವೆ. ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್‌ನ ಬಹುತೇಕ ಅಭ್ಯರ್ಥಿಗಳ ನಾಮಪತ್ರಗಳು ಕ್ರಮಬದ್ಧವಾಗಿವೆ. ಹೆಚ್ಚಿನ ಪ್ರಮಾಣದಲ್ಲಿ ಪಕ್ಷೇತರರ ನಾಮಪತ್ರಗಳು ತಿರಸ್ಕೃತಗೊಂಡಿವೆ ಸಮಸ್ತಿ ಬೀದರ್, ಹಾವೇರಿ, ರಾಯಚೂರು ಮತ್ತು ಶಿವಾಜಿನಗರ ಕ್ಷೇತ್ರಗಳ ನಾಮಪತ್ರ ಪರಿಶೀಲನೆ ಬಾಕಿ ಇದೆ ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ಏ.13 ರಂದು ಆರಂಭವಾಗಿದ್ದು ಉಮೇದುವಾರಿಕೆ ಹಿಂಪಡೆಯಲು ಏ.24 ಕೊನೆಯ ದಿನವಾಗಿದೆ ಮೇ 10ರಂದು ರಾಜ್ಯದಲ್ಲಿ ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದ್ದು, ಮೇ 13ರಂದು ಫಲಿತಾಂಶ ಪ್ರಕಟಗೊಳ್ಳಲಿದೆ.

ಶೇ.74.67 ಫಲಿತಾಂಶ

ಹಂಚಿಕೊಂಡಿದ್ದಾರೆ. ಕಲಾ ವಿಭಾಗದಲ್ಲಿ ಬೆಂಗಳೂರಿನ ಎನ್‌ಎಂಕೆಆರ್‌ವಿ ಮಹಿಳಾ ಕಾಲೇಜಿನ ತಬಸ್ಸುಮ್ ಶೇಖ್ 600 ಅಂಕಗಳಿಗೆ 593 ಅಂಕ ಪಡೆದು ಪ್ರಥಮ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಅನನ್ಯ ಕೆ.ಎ. ಪ್ರಥಮ ರ‍್ಯಾಂಕ್ ಪಡೆದಿದ್ದಾರೆ. ಇವರು ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆ ಆಳ್ವಾಸ್ ಕಾಲೇಜು ವಿದ್ಯಾರ್ಥಿನಿ. ಮಂಡಳಿಯ ಅಧ್ಯಕ್ಷ ಎಸ್.ರಾಮಚಂದ್ರನ್ ಅವರು ಸುದ್ದಿಗೋಷ್ಠಿಯಲ್ಲಿ ಫಲಿತಾಂಶದ ವಿವರವನ್ನು ನೀಡಿದರು. ಕಳೆದ ವರ್ಷ ಶೇ.61.88ರಷ್ಟು ಫಲಿತಾಂಶ ಬಂದಿದ್ದರೆ ಈ ವರ್ಷ ಶೇ.74.67ರಷ್ಟು ತೇರ್ಗಡೆಯಾಗಿದ್ದಾರೆ. ಕಲಾ ವಿಭಾಗದಲ್ಲಿ ಶೇ.61.22, ವಿಜ್ಞಾನ ವಿಭಾಗದಲ್ಲಿ ಶೇ.85.71, ವಾಣಿಜ್ಯ ವಿಭಾಗದಲ್ಲಿ ಶೇ.75.89ರಷ್ಟು ಫಲಿತಾಂಶ ಬಂದಿದೆ ಎಂದು ಅವರು ಹೇಳಿದರು.

ಈ ಬಾರಿಯ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಎಂದಿನಂತೆ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದು, ಬಾಲಕಿಯರ ಉತ್ತೀರ್ಣದ ಪ್ರಮಾಣ ಶೇ.80.25ರಷ್ಟಿದ್ದರೆ, ಬಾಲಕರ ಉತ್ತೀರ್ಣದ ಪ್ರಮಾಣ ಶೇ.69.05ರಷ್ಟಿದೆ ಎಂದು ಅವರು ತಿಳಿಸಿದರು.

ಶೇ.85ಕ್ಕಿಂತ ಹೆಚ್ಚು ಅಂಕವನ್ನು 109509 ವಿದ್ಯಾರ್ಥಿಗಳು ಪಡೆದಿದ್ದರೆ, ಪ್ರಥಮ ದರ್ಜೆಯಲ್ಲಿ 2,47,315 ವಿದ್ಯಾರ್ಥಿಗಳು ಗಳಿಸಿದ್ದಾರೆ. ದ್ವಿತೀಯ ದರ್ಜೆಯನ್ನು 90,014, ತೃತೀಯ ದರ್ಜೆಯನ್ನು 77,371 ವಿದ್ಯಾರ್ಥಿಗಳು ಪಡೆದು ತೇರ್ಗಡೆಯಾಗಿದ್ದಾರೆ.

ಗಣಿತ ವಿಭಾಗದಲ್ಲಿ 5,335 ವಿದ್ಯಾರ್ಥಿಗಳು 100ಕ್ಕೆ 100 ಅಂಕ ಪಡೆದಿದ್ದರೆ, ಕನ್ನಡ ವಿಷಯದಲ್ಲಿ 1,083 ವಿದ್ಯಾರ್ಥಿಗಳು ಪೂರ್ಣ ಅಂಕ ಗಳಿಸಿದ್ದಾರೆ ಎಂದು ಹೇಳಿದರು.

ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಮೊದಲ ಎರಡು ಸ್ಥಾನ ಗಳಿಸಿದರೆ, ಯಾದಗಿರಿ ಕೊನೆಯ ಸ್ಥಾನದಲ್ಲಿದೆ. ದಕ್ಷಿಣ ಕನ್ನಡ ಶೇ.95.33, ಉಡುಪಿ ಶೇ.95.24 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರೆ, ಯಾದಗಿರಿ ಶೇ.62.98ರಷ್ಟು ಫಲಿತಾಂಶ ಗಳಿಸಿವೆ.

ಉಳಿದಂತೆ ಕೊಡಗು–ಶೇ.90.55, ಹಾಸನ–ಶೇ.83.14, ಚಾಮರಾಜನಗರ–ಶೇ.81.92, ಮೈಸೂರು–ಶೇ.79–89, ಮಂಡ್ಯ–ಶೇ.77.47, ದಾವಣಗೆರೆ–ಶೇ.75.72ರಷ್ಟು ತೇರ್ಗಡೆಯಾಗಿದ್ದಾರೆ. ಅನುತೀರ್ಣರಾದ ವಿದ್ಯಾರ್ಥಿಗಳು ಪೂರಕ ಪರೀಕ್ಷೆಗೆ ಇಂದಿನಿಂದಲೇ ನೋಂದಾಯಿಸಿಕೊಳ್ಳಬಹುದು. ಪೂರಕ ಪರೀಕ್ಷಾ ವೇಳಾಪಟ್ಟಿಯನ್ನು ಏಪ್ರಿಲ್ ಕೊನೆಯ ವಾರದಲ್ಲಿ ಪ್ರಕಟಿಸಲಾಗುವುದು ಎಂದು ತಿಳಿಸಿದರು. ಅನುತೀರ್ಣರಾದ ವಿದ್ಯಾರ್ಥಿಗಳಿಗೆ ಮಾರ್ಕ್ಸ್ ಕಾರ್ಡ್ ಕಮ್ ಅರ್ಜಿಗಳನ್ನು ಈ ವರ್ಷದಿಂದ ನೀಡಲಾಗುವುದಿಲ್ಲ.

ಜಿಲ್ಲಾ ಸ್ವೀಪ್ ಸಮಿತಿಯಿಂದ ಮತದಾನ ಜಾಗೃತಿ

ಚುನಾವಣಾ ರಾಯಭಾರಿಯಾಗಿ ಮತದಾನಕ್ಕೆ ನಿಮ್ಮ ಕುಟುಂಬದವರ ಪ್ರೇರೇಪಿಸಿ

ನೀವೂ ತಪ್ಪದೇ ಮತ ಹಾಕಿ: ಕಾರ್ಮಿಕರಿಗೆ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಕರೆ



ಮೈಸೂರು,ಏ.21(ಪಿಎಂ)– ವಿಧಾನ ಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರತಿಯೊಬ್ಬರೂ ಚುನಾವಣಾ ರಾಯಭಾರಿಗಳಾಗಿ ನಿಮ್ಮ ಕುಟುಂಬದವರನ್ನು ಮತದಾನಕ್ಕೆ ಪ್ರೇರೇಪಿಸಿ, ನೀವೂ ತಪ್ಪದೇ ಮತದಾನ ಮಾಡಿ ಎಂದು ನೌಕರರು, ಕಾರ್ಮಿಕರಿಗೆ ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಕರೆ ನೀಡಿದರು.

ಮೈಸೂರಿನ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಶಾಹಿ ಎಕ್ಸ್‌ಪೋರ್ಟ್ಸ್ ಗಾರ್ಮೆಂಟ್ಸ್‌ನ ಕಾರ್ಮಿಕರು, ನೌಕರರಿಗೆ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಲ್ಲರೂ ಪ್ರಜ್ಞಾವಂತರಾಗಿ ಮತದಾನ ಮಾಡುವ ಮೂಲಕ ಪ್ರಜಾಪ್ರಭುತ್ವದ ಆಶಯ ಈಡೇರಿಸಬೇಕು ಎಂದು ತಿಳಿಸಿದರು.

ಮತದಾನ ಪವಿತ್ರ ಕಾರ್ಯವಾಗಿದ್ದು, ಮೇ 10ರಂದು ಪ್ರತಿಯೊಬ್ಬರೂ ಕಡ್ಡಾಯವಾಗಿ ಮತದಾನ ಮಾಡಬೇಕು. ನೀವೂ ಮತದಾನ ಮಾಡಿ, ನಿಮ್ಮ ಕುಟುಂಬ ವರ್ಗದವರು ಸೇರಿದಂತೆ ಸುತ್ತಮುತ್ತಲಿನ ಸ್ನೇಹಿತರು, ಬಂಧು–ಮಿತ್ರರಿಗೆಲ್ಲಾ ಮತದಾನ ಮಾಡುವಂತೆ ಉತ್ತೇಜಿಸಬೇಕು ಎಂದು ಸಲಹೆ ನೀಡಿದರು.

ಮತದಾನದ ಬಗ್ಗೆ ಯಾರೂ ನಿರ್ಲಕ್ಷ್ಯ ಮಾಡಬಾರದು. ಮತದಾನ ದಿನದಂದು ಯಾವುದೇ ಕೆಲಸ, ಕಾರ್ಯಗಳಿದ್ದರೂ ಬದಿಗೊತ್ತಿ ಮತಗಟ್ಟೆಗೆ ಬಂದು ಮತದಾನ ಮಾಡಬೇಕು. ಮತಗಟ್ಟೆಗಳಲ್ಲಿ ನೆರಳು, ಕುಡಿಯುವ ನೀರು, ಶೌಚಾಲಯ ಒಳಗೊಂಡಂತೆ ಮೂಲ ಸೌಕರ್ಯಗಳನ್ನು ಒದಗಿಸಲಾಗುವುದು ಎಂದು ಮಾಹಿತಿ ನೀಡಿದರು.

ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರೂ ಆದ ಜಿಪಂ ಸಿಇಓ ಕೆ.ಎಂ.ಗಾಯತ್ರಿ ಮಾತನಾಡಿ, ಯಾವುದೇ ಆಮಿಷಕ್ಕೆ ಒಳಗಾಗದೆ ವಿವೇಚನೆಯಿಂದ ಮತ ಚಲಾಯಿಸಬೇಕು. ದೇಶದ ಅಭಿವೃದ್ಧಿಗೆ ಶ್ರಮಿಕ ವರ್ಗದವರ ಪಾತ್ರ ಪ್ರಮುಖವಾಗಿದ್ದು ಎಲ್ಲರೂ ಮತದಾನ ಮಾಡುವ ಮೂಲಕ ಸದೃಢ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮತದಾರರ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಮೈಸೂರು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಹೆಚ್.ಡಿ.ಗಿರೀಶ್, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಜಂಟಿ ನಿರ್ದೇಶಕ ಟಿ.ದಿನೇಶ್, ಉಪ ನಿರ್ದೇಶಕ ವರದೇಗೌಡ, ಸಹಾಯಕ ನಿರ್ದೇಶಕ ವಿಜಯಕುಮಾರ್, ಜಿಪಂ ಸಹಾಯಕ ನಿರ್ದೇಶಕ ವಿಶ್ವನಾಥ್, ತಾಪಂ ಸಹಾಯಕ ನಿರ್ದೇಶಕ ಕೆ.ಎಂ. ರಘುನಾಥ್, ಇಲವಾಲ ಗ್ರಾಪಂ ಪಿಡಿಓ ಹೇಮಂತ್ ಮತ್ತಿತರರು ಹಾಜರಿದ್ದರು.

ಸ್ಥೂಲಕಾಯ ಅನಾರೋಗ್ಯ ಸಮಸ್ಯೆ ಕುರಿತ ವಿಚಾರ ಸಂಕಿರಣ ಇಂದು



ಮೈಸೂರು,ಏ.21 (ಪಿಎಂ)–ಶ್ರೀರಾಂಪುರದ ಸಿಂಧು ಚಾರಿಟಬಲ್ ಟ್ರಸ್ಟ್, ಸಿಂಧು ಕಣ್ಣಿನ ಆಸ್ಪತ್ರೆ, ಆದರ್ಶ ಸೇವಾ ಸಂಘದ ಸಂಯುಕ್ತಾಶ್ರಯದಲ್ಲಿ ಏ.22 ರಂದು ಸ್ಥೂಲಕಾಯದಿಂದ ಉಂಟಾಗುವ ಅನಾರೋಗ್ಯ ಸಮಸ್ಯೆಗಳು, ಟೈಪ್ 2 ಮಧುಮೇಹ ಕುರಿತಂತೆ ವಿಚಾರ ಸಂಕಿರಣ ಹಾಗೂ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಸಿಂಧು ಚಾರಿಟಬಲ್ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಮತ್ತು ನೇತ್ರ ವೈದ್ಯ ಡಾ.ಪಿ.ಆರ್.ಕುಕ್ಕೆ ಸುಬ್ರಹ್ಮಣ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ರಾಮಕೃಷ್ಣನಗರದ ರಮಾ ಗೋವಿಂದ ರಂಗ ಮಂದಿರದಲ್ಲಿ ಸಂಜೆ 6 ರಿಂದ ರಾತ್ರಿ 8.30ರವರೆಗೆ ಕಾರ್ಯಕ್ರಮ ನಡೆಯಲಿದೆ. ಗುಜರಾತಿನ ತಜ್ಞ ವೈದ್ಯ ಜಗದೀಪ್ ಎಂ. ಕಕಾಡಿಯ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗಹಿಸಲಿದ್ದು, ಸ್ಥೂಲಕಾಯ ತಡೆಗಟ್ಟುವ ಕುರಿತು ಮಾತನಾಡಲಿದ್ದಾರೆ ಎಂದರು.

ಸ್ಥೂಲಕಾಯ ಸಮಸ್ಯೆಯು 40 ರೀತಿಯ ಅನಾರೋಗ್ಯ ಸಮಸ್ಯೆಗಳಿಗೆ ಕಾರಣವಾಗಲಿದೆ. ಭಾರತದಲ್ಲಿ 35 ವರ್ಷ ಮೇಲ್ಪಟ್ಟವರಲ್ಲಿ ಶೇ.53ರಷ್ಟು ಮಂದಿ ಸ್ಥೂಲಕಾಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಅಕಾಲಿಕ ಸಾವು ಸಂಭವಿಸುವ ಅನಾರೋಗ್ಯ ಸಮಸ್ಯೆಗಳ ಪೈಕಿ ಇದು ಮೊದಲ ಸ್ಥಾನದಲ್ಲಿದೆ. ವಿಚಾರ ಸಂಕಿರಣಕ್ಕೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ಹೆಚ್ಚಿನ ಮಾಹಿತಿಗೆ ಮೊ: 95388 81047 ಸಂಪರ್ಕಿಸಬಹುದು ಎಂದು ಹೇಳಿದರು. ಸಿಂಧು ಚಾರಿಟಬಲ್ ಟ್ರಸ್ಟ್‌ನ ಸಿಇಓ ನಿರಂಜನ್, ಸದಸ್ಯ ಟಿ.ಎಸ್.ಶಿವಪ್ರಸಾದ್ ಗೋಷ್ಠಿಯಲ್ಲಿದ್ದರು.

ನಾಳೆ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ



ಮೈಸೂರು,ಏ.21 (ಪಿಎಂ)– ನಿನಾದ್ ಮ್ಯೂಸಿಕಲ್ ಟ್ರಸ್ಟ್ ಹಾಗೂ ಫಿಲಂ ಹಿಟ್ಸ್ ಗ್ರೂಪ್ ಜಂಟಿ ಆಶ್ರಯದಲ್ಲಿ ಏ.23ರಂದು ಎ.ಆರ್.ರೆಹಮಾನ್, ಆರ್.ಡಿ.ಬರ್ಮನ್, ಜೆ.ಕೆ.ವೆಂಕಟೇಶ್ ಹಾಗೂ ಬಪ್ಪಿಲಹರಿ ಅವರ ಸಂಗೀತ ನಿರ್ದೇಶನದ ಚಲನಚಿತ್ರ ಗೀತಾ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮ್ಯೂಸಿಕಲ್ ಟ್ರಸ್ಟ್ ಅಧ್ಯಕ್ಷ ಎ.ಎಸ್.ಪ್ರಸನ್ನಕುಮಾರ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕುವೆಂಪುನಗರದ ಗಾನಭಾರತಿಯಲ್ಲಿ (ರಮಾ ಗೋವಿಂದ ಕಲಾ ವೇದಿಕೆ) ಅಂದು ಸಂಜೆ 4.30ಕ್ಕೆ ಕಾರ್ಯಕ್ರಮ ನಡೆಯಲಿದೆ. ಫಿಲಂ ಹಿಟ್ಸ್ ಗ್ರೂಪ್‌ನ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಲೈವ್ ಮ್ಯೂಸಿಕಲ್ ಮೂಲಕ 36 ಗೀತೆಗಳ ಗಾಯನ ಪ್ರಸ್ತುತಪಡಿಸಲಿದ್ದಾರೆ ಎಂದರು. 'ರಿದಮ್ ಬೀಟ್ ಅಂಡ್ ಸೋಲ್' ಶೀರ್ಷಿಕೆಯಡಿ ಕಾರ್ಯಕ್ರಮ ನಡೆಯಲಿದೆ. ಸಾರ್ವಜನಿಕರಿಗೆ ಪ್ರವೇಶ ಉಚಿತವಿದೆ ಎಂದರು. ಹಸ್ಯಾಸಿ ಗಾಯಕರಾದ ಡಾ.ರೇಖಾ, ಮಹೇಶ್ ಕುಮಾರ್, ವಕೀಲ ಚಂದ್ರಶೇಖರ್ ಗೋಷ್ಠಿಯಲ್ಲಿದ್ದರು.

23ಕ್ಕೆ ಶ್ರೀ ಬಸವೇಶ್ವರರ ಜಯಂತಿ; ಸರಳ, ಸಾಂಕೇತಿಕ ಆಚರಣೆ



ಮೈಸೂರು,ಏ.21(ಪಿಎಂ)–ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಏ.23ರಂದು ಶ್ರೀ ಬಸವೇಶ್ವರರ ಜಯಂತಿಯನ್ನು ವಿಧಾನ ಸಭಾ ಚುನಾವಣೆ ಹಿನ್ನೆಲೆಯಲ್ಲಿ ಸರಳ ಮತ್ತು ಸಾಂಕೇತಿಕವಾಗಿ ಆಚರಿಸಲಾಗುತ್ತಿದೆ ಎಂದು ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಟಿ.ಲಿಂಗರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಡಾ.ಶಿವರಾತ್ರಿ ರಾಜೇಂದ್ರ ವೃತ್ತದಲ್ಲಿರುವ (ಗನ್‌ಹೌಸ್ ವೃತ್ತ) ಶ್ರೀ ಬಸವೇಶ್ವರರ ಪ್ರತಿಮೆ ಆವರಣದಲ್ಲಿ ಅಂದು ಬೆಳಗ್ಗೆ 9.30ಕ್ಕೆ ಸರಳವಾಗಿ ಜಯಂತಿ ಆಚರಣೆ ಮಾಡಲಾಗುವುದು. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಸಾನಿಧ್ಯ ಮತ್ತು ವಿವಿಧ ಮಠಾಧೀಶರ ಸಮ್ಮುಖದಲ್ಲಿ ಜಯಂತಿ ನಡೆಯಲಿದೆ. ಸಮುದಾಯದ ಮುಖಂಡರು, ಜಿಲ್ಲಾಡಳಿತದ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಶ್ರೀ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಹಾಗೂ ಪುಷ್ಪ ನಮನ ಸಲ್ಲಿಸಲಾಗುವುದು ಎಂದರು.

ಸುತ್ತೂರು ಶ್ರೀಗಳ ಸಾನಿಧ್ಯದಲ್ಲಿ ಮುಂಬರುವ ಆ.26 ಮತ್ತು 27ರಂದು ಮೈಸೂರಿನ ಕಲಾಮಂದಿರದಲ್ಲಿ ಶ್ರೀ ಬಸವೇಶ್ವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ತೀರ್ಮಾನಿಸಲಾಗಿದೆ. ಈ ಕಾರ್ಯಕ್ರಮದ ರೂಪುರೇಷೆಗಳನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು ಎಂದು ಹೇಳಿದರು. ಸಮುದಾಯದ ಮುಖಂಡರಾದ ಸುರೇಶ್, ದೂರ ಶಿವಕುಮಾರ್, ಬ್ಯಾತಹಳ್ಳಿ ನಾಗರಾಜು, ಶ್ರೀಕಂಠಮೂರ್ತಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ಗಾನ ನಮನ ಗಾಯನ ಕಾರ್ಯಕ್ರಮ ನಾಳೆ



ಮೈಸೂರು,ಏ.21(ಪಿಎಂ)–ಅಮೃತವರ್ಷಿಣಿ ಗಾನವೃಂದದ ವತಿಯಿಂದ ಏ.23ರಂದು ಡಾ.ರಾಜ್‌ಕುಮಾರ್, ವಾಣಿ ಜಯರಾಂ ಹಾಗೂ ಭಗವಾನ್ ಅವರಿಗೆ ಗಾನ ನಮನ ಸಲ್ಲಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಗಾನವೃಂದದ ಅಧ್ಯಕ್ಷ ಅಮೃತೇಶ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಅಂದು ಸಂಜೆ 5ಕ್ಕೆ ಕಾರ್ಯಕ್ರಮ ನಡೆಯಲಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ಕಾರ್ಯಕ್ರಮದಲ್ಲಿ ಕರೋಕೆ ಮಾದರಿಯಲ್ಲಿ ಹಳೆ ಕನ್ನಡ ಚಲನಚಿತ್ರ ಗೀತೆಗಳನ್ನು ಹಾಡಲಾಗುವುದು ಎಂದರು. ಗಾನವೃಂದದ ಬಾಲು ಪ್ರಕಾಶ್, ಕನಕರಾಜು, ಭಾಗ್ಯ ಗೋಷ್ಠಿಯಲ್ಲಿದ್ದರು.

ಬದರಿಪ್ರಸಾದ್‌ಜಿ ಪಿಯು ಕಾಲೇಜಿಗೆ ಶೇ.100 ಫಲಿತಾಂಶ



ಜೋಪಾಲ್ ಕೆ.ಜೋಷಿ



ಭೀಮ್ ರಾಜ್ ಸಿ.ಆರ್.



ಇಂಚರ



ಶಾಂಭವಿ.ವಿ



ಪ್ರಜ್ವಲ್ ಎಂ



ಸ್ಫೂರ್ತಿ ಸಿ.

ಮೈಸೂರು, ಏ.21– 2022–23ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಸಿದ್ಧಾರ್ಥನಗರ ಗೀತಾ ಶಿಶು ಶಿಕ್ಷಣ ಸಂಘದ ಬದರಿಪ್ರಸಾದ್‌ಜೀ ಪದವಿ ಪೂರ್ವ ಕಾಲೇಜು ಅತ್ಯುತ್ತಮ ಫಲಿತಾಂಶವನ್ನು ಪಡೆದಿದೆ. ಒಟ್ಟು 66 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಎಲ್ಲಾ 66 ವಿದ್ಯಾರ್ಥಿಗಳೂ ತೇರ್ಗಡೆಯಾಗಿದ್ದಾರೆ. ಅದರಲ್ಲಿ 18 ಮಂದಿ ಉನ್ನತ ಶ್ರೇಣಿ, 44 ಮಂದಿ ಪ್ರಥಮ ದರ್ಜೆ, 4 ಮಂದಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿರುತ್ತಾರೆ.

ಜೋಪಾಲ್ ಕೆ.ಜೋಷಿ ಎಂಬ ವಿದ್ಯಾರ್ಥಿ ವಿಜ್ಞಾನ ವಿಭಾಗದಲ್ಲಿ 574 ಅಂಕಗಳನ್ನು ಗಳಿಸಿದ್ದು, ಗಣಕ ವಿಜ್ಞಾನ ವಿಷಯದಲ್ಲಿ 100 ಅಂಕಗಳನ್ನು ಗಳಿಸಿ, ಭೀಮ್ ರಾಜ್ ಸಿ.ಆರ್. ವಾಣಿಜ್ಯ ವಿಭಾಗದಲ್ಲಿ 554 ಅಂಕಗಳನ್ನು ಗಳಿಸಿದ್ದಾನೆ.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ





ಮೈಸೂರು,ಏ.21– ಮೈಸೂರಿನ ಸದ್ವಿದ್ಯಾ ಪಿಯು ಕಾಲೇಜು ವಿದ್ಯಾರ್ಥಿ ತರುಣ್.ಬಿ.ಪಿ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 525 ಅಂಕಗಳ ಗಳಿಸುವುದರೊಂದಿಗೆ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಕನ್ನಡ–94, ಇಂಗ್ಲೀಷ್–80, ಭೌತಶಾಸ್ತ್ರ–92, ರಸಾಯನಶಾಸ್ತ್ರ–80, ಗಣಿತ ಶಾಸ್ತ್ರ–90 ಹಾಗೂ ಜೀವಶಾಸ್ತ್ರದಲ್ಲಿ 89 ಅಂಕ ಗಳಿಸಿದ್ದಾರೆ. ಇವರು ಬಂಚಳ್ಳಿಹುಂಡಿಯ ಬಿ.ಬಿ.ಪ್ರಕಾಶ್ ಹಾಗೂ ಅಂಬಿಕಾ ದಂಪತಿ ಪುತ್ರ

ಅತ್ಯುನ್ನತ ಶ್ರೇಣಿ



ಮೈಸೂರು, ಏ. 21– ಮೈಸೂರಿನ ಗುರುಕುಲ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿ ಆರ್. ಯೋಷಿತ ದ್ವಿತೀಯ ಪಿಯು ಪರೀಕ್ಷೆಯಲ್ಲಿ 523 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಈಕೆ ಪಡುವಾರಹಳ್ಳಿ ನಿವಾಸಿಯಾದ ಸಿವಿಲ್ ಗುತ್ತಿಗೆದಾರ ಪಿ.ವಿ. ರವಿಕುಮಾರ್ ಮತ್ತು ಎಲ್. ಚಂದ್ರಕಲಾ ದಂಪತಿ ಪುತ್ರಿ.





ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಿಂಧುವಳ್ಳಿ ಗ್ರಾಮದ ಪರಿಶಿಷ್ಟ ಜಾತಿ ಸಮುದಾಯದ ಮುಖಂಡರುಗಳಾದ ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷರಾದ ವಸಂತ ಕುಮಾರಿ ಪುಟ್ಟಮಲ್ಲಪ್ಪ ಗ್ರಾಪಂ ಸದಸ್ಯ ಮಹೇಶ್, ನಿವೃತ್ತ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪುಟ್ಟಲಿಂಗಯ್ಯ, ಸೀಮಾ ಮಹೇಶ್, ಆಟೋ ಚಂದ್ರ ಶಿವರುದ್ರ ಗೋಪಾಲಕೃಷ್ಣ ಮುದ್ದುಮಾದಪ್ಪ ಪುರುಷೋತ್ತಮ್, ಗಣೇಶ ಅವರು ಶಾಸಕ ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಪಕ್ಷ ಸೇರ್ಪಡೆಗೊಂಡರು. ಬಲಚಿತ್ರದಲ್ಲಿ ಏಳಿಗೆಹುಂಡಿ ಗ್ರಾಮದ ಗ್ರಾಪಂ ಮಾಜಿ ಸದಸ್ಯರಾದ ಮಹದೇವ್, ಪಾಪಯ್ಯ, ನಾಗರಾಜು, ಮಹದೇವು, ಶಿವು, ಮಂಜುನಾಥ್, ಪುಟ್ಟರಾಜು, ಶಿವರಾಜು, ಸಿದ್ದಬೀರೇಗೌಡ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡರು.

ಆಡಳಿತ ವಿರೋಧಿ ಅಲೆ ಬಿಜೆಪಿಗೆ ಮುಳುವಾಗಲಿದೆ

ಮಾಜಿ ಸಚಿವ, ಹಿರಿಯ ಕಾಂಗ್ರೆಸ್ ಮುಖಂಡ ಪ್ರೊ.ಬಿ.ಕೆ.ಚಂದ್ರಶೇಖರ್ 'ಗಂಭೀರ' ಭವಿಷ್ಯ



ಮೈಸೂರು, ಏ.21(ಎಸ್‌ಬಿಡಿ)– ಈ ಬಾರಿ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಗುರಿ ಮುಟ್ಟುವ ಅವಕಾಶಗಳು ಹೆಚ್ಚಾಗಿವೆ ಎಂದು ಪಕ್ಷದ ಹಿರಿಯ ಮುಖಂಡ ಪ್ರೊ.ಬಿ.ಕೆ.ಚಂದ್ರಶೇಖರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಮೂಲ ಸೌಕರ್ಯ ಸೇರಿದಂತೆ ಸಾಕಷ್ಟು ಸಮಸ್ಯೆಗಳಿವೆ. ಅಡುಗೆ ಅನಿಲ ಸಿಲಿಂಡರ್, ಪೆಟ್ರೋಲ್, ಡೀಸೆಲ್ ಇನ್ನಿತರ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನ ಸಂಕಷ್ಟದಲ್ಲಿದ್ದಾರೆ. ಐಟಿ ಕ್ಷೇತ್ರದ ಉದ್ಯೋಗಿಗಳೂ ಕೆಲಸ ಕಳೆದುಕೊಳ್ಳುತ್ತಿದ್ದಾರೆ ಎಂದು ಹೇಳಿದರು.

ಆಡಳಿತದ ಬಗ್ಗೆ ಜನರಲ್ಲಿರುವ ಬೇಸರದ ಜೊತೆಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರನ್ನು ಕಡೆಗಣಿಸಿದ್ದೂ ಬಿಜೆಪಿ ಮೇಲೆ ವ್ಯತಿರಿಕ್ತ ಪರಿಣಾಮವಾಗಲಿದೆ. ಹಾಲಿ ಮುಖ್ಯಮಂತ್ರಿ ಬಸವ ರಾಜ ಬೊಮ್ಮಾಯಿ ಅವರಿಗೆ ಸರ್ಕಾರದ ಮೇಲೆ ಹಿಡಿತ ವಿಲ್ಲ. ಸರ್ಕಾರ ನಡೆಸುವ ಪೂರ್ಣ ಅಧಿಕಾರವನ್ನೂ ಅವರಿಗೆ ನೀಡಿಲ್ಲ. ಇದೆಲ್ಲದರಿಂದ ಬಿಜೆಪಿಯತ್ತ ಜನ ಒಲವು ತೋರುತ್ತಿಲ್ಲ ಎಂಬ ಆತಂಕವಿರುವುದರಿಂದಲೇ ಪ್ರಧಾನಿ ಮೋದಿ, ಕೇಂದ್ರ ಸಚಿವ ಅಮಿತ್ ಶಾ ಪದೇ ಪದೆ ಕರ್ನಾಟಕಕ್ಕೆ ಬರುತ್ತಿದ್ದಾರೆ. ಎರಡು ತಿಂಗಳಲ್ಲಿ ಪ್ರಧಾನಿ ಮೋದಿ 9 ಬಾರಿ ಬಂದು ಹೋಗಿರುವುದು ಅವರಲ್ಲಿರುವ ಆತಂಕಕ್ಕೆ ಸಾಕ್ಷಿ ಕಾಂಗ್ರೆಸ್‌ನತ್ತ ಜನ ಒಲವು ತೋರುತ್ತಿರುವುದು ಸಮೀಕ್ಷೆಯಲ್ಲಿ ತಿಳಿದುಬಂದಿದ್ದು, ಈ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪುಲ್ವಾಮಾದಲ್ಲಿ ನಡೆದ ದಾಳಿಗೆ ಕೇಂದ್ರ ಗೃಹ ಸಚಿವಾಲಯದ ಅದಕ್ಷತೆಯೇ ಕಾರಣ. ಯೋಧರ ಪ್ರಯಾಣಕ್ಕೆ ವಿಮಾನವನ್ನು ಒದಗಿಸಿರಲಿಲ್ಲ. ಇದು ಸರ್ಕಾರದ ಲೋಪವಲ್ಲದೆ ಮತ್ತೇನಲ್ಲ. ಈ ವಿಚಾರವಾಗಿ ಏನನ್ನೂ ಮಾತನಾಡಬೇಡಿ ಎಂದು ಪ್ರಧಾನಿ ಸೂಚಿಸಿದ್ದಾಗಿ ಜಮ್ಮು–ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಹೇಳಿಕೆ ನೀಡಿದ್ದರು. ಈ ಪ್ರಕರಣದ ನೈತಿಕ ಹೊಣೆ ಹೊತ್ತು ಪ್ರಧಾನಿ ಮೋದಿ ರಾಜೀನಾಮೆ ನೀಡಬೇಕಿತ್ತು. ಬಾಯಿ ಮಾತಿಗಷ್ಟೇ ಪ್ರಜಾಪ್ರಭುತ್ವದ ತಾಯಿ ಭಾರತ ಎನ್ನದೆ, ಅದನ್ನು ಸಾಬೀತುಪಡಿಸಬೇಕಿತ್ತು ಯಾವುದೇ ಕಾರಣಕ್ಕೂ ಸತ್ಯ ಮರೆಮಾಚಿ, ಸುಳ್ಳು ಹೇಳುವ ಮೂಲಕ ಯಾವಾಗಲೂ ಜನರಿಗೆ ಮೋಸ ಮಾಡಲು ಸಾಧ್ಯವಿಲ್ಲ ಎಂದರು.

ಕಾಂಗ್ರೆಸ್ ವಕ್ತಾರ ಕೆ.ವೆಂಕಟೇಶ್ ಇನ್ನಿತರರು ಸುದ್ದಿಗೋಷ್ಠಿಯಲ್ಲಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

HOUSE FOR LEASE
ONLY VEG
1) 2BHK, G/F, R.K.NAGAR I BLOCK
2) 2BHK IInd Floor Near Ashoka Road
8197316666
9980097311

2ND PUC SUPPLEMENTARY EXAM
Physics, Chemistry, Maths, Biology, Accountancy, Business Studies, Basic Maths, Economics, Statistics, Computer Science, Geography, History, Pol Science, Kannada English, Near City Bustand/K.Nagar
9535161811,9448601454

ಮನೆ ಬಾಡಿಗೆಗೆ ಇದೆ
40x40 ಕಾರ್ನರ್ ಸೈಟಿನಲ್ಲಿ ಹೊಸದಾಗಿ ಕಟ್ಟಿರುವ ಮನೆ (ಉತ್ತರ ಮತ್ತು ಪೂರ್ವ ದಿಕ್ಕಿನ ರಸ್ತೆ), ಅಗತ್ಯ ಸೌಲಭ್ಯಗಳೊಂದಿಗೆ ಪಾರ್ಕಿಂಗ್ ಸ್ಥಳ ಹೊಂದಿದ್ದು, ಹಿನಕಲ್ ರಿಂಗ್ ರೋಡ್ ಹತ್ತಿರ, ಹಿನಕಲ್ ಫ್ಲೈಓವರ್ ಕೆಳಗೆ ಇರುವ ಮನೆ ಬಾಡಿಗೆಗೆ ಇದೆ. ಉದ್ಯೋಗಸ್ಥ ಕುಟುಂಬಕ್ಕೆ ಆದ್ಯತೆ. ಬ್ರೋಕರ್ಸ್ ಕ್ಷಮಿಸಿ. ಸಂಪರ್ಕಿಸಿ:
Mob: 9741534036

ಮನೆ ಭೋಗ್ಯಕ್ಕಿದೆ
2BHK ಉತ್ತರ ದಿಕ್ಕು ಮೊದಲನೇ ಮಹಡಿ 24x7 ನೀರು ಸೌಲಭ್ಯ ಸೋಲಾರ್ ಮತ್ತು ಗೀಸರ್ ಸೌಲಭ್ಯ ಇರುವ ಮನೆ ಅಗ್ರಹಾರ, ಕೆ.ಆರ್.ಮೊಹಲ್ಲಾ, ಮೈಸೂರು
9945615679
9916019102

ಕೆಲಸಕ್ಕೆ ಬೇಕಾಗಿದ್ದಾರೆ
ಚಿಕನ್ ಅಂಗಡಿಯಲ್ಲಿ ಕೆಲಸ ಮಾಡಿ ಅನುಭವ ಇರುವ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ
ಸ್ಥಳ: ಮೆಲ್ಲಹಳ್ಳಿ, ಮೈಸೂರು
7406992205

ತಕ್ಷಣ ಬೇಕಾಗಿದ್ದಾರೆ
ಟಿ.ನರಸೀಪುರ ತಾ॥ ಮೇಗಳಾಪುರ ಹತ್ತಿರವಿರುವ S.R.Industrial Water Factoryಯಲ್ಲಿ ಕಾರ್ಯನಿರ್ವಹಿಸಲು ಆಪರೇಟರ್‌ಗಳು ಮತ್ತು ಲೋಡಿಂಗ್ ಅನ್ ಲೋಡಿಂಗ್ ಆಟೋ ಬ್ಲೋಯಿಂಗ್ ಫಿಲ್ಲಿಂಗ್, ಲೇಬಲಿಂಗ್, ಸಿಂಕ್ ಸ್ಟಾರ್ಕಿಂಗ್ & ಲೇಬರ್ ಬೇಕಾಗಿದ್ದಾರೆ.
9900134961
9972729997

ಬೇಕಾಗಿದ್ದಾರೆ
ಪ್ರತಿಷ್ಠಿತ ಪಾನ್‌ಮಸಾಲಾ ಕಂಪನಿಯಲ್ಲಿ ಮಾರಾಟ ಮಾಡಲು ಹುಡುಗರು ಬೇಕಾಗಿದ್ದಾರೆ. ಉತ್ತಮ ಸಂಬಳ ಹಾಗೂ ಕಮಿಷನ್ ನೀಡಲಾಗುವುದು.
9986462204
9483256909

WANTED
Female Candidate to manage Office Accounts and In-House Office Works English (Manageable) and Hindi Speaking Skills along with Kannada & Compulsory Prefeably Hebbal & Vijayanagar Resident : Salary 10-12K
9731305656

ಪ್ರಾಣಾಯಾಮ ಮತ್ತು ಧ್ಯಾನ ಶಿಬಿರ
Mysore Wellness Yoga Center
ಲವಕುಶ ಪಾರ್ಕ್ ಎದುರು, ಕುವೆಂಪುನಗರ, ಮೈಸೂರು
8710920200, 8197758253

30X40 HOUSE FOR RENT
East Face, Vastu, Built with Two wardrobe rooms, Granite, Kitchen, Pooja Room, Showcase, Geyser, Solar, Place for Car & Two Wheeler, Commode. Teakwood doors, Rs. 13000/- PM Negotiable No Brokers
6361760880
D.N. 7, Lakshmikantha Nagar, Hebbal, Behind Ganesha Temple, Mysore

ಸುವರ್ಣಾವಕಾಶ
ಪ್ರಯೋಜನಗಳು
ಮನೆ/ಕಛೇರಿಯಿಂದಲೇ ಕೆಲಸ ನಿಮ್ಮ ಸಮಯಕ್ಕೆ ತಕ್ಕಂತೆ ಕೆಲಸ ಪಿಎಫ್ ಹಾಗೂ ವೈದ್ಯಕೀಯ ಲಭ್ಯವಿರುತ್ತದೆ. ವಿದೇಶ ಪ್ರಯಾಣಕ್ಕೆ ಅವಕಾಶವಿದೆ 25 ವರ್ಷ ಮೇಲ್ಪಟ್ಟಿರಬೇಕು ಹಾಗೂ ಎಸ್‌ಎಸ್‌ಎಲ್‌ಸಿ ಪಾಸಾಗಿರಬೇಕು.
9449152797,8660764095

FOR RENT
Commercial space for rent in prime location (Tk layout, SJCE MAIN ROAD) Ground floor and First floor
8892833516

ಶ್ರೀ ರಂಗನಾಥ ಕೃಪ
C.S.K. TOURS
ಎರ್ಟಿಗಾ ಕಾರ್ ಬಾಡಿಗೆಗೆ ಲಭ್ಯವಿದೆ
9019399311
8660889834

ಬೇಕಾಗಿದ್ದಾರೆ
ಗೂಡ್ ವೆಹಿಕಲ್ ಡ್ರೈವರ್ & ಹೆಲ್ಪರ್ ಬೇಕಾಗಿದ್ದಾರೆ
ಸಂಬಳ: 12000–15000
ಉಚಿತ ವಸತಿ ಸೌಕರ್ಯವಿದೆ
9342118153

HOUSE FOR RENT
2 BHK, Address - MIG 25, New Kantharaj Urs road, Kuvempunagar, Mysore Landmark - Near Akshaya Bhandar
9448553775
8123750157

WANTED
Teaching Staff
For reputed institution (Experience Preferred) for all subjects. Transport facilities available. Drop your resume through WhatsApp
8971577685, 9980631121

ಸೈಟ್ಸ್ @ ಮೈಸೂರು
ಟಿ.ನರಸೀಪುರ ರಿಂಗ್ ರೋಡ್‌ನಿಂದ ಸುಮಾರು 1.5 KMS
MUDA APPROVED
ಸುತ್ತಮುತ್ತ ಮೂಡಾ ಲೇಔಟ್‌ಗಳಿವೆ
GSS 89512-76688

ರೂಂಬಾಯ್ಸ್ ಬೇಕಾಗಿದ್ದಾರೆ
: ಸಂಪರ್ಕಿಸಿ :
ಶ್ರೀ ಗಣೇಶ್ ಪ್ರಸಾದ್ ಲಾಡ್ಜ್
1096, ರಾಜಕಮಲ್ ಟಾಕೀಸ್ ಎದುರು, ಶಿವರಾಂಪೇಟೆ, ಮೈಸೂರು
Ph.: 9986756866

ಸೈಟ್ಸ್ @ ಮೈಸೂರು
ಇಲವಾಲ ಬಸ್ ಸ್ಟ್ಯಾಂಡ್ ಹತ್ತಿರ
DTCP APPROVED
ಹೂಡಿಕೆಗೆ / ಮನೆ ಕಟ್ಟಲು ಸೂಕ್ತವಾದ ಸ್ಥಳ
ಮುಂಬರಲಿರುವ ಮೈಸೂರು ಕುಶಾಲ್ ನಗರ ರಾಷ್ಟ್ರೀಯ ಹೆದ್ದಾರಿಯ ಹತ್ತಿರ
GSS 89512-76688

ಬೇಕಾಗಿದ್ದಾರೆ
ಶಾಲಾ ರಜಾವಧಿ ಮತ್ತು ಪೂರ್ಣಾವಧಿಯಲ್ಲಿ ಕಂಪೆನಿ ಕೆಲಸಕ್ಕೆ ಕೂಡಲೇ ಬೇಕಾಗಿದ್ದಾರೆ.
ಸ್ಥಳ: ಸುಳ್ಯ (ದ.ಕ.)
ವೇತನ: 12000–22000
ಸೌಲಭ್ಯ: ಊಟ, ವಸತಿ ಉಚಿತ
8494860650

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ನಿವೇಶನ ಮಾರಾಟಕ್ಕಿದೆ
ಕೆ.ಆರ್.ನಗರದ ಹುಣಸೂರು ರಸ್ತೆಯಲ್ಲಿರುವ ಚೌಡೇಶ್ವರಿ ಬಡಾವಣೆಯಲ್ಲಿ 30x40 ಅಡಿಗಳ ಅಳತೆಯಲ್ಲಿರುವ (ನಿವೇಶನ ಸಂ.190) ಸುಸಜ್ಜಿತ ನಿವೇಶನ ಮಾರಾಟಕ್ಕಿದೆ ಆಸಕ್ತರು ನೇರವಾಗಿ ಸಂಪರ್ಕಿಸಿ
9986826137
7019111162

ಬೇಕಾಗಿದ್ದಾರೆ
ಹೆಬ್ಬಾಳು ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ ಹುಡುಗಿಯರು ಬೇಕಾಗಿದ್ದಾರೆ.
SSLC to PUC
Diploma Mechanical
ಊಟ ವಸತಿ ESI + PF
ಸೌಲಭ್ಯವಿರುತ್ತದೆ ಸಂಬಳ 11400 ರಿಂದ 18000 ಇರುತ್ತದೆ.
8951869646,9008819487

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ ಮತ್ತು ಗಂಗೋತ್ರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ :
ಸಂಬಳ: 16500 + W/O (8Hrs)
15500 + W/O (26 Days)
9620667819, 9880727819

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

CHANGE OF NAME
I, Manjunath Ranganayaka, residing at # 994/B, Verkatadri, Bogadi North, 2nd Stage, Mysuru-570026, Karnataka have changed my name from Manjunath Ranganayak to Manjunath Ranganayaka on my own free will before Nctary Geetha.R on 20/4/2023. In future in all records, deeds dealings and transactions as well as all occasions whatsoever, I use & sign in the name of Manjunath Ranganayaka
Sd/- Manjunath Ranganayaka

WANTED
URGENT REQUIREMENT
ITI Fitter & Mechanical, Diploma - Mechanical & Electrical Male Candidate Only. Immediately
Contact:
RMS ENTERPRISES
9986719855

Join ASFT
Fashion Design Courses
* Certification Course
* Diploma Course
* Advance Diploma Course

Alpha School of Fashion Technology & Interior Design
AT: SRIRAMPURA, GOKULAM, UDAYAGIRI, MYSORE
Mob: 7829937469, 9901803394

DTCP SITES FOR SALE
DTCP Sites
Rs.699/- per Sqft.
Near Jayapura H.D.Kote Road, Mysore
9620591666

ಬೇಕಾಗಿದ್ದಾರೆ
18ವರ್ಷ ಮೇಲ್ಪಟ್ಟ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕೆ ಅನುಭವ ಇರುವ / ಇಲ್ಲದಿರುವವರಿಗೆ ನಮ್ಮ ಸಂಸ್ಥೆಯಲ್ಲಿ ಟ್ರೈನಿಂಗ್ ಕೊಡಲಾಗುವುದು ಊಟ ವಸತಿಯೊಂದಿಗೆ ಆಕರ್ಷಕ ಸಂಬಳ ಕೊಡಲಾಗುವುದು
7483960098

(30X40) SALE
@ "OLIVE ENCLAVE"
Mys - B'Lore High Way 3km from Columbia Hospital.
28 Lakhs
9538839926

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

JOBNET
ಮೊಬೈಲ್‌ನಲ್ಲಿ ಕೆಲಸ ಮನೆಯಲ್ಲಿ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ.
9731891409

ನಿವೃತ್ತ ನೌಕರರಿಗೆ ಉದ್ಯೋಗಾವಕಾಶದ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ Benefits: (1) Fixed Salary, PF + ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು: 1) ಫೋಟೋ, (2) ಪಾನ್ ಕಾರ್ಡ್, (3) ಆಧಾರ್ ಕಾರ್ಡ್, (4) ಬ್ಯಾಂಕ್ ಪಾಸ್ ಪುಸ್ತಕ. ಸ್ಥಳ, ದಿನಾಂಕ ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
Mob: 7795039992

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
17–5–23: ಕಾಶಿ, ಗಯಾ, ಬುದ್ಧಗಯಾ, ಪ್ರಯಾಗ್ ರಾಜ್, ಅಯೋಧ್ಯ. 8–6–23: ಚಾರ್‌ಧಾಮ್ ಯಾತ್ರ, ಕೇದಾರ್‌ನಾಥ್, ಬದ್ರಿನಾಥ್, ಗಂಗೋತ್ರಿ, ಯಮುನೋತ್ರಿ, 4–5–23: ಗುರುವಾಯೂರು, ಕೊಚ್ಚಿನ್, ಅಲೆಪ್ಪಿ, 4–5–23: ರಾಮೇಶ್ವರಂ, ಕನ್ಯಾಕುಮಾರಿ, ಮಧುರೈ, 29–5–23: ದೆಹಲಿ, ವೈಷ್ಣೋದೇವಿ, ಜಮ್ಮು, ಕಾಶ್ಮೀರ್. 4–5–23: ಶಿರಡಿ 3 ಜ್ಯೋತಿರ್ಲಿಂಗ ದರ್ಶನ.
9591017782, 9964527782

GODOWN FOR RENT
Two shops Each 15+26 Ground Floor Dattagalli 3rd Stage Kanakadasanagar
9449349943

For Sale
1) 30x40 15 lakhs sites in H D Kote Road, 2) 40x60 52 L sites Near Srirampura Ring Road 3) 40x60 site New RT Nagar 4)30x40 N G+2 House Srirampura
95386 90359
90359 90359

AFFIDAVIT
I, Nisha V Mani, residing at Door No. 108/A, 15th Cross, 4th Main, Gokulam 2nd Stage, Mysore-570 002, have changed my name as Nisha George after my marriage with George Suprith Kuttkattil Ukru on my own free will, in front of Notary R. Godavari on 1-4-2023.
Sd/- Nisha George

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ.
(ಕೊರಿಯರ್ ಸೌಲಭ್ಯವಿದೆ)
8749098879



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

CHANGE OF NAME
I, Vijesh, S/o. Kendaraju, aged 48 years, residing at 1st Pakshirajapura Village, Nellurpalla Post, Hanagodu Hobli, Hunsur taluk, Mysore Dist.,-571114, Karnataka have changed my name from Vijesh to Vijesh Kendaraju on my own free will before Notary H. Dinesh on 19/4/2023. In future in all records, deeds dealings and transactions as well as all occasions whatsoever, I use & sign in the name of Vijesh Kendaraju
Sd/- Vijesh Kendaraju

CHANGE OF NAME
I, Prabha, W/o. Vijesh, aged 47 years, residing at 1st Pakshirajapura Village, Nellurpalla Post, Hanagodu Hobli, Hunsur taluk, Mysore Dist.,-571114, Karnataka have changed my name from Prabha to Prabha Vijesh on my own free will before Notary H. Dinesh on 19/4/2023. In future in all records, deeds dealings and transactions as well as all occasions whatsoever, I use & sign in the name of Prabha Vijesh.
Sd/- Prabha Vijesh

ವಾರಾಂತ್ಯದ ಪ್ರವಾಸ
ದಿನಾಂಕ: 20 & 21 ಮೇ ತಿಂಗಳು 2023
ಹಾಲು ರಾಮೇಶ್ವರ 112 ಅಡಿ ಶಿವ (ಈಶ ಫೌಂಡೇಶನ್) ಚಿಕ್ಕಬಳ್ಳಾಪುರ ಗವಿ ಗಂಗಾಧರೇಶ್ವರ ದೇವಾಲಯ ರೆಸಾರ್ಟ್‌ನಲ್ಲಿ ಒಂದು ದಿನ ಸ್ಟೇ ಸ್ವಿಮ್ಮಿಂಗ್ ಪೂಲ್ ಬರ್ಮಾ ಬ್ರಿಡ್ಜ್ 650 ಮೀಟರ್ಸ್ ಝಿಪ್ ಲೈನ್ ಇನ್ನೂ ಮುಂತಾದ ಆಟಗಳು ಇರುತ್ತವೆ. 1) ಟೆಂಟ್‌ನಲ್ಲಿ ಸ್ಟೇ, ಊಟ ತಿಂಡಿ ಕಾಫಿ ಎಲ್ಲಾ ಸೇರಿರುತ್ತದೆ
ಎಲ್ಲಾ ಸೇರಿ ಒಬ್ಬರಿಗೆ 3500 ರೂಪಾಯಿಗಳು
7022271023

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಂಟಿಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ /ಫೇಲ್ ಆದ ಯುವಕ/ ಯುವತಿಯರು ಇಂದೇ ಬೇಕಾಗಿದ್ದಾರೆ. ESI +PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ / ಓಟಿ, 15200-86000
9740733021, 9535028750

Boys & Girls
ಅಗ್ರಹಾರ ಹತ್ತಿರ Door Showroom ನಲ್ಲಿ ಕೆಲಸ ಮಾಡಲು Sales Boys & Girls ಬೇಕಾಗಿದ್ದಾರೆ.
Mob: 9886640503

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಮನೆ ಮಾರಾಟಕ್ಕಿದೆ / ಸೈಟು ಬೇಕಾಗಿದೆ
ಅಳತೆ 11x40 ರಲ್ಲಿ ಆಲ್ಟ್ರೇಶನ್ ಆಗಿರುವ ಪಶ್ಚಿಮ ದಿಕ್ಕಿನ ಶೀಟಿನ ಮನೆ ನಂ. 558, ಸುಬ್ರಮಣ್ಯ ದೇವಸ್ಥಾನದ ರಸ್ತೆ, ಬನ್ನಿಮಂಟಪ ಹುಡ್ಕೋದಲ್ಲಿ ಮಾರಾಟಕ್ಕಿದೆ ಹಾಗೂ ದೇವನೂರು, ಸಾತಗಳ್ಳಿ, ಡಿ.ಟಿ.ಎಸ್. ರಾವ್ ನಗರದಲ್ಲಿ ಎಲ್ಲಾ ಅಳತೆಯ ಸೈಟು ಬೇಕಾಗಿದೆ. ಸಂಪರ್ಕಿಸಿ: ಶಿವಪ್ಪ
Mob: 9141050266

S.K. CONSTRUCTION
ಹೊಸ ಮನೆ ಕಟ್ಟಬೇಕೆ, ಚಿಂತೆ ಬೇಡ Engineering Plan ವಾಸ್ತುಪ್ರಕಾರ, 3D Elevation ಸಹಿತ ನಿಮ್ಮ ಕೈಗೆ ಎಟುಕುವ ಬೆಲೆಯಲ್ಲಿ ಉತ್ತಮ ಗುಣಮಟ್ಟದಲ್ಲಿ Construction ಮಾಡಿಕೊಡುತ್ತೇವೆ.
Mob: 9620528490

Flat ಅಥವಾ ಮನೆ ಬಾಡಿಗೆಗೆ ಬೇಕಾಗಿದೆ
Mysore Cityಗೆ ಸಮೀಪದಲ್ಲಿ ಪಶ್ಚಿಮ ದಿಕ್ಕಿಗೆ ಬಾಗಿಲಿರುವ ಮನೆ ಅಥವಾ Flat ಬಾಡಿಗೆಗೆ ಬೇಕಾಗಿದೆ.
Mob: 9740273343

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
#2921/ಎ, ಸರಸ್ವತಿಪುರಂ, ಮೈಸೂರು
11B ಮತ್ತು 9 & 11A ಖಾತಾಗಳಿಗೂ ಮುಡಾ & ಕಾರ್ಪೋರೇಷನ್ ಖಾತೆ ಇದ್ದರು, ಇಲ್ಲದಿದ್ದರೂ ಹಾಗೂ 15,000 ಮೇಲ್ಪಟ್ಟ ಸಂಬಳ ಇರುವವರಿಗೆ ಪರ್ಸನಲ್ ಲೋನ್ ಹಾಗೂ ಇಂಡಸ್ಟ್ರಿಯಲ್ ಮಾರ್ಟ್‌ಗೇಜ್ ಲೋನ್ ಸೌಲಭ್ಯ ದೊರೆಯುತ್ತದೆ.
8088647887

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ಆದಿ ಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ
B.A, B.Sc, B.Com, MA, M.Com, M.Sc, MBA, MBBS, BE, M.Tech, B.Ed., D.Ed, M.Ed
ವಿವಾಹ ನೋಂದಣಿಗೆ ಕರೆ ಮಾಡಿ
(2nd Marriage Also)
9164743059

FULL TIME JOBS
For Womens
MNC is Looking for Female Graduates/ Diploma
Age : 29-45 Years
Salary 180,000/ Per Annum +PF+ESI+Incentives
9880498509

WANTED SITE / HOUSE
20X30 ಅಳತೆಯ ಪೂರ್ವ/ಉತ್ತರ ದಿಕ್ಕಿನ ಖಾಲಿ ನಿವೇಶನ ಹಳೆಯ ಮನೆ ಖರೀದಿಗೆ ಬೇಕಾಗಿದೆ. ಶ್ರೀರಾಂಪುರ, ರಾಮಕೃಷ್ಣ ನಗರ ಜೆಪಿ ನಗರಗಳಲ್ಲಿ ಬೇಕಾಗಿದೆ.
9945248948
Brokers Execuse

WANTED
Accountant,
Tele Callers,
Event Managers,
Anchors,
Marketing Managers,
Pigmy Collection Boy :
8050052444

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧುವವರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ
ಡಾ. ಗುರೂಜಿ
7899625268
9448229184

ಬೇಕಾಗಿದ್ದಾರೆ
Helpers ಕೆಲಸ ನಿರ್ವಹಿಸಲು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಹಾಗೂ ಕೆಮಿಕಲ್ ಫ್ಯಾಕ್ಟರಿಯಲ್ಲಿ ವಿದ್ಯಾರ್ಹತೆ 7th to 10th ವಯಸ್ಸು 18 ರಿಂದ 40 ರೊಳಗೆ, ಪುರುಷರು ಮಾತ್ರ, ಒಳ್ಳೆಯ ವೇತನ ಹಾಗೂ ಇ.ಎಸ್.ಐ., ಪಿಎಫ್ ಸೌಲಭ್ಯವಿರುತ್ತದೆ.
6361201110, 9731976148

ಬೇಕಾಗಿದ್ದಾರೆ
ಮೈಸೂರು, ಕೊಡಗು, ಮಂಗಳೂರು ಮಾರ್ಗಗಳಲ್ಲಿ ಸಂಚರಿಸುವ ಲಾರಿಗಳಲ್ಲಿ ಪಾರ್ಸಲ್ ವಿತರಿಸಲು ದೃಢಕಾಯ ಯುವಕರು, ಡ್ರೈವರ್ ಬೇಕಾಗಿದ್ದಾರೆ. ಫುಲ್ ಟೈಮ್–ಪಾರ್ಟ್ ಟೈಮ್ ಕೆಲಸಕ್ಕೆ ಪಿಯುಸಿ, ಎಸ್‌ಎಸ್‌ಎಲ್‌ಸಿ ಓದಿರುವ ಯುವಕರು ಬೇಕಾಗಿದ್ದಾರೆ. 1) ಡೆಲಿವರಿ ಬಾಯ್ 11,000 2)ಹೆವಿ ಡ್ರೈವರ್ 18,000 3) ಟೆಂಪೋ ಡ್ರೈವರ್ 16,000
9740408488

HOUSE FOR RENT
Only for Girls / Ladies 1BHK First Floor Semi Furnished House Near Hootagalli Water Tank,
Adv : 20,000 Rent 7,000
8310008208
9379888558

ಕೆಲಸಕ್ಕೆ ಬೇಕಾಗಿದ್ದಾರೆ
CSC ಸೆಂಟರ್‌ಗೆ ಕಂಪ್ಯೂಟರ್ ತಿಳಿದವರು ಕೆಲಸಕ್ಕೆ ಬೇಕಾಗಿದ್ದಾರೆ.
ಸ್ಥಳ: ವಿದ್ಯಾರಣ್ಯಪುರಂ
ಸಂಬಳ: 10,000/–
9663369171

WANTED
St. Mira's Inclusive Convent, Sujjlur Wanted experienced HM, Trs(all subjects & languages), clerk & part time Art, Music & Dance faculties; Marketing manager. Applicants should be proficient in English and Computer.
9900118453
Send resume to smic.af.13@ gmail.com/ kalash03@gmail.com

ಸೈಟ್ ಮಾರಾಟಕ್ಕಿದೆ
30x40 ಹೊಸ ಆರ್.ಟಿ.ನಗರ ಹತ್ತಿರ E/F
20x30 BEML ಲೇಔಟ್ ದಟ್ಟಗಳ್ಳಿ ಹತ್ತಿರ W/F
9740088990

ಮನೆಯಿಂದಲೇ ಕೆಲಸ
Work From Home
ಪೆನ್ಸಿಲ್ ಪ್ಯಾಕಿಂಗ್, ಫಿಶ್‌ಫುಡ್, ಪ್ಯಾಕಿಂಗ್, ಡೇಟಾ ಎಂಟ್ರಿ, ಸ್ಟೋರಿ ರೈಟಿಂಗ್ ಹಾಗೂ ಫಾರಂ ಫಿಲ್ಲಿಂಗ್ ವಾಟ್ಸಪ್ ಟೈಪಿಂಗ್ ಕೆಲಸಗಳು. ಗಳಿಸಿ ವಾರಕ್ಕೆ 8000/– ರಿಂದ 19000/–
6361046802
ರೀಗಲ್ ಮ್ಯಾನೇಜ್‌ಮೆಂಟ್ (ರಿ.)

SITE FOR SALE
30x40
East Facing SITE at Somnathanagara, Very Close to Adithya Circle, (Brokers Excuse)
6366853355

NEW DUPLEX HOUSE FOR SALE
20x30 North Door # 16, SRS Prakruthi Layout H.D.Kote Main Road, Srirampura, Mysore
8660062078

ಬೇಕಾಗಿದ್ದಾರೆ
ಮೈಸೂರಿನ ಕಡಕೊಳ ಇಂಡಸ್ಟ್ರಿಯಲ್ ಏರಿಯಾದಲ್ಲಿ ನೂತನವಾಗಿ ಪ್ರಾರಂಭವಾಗಿರುವಂತ ಸೋಲಾರ್ ಕಂಪನಿಗೆ ವಿವಿಧ ಹುದ್ದೆಗಳಿಗಾಗಿ Digital Marketing, Accountant, Marketing Manager, Sales Executives, Welders, Drivers Electrician, Security Guards ಬೇಕಾಗಿದ್ದಾರೆ. ಆಕರ್ಷಕ ವೇತನ ದೊರೆಯುತ್ತದೆ ಸಂಪರ್ಕಿಸಿ.
ಸ್ಥಳ: Essar Products Pvt Ltd.
19/A, Kadakola Industrial Area Mysore
9964832118, 9980917976

HOUSE FOR RENT
IIIrd Floor 2 BHK Raman Residency Opp. Nalapak Hotel V.V. Mohalla, Mysore
9483186145
9606429417

WANTED IMMIDIATELY
Sales Executive No. of Posts 2 No.
Male -2 to 3 Years Exp in Sales Background
8152027860
8867788722

ಬೇಕಾಗಿದ್ದಾರೆ
ಡೆಲಿವರಿ ಬಾಯ್ಸ್
147, 1ನೇ ಮಹಡಿ 2ನೇ ಮೇನ್, 2ನೇ ಹಂತ, ಗೋಕುಲಂ, ಮೈಸೂರು–570017
9480379989

SITE FOR SALE
30X46 West Facing Near J.S.S Layout 2nd Stage, 150 Mtr From T.N.Pura Road
9686935355
(Brokers Excuse)

ಬೇಕಾಗಿದ್ದಾರೆ
Ladies P.G ಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಕಡ್ಡಾಯವಾಗಿ P.G ಯಲ್ಲಿಯೇ ಉಳಿದುಕೊಳ್ಳಬೇಕು. ಊಟ, ವಸತಿ, ಸಂಬಳ ದೊರೆಯುತ್ತದೆ (ಅಡುಗೆ ಹೆಲ್ಪರ್)
9972567537
9035004605

ಮನೆ ಮಾರಾಟಕ್ಕಿದೆ
30x40, 2BHK E/F ಶ್ರೀನಗರ ಬಡಾವಣೆ ಮೈಸೂರು
8420819603
6363270474

ಬೇಕಾಗಿದ್ದಾರೆ
ಬ್ರಾಹ್ಮಣ ಮಹಿಳಾ ಅಡುಗೆ ಕೆಲಸಗಾರರು ಬೇಕಾಗಿದ್ದಾರೆ.
ಜಯಲಕ್ಷ್ಮಿಪುರಂ
9110467744

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ನೈಟ್ ಶಿಫ್ಟ್‌ಗೆ ಹುಡುಗರು ಬೇಕಾಗಿದ್ದಾರೆ
ಸಂಬಳ: 12,000/–
7899754149

ಬೇಕಾಗಿದ್ದಾರೆ
ಮೈಸೂರಿನ ಮುಖ್ಯ ಭಾಗದಲ್ಲಿರುವ ರೆಸ್ಟೋರೆಂಟ್ (ನಾನ್‌ವೆಜ್)ಗೆ ಅಡುಗೆ ಭಟ್ಟರು, ವೈಟರ್ ಕ್ಲೀನರ್ ಮತ್ತು ಕ್ಯಾಷಿಯರ್ ಬೇಕಾಗಿದ್ದಾರೆ.
9900879534
9353871107

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ನನ್ನ ತಂದೆ ಆಸೆ ಈಡೇರಿಸಲು ಈ ಬಾರಿ ಆಶೀರ್ವದಿಸಿ

ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ಮನವಿ



ನಂಜನಗೂಡು, ಏ.21– ನನ್ನ ತಂದೆ ಆರ್. ಧ್ರುವನಾರಾಯಣ್ ನಂಜನಗೂಡನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿ ರಾಜ್ಯದಲ್ಲೇ ಮಾದರಿ ಕ್ಷೇತ್ರವನ್ನಾಗಿಸುವ ಕನಸು ಹೊಂದಿದ್ದರು. ಅವರ ಆಸೆ ಈಡೇರಿಸಲು ಚುನಾವಣೆಯಲ್ಲಿ ಭಾರೀ ಅಂತರದಿಂದ ನನ್ನನ್ನು ಗೆಲ್ಲಿಸುವಂತೆ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಮನವಿ ಮಾಡಿದರು.

ತಾಲೂಕಿನ ಬಸವಟ್ಟಿಗೆ, ಮಲ್ಲಹಳ್ಳಿ, ಭುಜಂಗಯ್ಯನಹುಂಡಿ, ಹೆಮ್ಮರಗಾಲ, ಕೂಡ್ಲಾಪುರ, ಬಾಗೂರು, ಸಿಂಧುವಳ್ಳಿ ಗ್ರಾಮಗಳಲ್ಲಿ ಪ್ರಚಾರ ನಡೆಸಿ ಮಾತನಾಡಿದ ಅವರು, ನನ್ನ ತಂದೆ ಧ್ರುವನಾರಾಯಣ್ ಅವರಿಗೆ 2 ಬಾರಿ ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಮತ ನೀಡಿ ಆಶೀರ್ವದಿಸಿದ್ದೀರಿ. ಅವರು ಸಹ ಕ್ಷೇತ್ರದ ಅಭಿವೃದ್ಧಿಗಾಗಿ ಸಾಕಷ್ಟು ಶ್ರಮಿಸಿದ್ದಾರೆ. 2019ರ ಲೋಕಸಭಾ ಚುನಾವಣೆ ಸೋಲಿನ ನಂತರ ನಂಜನಗೂಡಿನ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದ ಅವರು ಈ ಬಾರಿ ಕ್ಷೇತ್ರದಲ್ಲಿ ಸ್ಪರ್ಧಿಸಿ ಜನಸೇವೆ ಮಾಡುವ ಅಭಿಲಾಷೆ ಹೊಂದಿದ್ದರು. ಆದರೆ ವಿಧಿ ಅದಕ್ಕೆ ಅವಕಾಶ ನೀಡಲಿಲ್ಲ ನೀವೆಲ್ಲರೂ ನನಗೆ ನೀಡಿದ ಧೈರ್ಯ, ಪ್ರೋತ್ಸಾಹದಿಂದಾಗಿ ಆತ್ಮವಿಶ್ವಾಸದಿಂದ ಚುನಾವಣೆಯಲ್ಲಿ ಸ್ಪರ್ಧಿಸಿದ್ದೇನೆ. ನಾನು ಅವರ ಆಸೆ ಈಡೇರಿಸಿ ಅವರ ದಾರಿಯಲ್ಲೇ ಸಾಗಿ ಜನಸೇವೆ ಮಾಡಲು ನಿರ್ಧರಿಸಿದ್ದೇನೆ. ನನ್ನ ತಂದೆ ಆಸೆಯನ್ನು ಈಡೇರಿಸಲು ನನಗೊಂದು ಅವಕಾಶ ಕಲ್ಪಿಸಿ ಕೊಡಿ ಎಂದು ಮನವಿ ಮಾಡಿದರು.

ಹೆಮ್ಮರಗಾಲದಲ್ಲಿ ಅದ್ಧೂರಿ ಸ್ವಾಗತ: ತಾಲೂಕಿನ ಹೆಮ್ಮರಗಾಲಕ್ಕೆ ಪ್ರಚಾರಕ್ಕೆ ತೆರಳಿದ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಅವರಿಗೆ ಗ್ರಾಮಸ್ಥರು ಬೃಹತ್ ಹೂವಿನ ಹಾರ ಹಾಕಿ, ಪಟಾಕಿ ಸಿಡಿಸಿ, ಆರತಿ ಬೆಳಗಿ ಮೆರವಣಿಗೆ ಮಾಡುವ ಮೂಲಕ ಅದ್ಧೂರಿಯಾಗಿ ಸ್ವಾಗತಿಸಿದರು. ಈ ವೇಳೆ ಗ್ರಾಮದ ಹಲವು ಉಪ್ಪಾರ ಜನಾಂಗದ ಮುಖಂಡರು ಬಿಜೆಪಿ ತೊರೆದು ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು.

ಮುಖಂಡ ಸಿದ್ದಶೆಟ್ಟಿ ಮಾತನಾಡಿದರು. ಪ್ರಚಾರದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಜಿಪಂ ಮಾಜಿ ಸದಸ್ಯೆ ಲತಾ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಮುಖಂಡರಾದ ಮಹದೇವಸ್ವಾಮಿ, ಮಹದೇವು, ದೊರೆಸ್ವಾಮಿ ನಾಯಕ, ನಾಗರಾಜಯ್ಯ, ಶಿವಪ್ಪ ದೇವರು, ನಾಗಶೆಟ್ಟಿ, ಕೆ.ಉಮೇಶ್, ಶಂಕರಪ್ಪ, ಯುವ ಕಾಂಗ್ರೆಸ್ ಅಧ್ಯಕ್ಷ ಅಶೋಕ್, ಕಾಂಗ್ರೆಸ್ ಜಿಲ್ಲಾ ಹಿಂದುಳಿದ ವರ್ಗ ಪ್ರಧಾನ ಕಾರ್ಯದರ್ಶಿ ನಾಗರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ಮುದ್ದುಮಾದಶೆಟ್ಟಿ ಸೇರಿದಂತೆ ಇತರರಿದ್ದರು.

ಒಕ್ಕಲಿಗ ಸಮುದಾಯ ಒಂದು ಪಕ್ಷಕ್ಕೆ ಸೀಮಿತರಲ್ಲ: ಹೆಚ್‌ಸಿಎಂ



ತಿ.ನರಸೀಪುರ, ಏ.21– ಒಕ್ಕಲಿಗ ಸಮುದಾಯ ಯಾವುದೇ ಒಂದು ಪಕ್ಷಕ್ಕೆ ಸೀಮಿತವಲ್ಲ ಎಂದು ಮಾಜಿ ಸಚಿವ, ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಹೆಚ್.ಸಿ. ಮಹದೇವಪ್ಪ ತಿಳಿಸಿದರು.

ತಾಲೂಕಿನ ಬನ್ನೂರಿನ ಶಿವಪಾರ್ವತಿ ಕಲ್ಯಾಣ ಮಂಟಪದಲ್ಲಿ ನಡೆದ ಒಕ್ಕಲಿಗ ಸಮುದಾಯದ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

ಬನ್ನೂರು ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಒಕ್ಕಲಿಗ ಸಮಾಜದ ಮತದಾರರಿದ್ದು, ಅವರನ್ನು ಒಂದು ಪಕ್ಷಕ್ಕೆ ಮೀಸಲು ಎಂಬಂತೆ ಬಿಂಬಿಸಲಾಗುತ್ತಿದೆ. ಆದರೆ ವಾಸ್ತವವೇ ಬೇರೆ. ಈ ಹಿಂದೆ 1952ರಲ್ಲಿ ಬನ್ನೂರು ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ಒಕ್ಕಲಿಗ ಸಮುದಾಯದ ಟಿ.ಪಿ.ಬೋರಯ್ಯ ಅವರನ್ನು ತಿ.ನರಸೀಪುರದ ಶ್ರೀನಿವಾಸ ಅಯ್ಯಂಗಾರ್ ಸೋಲಿಸಿದ್ದರು. ನಾಯಕ ಜನಾಂಗದ ಕೆ.ಎಂ.ಚಿಕ್ಕಮಾದ ನಾಯಕರು ಒಕ್ಕಲಿಗ ಸಮುದಾಯದ ಕೃಷ್ಣಪ್ಪ ಅವರನ್ನು ಸೋಲಿಸಿದ್ದರು. ಸುನೀತಾ ವೀರಪ್ಪಗೌಡರು ಬಿಜೆಪಿಯಿಂದ ಸ್ಪರ್ಧಿಸಿ ಚಿಕ್ಕ ಮಾದನಾಯಕರನ್ನು ಪರಾಭವಗೊಳಿಸಿದ್ದರು. ಬನ್ನೂರಿನ ಒಕ್ಕಲಿಗ ಸಮುದಾಯದವರು ಪಕ್ಷಕ್ಕೆ ಅಧೀನರಾಗಿದ್ದರೆ ಅಯ್ಯಂಗಾರ್ ಜನಾಂಗದ ಶ್ರೀನಿವಾಸ ಅಯ್ಯಂಗಾರ್, ನಾಯಕ ಜನಾಂಗದ ಚಿಕ್ಕ ಮಾದನಾಯಕರು ಗೆಲ್ಲಲು ಸಾಧ್ಯವಾಗಿತ್ತೆ ಎಂದು ಪ್ರಶ್ನಿಸಿದ ಅವರು ಹಾಗಾಗಿ ಒಕ್ಕಲಿಗ ಸಮುದಾಯದವರು ಜೆಡಿಎಸ್ ಪಕ್ಷದ ಅಧೀನದಲ್ಲಿಲ್ಲ ಎಂಬುದನ್ನು ಚರಿತ್ರೆಯಲ್ಲೇ ಸಾಬೀತು ಮಾಡಿದ್ದಾರೆ ಎಂದರು.

ಈಗ ಮತ್ತೆ ಒಕ್ಕಲಿಗರು ಜೆಡಿಎಸ್‌ಗೆ ಮತ ಹಾಕುತ್ತಾರೆಂಬ ಚರ್ಚೆ ಆರಂಭವಾಗಿದೆ. 80ರ ದಶಕದ ನಂತರ ರಾಜಕೀಯ ನಾಯಕರು ತಮ್ಮ ಅಸ್ತಿತ್ವಕ್ಕಾಗಿ ಜಾತಿ ಓಲೈಕೆ ಮಾಡಲು ಆರಂಭಿಸಿದರು. ಅದು ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷದವರಾಗಿರಬಹುದು. ಬಿಎಸ್‌ಪಿ ಪಕ್ಷದವರೂ ಆಗಿರಬಹುದು. ತಮ್ಮ ಅಸ್ತಿತ್ವ ಉಳಿಸಿಕೊಂಡು ನಾಯಕರು ಗಟ್ಟಿಯಾಗುತ್ತಾ ಹೋದರೆ, ಸಮುದಾಯಗಳು ಅಸ್ತಿತ್ವ ಕಳೆದುಕೊಳ್ಳುತ್ತಾ ಹೋಗುವಂತಾಯಿತು. ಸಮುದಾಯಗಳು ಅಭಿವೃದ್ಧಿ ಕಾಣಲಿಲ್ಲ, ಬೆಳವಣಿಗೆ ಕಾಣಲಿಲ್ಲ, ಬದುಕು ಸುಧಾರಿಸಲಿಲ್ಲ. ನಾಯಕ ಮಾತ್ರ ಮತದಾರನ ಮನಸ್ಸಿಗೆ ಜಾತಿ ಎಂಬ ಅಫೀಮನ್ನು ತುಂಬುತ್ತಾ ಹೋದ. ಹಾಗಾಗಿ ಜಾತಿ ಬೇಡ ಎಂದು ನಾವೆಲ್ಲಾ ಹೋರಾಡಬೇಕು ಎಂದು ಅಂಬೇಡ್ಕರ್ ಸಂವಿಧಾನ ನೀಡಿದರು ಎಂದರು.

ಜನರ ಜೀವನ ಸುಧಾರಣೆಯಾಗಬೇಕಾದರೆ ನೀರಾವರಿ ಸವಲತ್ತುಗಳು ಸುಧಾರಣೆಯಾಗಬೇಕು. 80 ಸಾವಿರ ಎಕರೆ ಭೂಮಿಯಲ್ಲಿ ಜೀವನ ನಡೆಸುವ ರೈತರಿಗೆ ಅನುಕೂಲ ಮಾಡದಿದ್ದರೆ ಆ ಜನಪ್ರತಿನಿಧಿ ಎಷ್ಟು ಬಾರಿ ಗೆದ್ದರೆಷ್ಟು ಬಿಟ್ಟರೆಷ್ಟು, ಆದರೆ ನಾವು ಮಾತ್ರ ಹಾಗೆಯೇ ಉಳಿದು ಕೊಳ್ಳುತ್ತೇವೆ ಎಂದರು.

ಸಭೆಯಲ್ಲಿ ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ, ಎಸ್.ಕೃಷ್ಣಪ್ಪ, ಶಂಕರೇಗೌಡ, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಮನ್‌ಮುಲ್ ನಿರ್ದೇಶಕ ಆರ್.ಚೆಲುವರಾಜು, ಬೃಂದಾ, ರಾಮಲಿಂಗೇಗೌಡ, ಚನ್ನಕೇಶವ, ಮಲ್ಲಿಕಾರ್ಜುನಸ್ವಾಮಿ, ಲಕ್ಷ್ಮೀನಾರಾಯಣ, ಪ್ರಥಮ ದರ್ಜೆ ಗುತ್ತಿಗೆದಾರ ಸ್ವಾಮಿ, ಮಧುಕುಮಾರ್ ಮತ್ತಿತರರಿದ್ದರು.

ಲಾವಣ್ಯಗೆ ಅತ್ಯುನ್ನತ ಶ್ರೇಣಿ

ತಿ.ನರಸೀಪುರ, ಏ.21– ತಾಲೂಕಿನ ಸಂತ ನೋಬರ್ಟ್ ಪದವಿಪೂರ್ವ



ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಎಂ.ಲಾವಣ್ಯ 561 (ಶೇ.93.5) ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ. ಈಕೆ ತಾಲೂಕಿನ ಭೈರಾಪುರ ಗ್ರಾಮದ ನಿವಾಸಿ ಎಸ್.ಮಂಜುನಾಥ ಮತ್ತು ಸವಿತ ದಂಪತಿ ಹಿರಿಯ ಪುತ್ರಿ.

ನೀರು ವ್ಯತ್ಯಯ

ಹುಣಸೂರು, ಏ.21– ಹುಣಸೂರು ನಗರಕ್ಕೆ ನೀರು ಸರಬರಾಜು ಮಾಡುವ ಕೆ.ಆರ್.ನಗರ ಜಾಕ್‌ವೆಲ್‌ನ ಪ್ಯಾನೆಲ್ ಬೋರ್ಡ್ ಹೈವೋಲ್ಟೇಜ್‌ನಿಂದ ಸುಟ್ಟು ಹೋಗಿರುವ ಕಾರಣ ಏ.22ರಂದು ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ನೀರು ಸರಬರಾಜು ವಿಭಾಗದ ಎಇ ಶರ್ಮಿಳಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯಡಹಳ್ಳಿಯಲ್ಲಿ ಅಶ್ವಿನ್ ಕುಮಾರ್ ಮತಯಾಚನೆ



ತಿ.ನರಸೀಪುರ, ಏ.21– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಪಂಚರತ್ನ ರಥಯಾತ್ರೆಗೆ ಕ್ಷೇತ್ರದಲ್ಲಿ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದ್ದು, ಈ ಬಾರಿ ಕ್ಷೇತ್ರದ ಮತದಾರರು ಜೆಡಿಎಸ್ ಬೆಂಬಲಿಸಲಿದ್ದಾರೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಯಡಹಳ್ಳಿ ಗ್ರಾಮದಲ್ಲಿ ಮತಯಾಚಿಸಿ ಮಾತನಾಡಿದ ಅವರು, ಪಂಚರತ್ನ ಯಾತ್ರೆ ಸರ್ವ ಜನಾಂಗದ ಅಭಿವೃದ್ಧಿಗೆ ಪೂರಕವಾದ ಯೋಜನೆಯಾಗಿದ್ದು, ಎಲ್ಲಾ ವರ್ಗದ ಜನರಿಗೆ ಅನುಕೂಲ ಕಲ್ಪಿಸುವ ಜೊತೆಗೆ ಮಹಿಳೆಯರು, ಯುವಕರು, ರೈತರು, ಕಾರ್ಮಿಕರ ಹಿತ ಕಾಪಾಡುವ ಜೊತೆಗೆ ನಿರುದ್ಯೋಗ ಸಮಸ್ಯೆ ಹೋಗಲಾಡಿಸಿ ಸ್ವಂತ ಉದ್ಯೋಗ ಕಂಡುಕೊಳ್ಳಲು ಯೋಜನೆ ಸಹಕಾರಿಯಾಗಲಿದೆ ಎಂದರು.

ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯಾದ್ಯಂತ ಸಂಚರಿಸಿ ಪಕ್ಷವನ್ನು ಅಧಿಕಾರಕ್ಕೆ ತರಲು ಹಗಲಿರುಳು ಶ್ರಮಿಸುತ್ತಿದ್ದಾರೆ. ಅದರಂತೆ ನಾನು ಕೂಡ ಕ್ಷೇತ್ರವನ್ನು ಮಾದರಿಯಾಗಿಸಲು ಕಾರ್ಯಕರ್ತರೊಡಗೂಡಿ ಶ್ರಮಿಸುತ್ತಿದ್ದು, ಕ್ಷೇತ್ರದ ಮತದಾರರು ಮತ್ತೊಮ್ಮೆ ನನಗೆ ಆಶೀರ್ವದಿಸಬೇಕು ಎಂದು ಮನವಿ ಮಾಡಿದರು.

ವಿವಿಧೆಡೆ ಶಾಸಕ ಹೆಚ್‌ಪಿಎಂ ಬಿರುಸಿನ ಪ್ರಚಾರ



ಹುಣಸೂರು, ಏ.21– ತಾಲೂಕಿನ ಹನಗೋಡು ಹೋಬಳಿ ಕಡೆ ಮನುಗನಹಳ್ಳಿ ಹಾಗೂ ಹೆಗ್ಗಂದೂರು ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಶಾಸಕ ಹೆಚ್.ಪಿ.ಮಂಜುನಾಥ್ ತಮ್ಮ ಬೆಂಬಲಿಗರೊಂದಿಗೆ ಬಿರುಸಿನ ಪ್ರಚಾರ ನಡೆಸಿದರು.

ಹೆಗ್ಗಂದೂರಲ್ಲಿ ಮಾತನಾಡಿದ ಶಾಸಕ ಮಂಜುನಾಥ್, 3 ಬಾರಿ ಶಾಸಕನಾಗಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ಜನಪರ ಕೆಲಸ ಮಾಡಿದ್ದೇನೆ. ಪಕ್ಷಬೇಧ ಮಾಡದೇ ಎಲ್ಲರನ್ನೂ ಸಮಾನವಾಗಿ ಕಂಡಿದ್ದೇನೆ. ಕ್ಷೇತ್ರದಲ್ಲಿ ಯಾವುದೇ ಕೋಮುಗಲಭೆ ನಡೆಯದಂತೆ ನೋಡಿಕೊಂಡಿದ್ದೇನೆ ಎಂದರು.

ಈ ಭಾಗದ ಎಲ್ಲಾ ಹಳ್ಳಿಗಳ ಹಾಗೂ ಆದಿವಾಸಿ ಹಾಡಿಗಳ, ಗಿರಿಜನ ಪುನರ್ವಸತಿ ಕೇಂದ್ರಗಳ ಸಮಸ್ಯೆಗೆ ಸ್ಪಂದಿಸಿದ್ದೇನೆ. ಹನಗೋಡಿನಲ್ಲಿ ನೂತನ ಬಸ್ ನಿಲ್ದಾಣ, ನಾಡಕಚೇರಿ ಕಟ್ಟಡ, ಕೃಷಿ ಇಲಾಖೆ ಕಟ್ಟಡ, ಶಾಲಾ–ಕಾಲೇಜು ಅಭಿವೃದ್ಧಿ, ಹನಗೋಡು ಅಣೆಕಟ್ಟೆ–ನಾಲೆಗಳ ಆಧುನೀಕರಣ ಸೇರಿದಂತೆ ಅನೇಕ ಅಭಿವೃದ್ಧಿ ಕೆಲಸ ಮಾಡಿರುವ ತೃಪ್ತಿ ಇದೆ. ಹೀಗಾಗಿ ನನ್ನ ಅಭಿವೃದ್ಧಿ ಕಾರ್ಯ ನೋಡಿ ಈ ಬಾರಿ ಅತ್ಯಧಿಕ ಮತಗಳಿಂದ ಮತ್ತೆ ಗೆಲ್ಲಿಸುವ ಮೂಲಕ ಮತ್ತೊಂದು ಬಾರಿ ಅವಕಾಶ ನೀಡಿದಲ್ಲಿ ಮಂತ್ರಿಯಾಗುವ ಅವಕಾಶವಿದ್ದು, ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸುತ್ತೇನೆ ಎಂದರು.

ಇದೇ ವೇಳೆ ಹೆಬ್ಬಾಳ, ಕಡೆ ಮನುಗನಹಳ್ಳಿ, ಬಿ.ಆರ್.ಕಾವಲು, ಬಿಜಾಪುರ ಕಾಲೋನಿ, ಬಿ.ಆರ್.ಕಾವಲು 2 ಮತ್ತು 3ನೇ ಕಾಲೋನಿ, ಬೀರತಮ್ಮನಹಳ್ಳಿ, ಹೆಗ್ಗಂದೂರು ವಡ್ಡಂಬಾಳು, ಹೊನ್ನೇನಹಳ್ಳಿ, ಬೀರನಹಳ್ಳಿ, ಲಕ್ಷ್ಮಿಪುರ, ಹೊಸೂರು, ಕೂಡ್ಲೂರು, ಹೊಸಕೋಟೆ ಮತ್ತಿತರ ಗ್ರಾಮಗಳಲ್ಲಿ ಪ್ರಚಾರ ನಡೆಸಿದರು.

ಈ ವೇಳೆ ಹಲವು ಗ್ರಾಮಗಳಲ್ಲಿ ಶಾಸಕ ಹೆಚ್.ಪಿ.ಮಂಜುನಾಥ್ ಕಾರ್ಯವೈಖರಿ ಮೆಚ್ಚಿ ವಿವಿಧ ಪಕ್ಷಗಳನ್ನು ತೊರೆದು ಕಾಂಗ್ರೆಸ್ ಸೇರ್ಪಡೆಯಾದರು. ಕಾರ್ಯಕ್ರಮದಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ರವಿಗೌಡ, ನಂದೀಶ್, ಹೊಂಬೇಗೌಡ, ಶ್ರೀಕಂಠಪ್ಪ, ಮಂಜು, ರವಿ, ಲೋಕೇಶ್, ಪ್ರವೀಣ್, ಶ್ರೀನಿವಾಸ್, ಆದಿವಾಸಿ ಮುಖಂಡರಾದ ರಾಜಪ್ಪ, ಶಿವಣ್ಣ, ಚಂದ್ರು ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು, ಕಾಂಗ್ರೆಸ್ ಕಾರ್ಯಕರ್ತರು ಇದ್ದರು.

ದಸಂಸ ಐಕ್ಯತಾ ಹೋರಾಟ ಸಮಿತಿ 'ಕೈ'ಗೆ ಬೆಂಬಲ



ಹೆಚ್.ಡಿ.ಕೋಟೆ, ಏ.21– ಕೋಮುವಾದಿ ಬಿಜೆಪಿ ಸರ್ಕಾರ ಕಿತ್ತೊಗೆಯಲು ಚುನಾವಣೆಯಲ್ಲಿ ದಸಂಸ ಐಕ್ಯತಾ ಹೋರಾಟ ಸಮಿತಿ ಕಾಂಗ್ರೆಸ್ ಪಕ್ಷ ಬೆಂಬಲಿಸಲು ತೀರ್ಮಾನಿಸಿದೆ ಎಂದು ಐಕ್ಯತಾ ಸಮಿತಿ ಸದಸ್ಯ ಹಾಗೂ ದಸಂಸ ಅಂಬೇಡ್ಕರ್‌ವಾದ ತಾಲೂಕು ಸಂಚಾಲಕ ಸಣ್ಣಕುಮಾರ್ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಆಡಳಿತಕ್ಕೆ ಬರುತ್ತಿದ್ದಂತೆ ನಾವು ಬಂದಿರುವುದೇ ಸಂವಿಧಾನ ಬದಲಾಯಿಸಲು ಎಂದು ಬಹಿರಂಗವಾಗಿ ಹೇಳಿದೆ. ರಾಜ್ಯದಲ್ಲಿ ದಲಿತರ ಮೇಲಿನ ದೌರ್ಜನ್ಯ ಹೆಚ್ಚಾಗಿದೆ. ಹಾಗಾಗಿ ರಾಜ್ಯದಲ್ಲಿ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಬೇಕಾದ ಅನಿವಾರ್ಯತೆ ಇದೆ ಎಂದರು.

ಕಳೆದ 5 ವರ್ಷಗಳಿಂದ ತಾಲೂಕಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿ ಶಾಂತಿ ಸುವ್ಯವಸ್ಥೆ ಕಾಪಾಡಿದ ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಈ ಚುನಾವಣೆಯಲ್ಲಿ ಬೆಂಬಲಿಸುವ ಮೂಲಕ ಮತ್ತೊಮ್ಮೆ ಶಾಸಕರಾಗಿ ಆಯ್ಕೆ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ ಎಂದರು.

ಬಿಜೆಪಿಗೆ ಪರ್ಯಾಯ ಕಾಂಗ್ರೆಸ್ ಪಕ್ಷ. ಜೆಡಿಎಸ್ ಪಕ್ಷ ಜಾತ್ಯಾತೀತ ಪಕ್ಷವಾದರೂ ಕೂಡ ಸ್ವಂತ ಬಲದಿಂದ ಅಧಿಕಾರ ಹಿಡಿಯುವ ಯಾವುದೇ ಸಾಮರ್ಥ್ಯವಿಲ್ಲ. ಕೆಲವು ಶಾಸಕರ ಬೆಂಬಲದೊಂದಿಗೆ ಬಿಜೆಪಿಗೆ ಬೆಂಬಲ ನೀಡಲು ಹೊಂದಾಣಿಕೆ ಮಾಡಿಕೊಂಡಿರುವ ವಿಚಾರ ಜಗಜ್ಜಾಹೀರಾಗಿದೆ. ಹಾಗಾಗಿ ತಾಲೂಕಿನ ದಲಿತ ಸಮುದಾಯ ಬಿಜೆಪಿ ಮತ್ತು ಜೆಡಿಸ್ ಪಕ್ಷವನ್ನು ಧಿಕ್ಕರಿಸಿ ಸಾಮಾಜಿಕ ನ್ಯಾಯಕ್ಕೆ ಬದ್ಧತೆಯಾಗಿ ದುಡಿಯುವ ಕಾಂಗ್ರೆಸ್ ಪಕ್ಷ ಬೆಂಬಲಿಸಲು ಮನವಿ ಮಾಡಿದರು. ಈ ವೇಳೆ ಲಕ್ಷ್ಮೀನಾರಾಯಣ, ನಾಗವರ ಬಣದ ಶಿವಣ್ಣ, ಡಿ.ಜಿ.ಸಾಗರ ಬಣದ ಆಟೋ ಕುಮಾರ್, ಅಂಬೇಡ್ಕರ್ ಸೇನೆ ತಾಲೂಕು ಅಧ್ಯಕ್ಷ ಮಹದೇವಸ್ವಾಮಿ, ಮಹೇಶ್, ಗೋವಿಂದರಾಜ್, ಕುಮಾರ್, ಚಲುವಪ್ಪ, ನಾಗನಾಯಕ ಇದ್ದರು.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ







ಬೆಟ್ಟದಪುರ, ಏ.21– ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಾದ ಬಿ.ರಂಜಿತಾ (ಕಲಾ) 560 ಅಂಕ, ಲಕ್ಷ್ಮಿ (ವಾಣಿಜ್ಯ) 559 ಅಂಕ, ಎನ್.ಆರ್.ಭೂಮಿಕಾ (ವಿಜ್ಞಾನ) 537 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಕಾಲೇಜು ಪ್ರಾಂಶುಪಾಲ ಜ್ಯೋತಿ ಪ್ರಸಾದ್ ತಿಳಿಸಿದ್ದಾರೆ.

ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆ



ಚುಂಚನಕಟ್ಟೆ, ಏ.21– ಮಂಗಳೂರಿನ ಮೂಡಬಿದ್ರೆ ಆಳ್ವಾಸ್ ಕಾಲೇಜಿನ ದ್ವಿತಿಯ ಪಿಯುಸಿ ವಾಣಿಜ್ಯ ವಿಭಾಗದ ವಿದ್ಯಾರ್ಥಿ ತಿಲಕ್ ಕುಮಾರ್ ಸಿ.ಎಂ. 558 (ಶೇ.93) ಅಂಕ ಪಡೆದು ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾಗಿದ್ದಾರೆ. ಈತ ಚುಂಚನಕಟ್ಟೆ ಗ್ರಾಮದ ನಿವಾಸಿ ಸಿ.ಜಿ.ಮಧುಸೂದನ್ ಹಾಗೂ ರೇಣುಕಾ ದಂಪತಿ ಪುತ್ರ.

ಟೈಗರ್ ಬ್ಲಾಕ್, ಪಕ್ಷಿರಾಜಪುರಕ್ಕೆ ಡಿಸಿ ರಾಜೇಂದ್ರ ಭೇಟಿ

ಸುಡಾನ್‌ನಲ್ಲಿರುವವರೊಂದಿಗೆ ವಿಡಿಯೋ ಕಾಲ್‌ನಲ್ಲಿ ಮಾತನಾಡಿದ ಜಿಲ್ಲಾಧಿಕಾರಿ



ಹೆಚ್.ಡಿ.ಕೋಟೆ, ಏ.21– ತಾಲೂಕಿನ ಟೈಗರ್ ಬ್ಲಾಕ್ ಹಾಗೂ ಹುಣಸೂರು ತಾಲೂಕಿನ ಪಕ್ಷಿರಾಜಪುರಕ್ಕೆ ಶುಕ್ರವಾರ ಜಿಲ್ಲಾಧಿಕಾರಿ ರಾಜೇಂದ್ರ ಭೇಟಿ ನೀಡಿ, ಸೈನಿಕ ದಂಗೆ ಹಿನ್ನಲೆಯಲ್ಲಿ ದಕ್ಷಿಣ ಆಫ್ರಿಕಾದ ಸುಡಾನ್‌ನಲ್ಲಿ ಸಿಲುಕಿರುವ ಹಕ್ಕಿಪಿಕ್ಕಿ ಜನಾಂಗದವರೊಂದಿಗೆ ವಿಡಿಯೋ ಕಾಲ್‌ನಲ್ಲಿ ಮಾತನಾಡಿ ಧೈರ್ಯ ತುಂಬಿದರು.

ಎಲ್ಲರೂ ಒಟ್ಟಿಗೆ ಇರಿ. ಪ್ರತಿದಿನ ಮಾಹಿತಿ ನೀಡಿ. ನಿಮಗೆ ಯಾವುದೇ ತೊಂದರೆಯಾಗದ ರೀತಿ ಎಲ್ಲರನ್ನೂ ಕರೆಸಿಕೊಳ್ಳಲು ಸಿದ್ಧತೆ ಕೈಗೊಳ್ಳಲಾಗುತ್ತಿದೆ ಎಂದರು. ಬಳಿಕ ಗ್ರಾಮದಲ್ಲಿ ಸುಡಾನ್‌ನಲ್ಲಿ ಸಿಲುಕಿರುವವರ ಮನೆಗಳಿಗೆ ಭೇಟಿ ನೀಡಿ ಕುಟುಂಬ ಸದಸ್ಯರಿಗೆ ಧೈರ್ಯ ತುಂಬಿದರು.

ಸುಡಾನ್‌ನಲ್ಲಿ ಸಿಲುಕಿರುವ ತಮ್ಮ ಕುಟುಂಬದ ಸದಸ್ಯರನ್ನು ರಕ್ಷಿಸುವಂತೆ ಅವರ ಕುಟುಂಬದ ಸದಸ್ಯರು ಮನವಿ ಮಾಡಿದ್ದರು. ಆದ್ದರಿಂದ ನಾನು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿ ಸಂಪೂರ್ಣ ಮಾಹಿತಿ ಸಂಗ್ರಹಿಸಿದ್ದು, ಸಂಬಂಧಪಟ್ಟ ಮೇಲಧಿಕಾರಿಗಳ ಗಮನಕ್ಕೆ ತಂದು ಯಾವುದೇ ತೊಂದರೆಯಾಗದಂತೆ ಕೋಟೆ ತಾಲೂಕಿನ ಟೈಗರ್ ಬ್ಲಾಕ್ ಹುಣಸೂರು ತಾಲೂಕಿನ ಪಕ್ಷಿರಾಜಪುರದ 116 ಮಂದಿಯನ್ನು ಸುರಕ್ಷಿತವಾಗಿ ಕರೆತರುವ ವ್ಯವಸ್ಥೆ ಮಾಡಲಾಗುವುದು ಎಂದರು.

ನಿಮ್ಮವರು ವಿದೇಶಕ್ಕೆ ತೆರಳಲು ಯಾರ ಮೂಲಕ ವೀಸಾ, ಪಾಸ್‌ಪೋರ್ಟ್ ಮಾಡಿಸಿದ್ದರು ಎಂಬ ಮಾಹಿತಿ ನೀಡುವಂತೆ ಹಕ್ಕಿಪಿಕ್ಕಿ ಜನಾಂಗದ ಮುಖಂಡ ಹಾಗೂ ಅಣ್ಣೂರು ಗ್ರಾಪಂ ಮಾಜಿ ಉಪಾಧ್ಯಕ್ಷ ಹೀವಾನ್ ರಾಜ್ ಅವರಿಗೆ ತಿಳಿಸಿದ ಜಿಲ್ಲಾಧಿಕಾರಿಗಳು ಸುಡಾನ್‌ಗೆ ತೆರಳಿರುವವ ಎಲ್ಲರ ವಿವರಗಳೊಂದಿಗೆ ಪ್ರತಿದಿನ ಅವರಿಂದ ಬರುವ ಮಾಹಿತಿ ಸಂಗ್ರಹಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದ್ದರು. ಅಲ್ಲದೇ ಇದೇ ವೇಳೆ ಜಿಲ್ಲಾಧಿಕಾರಿ ರಾಜೇಂದ್ರ ಅವರು ಹಕ್ಕಿಪಿಕ್ಕಿ ಜನಾಂಗದವರ ಮನೆಗೆ ತೆರಳಿ ಗಿಡಮೂಲಿಕೆಗಳಿಂದ ತಯಾರಿಸಿದ ಔಷಧಗಳನ್ನು ಪರಿಶೀಲಿಸಿದರು.

ಈ ವೇಳೆ ಮಾತನಾಡಿದ ಗ್ರಾಮಸ್ಥರು, ಸರ್ಕಾರ ನಮ್ಮ ಜಮೀನುಗಳನ್ನು ನಮಗೆ ಬಿಟ್ಟು ಕೊಟ್ಟರೇ ನಾವು ಎಲ್ಲಿಗೂ ವಲಸೆ ಹೋಗುವುದಿಲ್ಲ. ನಮ್ಮ ಜಮೀನಿನಲ್ಲಿ ಏನಾದರೂ ಬೆಳೆ ಬೆಳೆದು ಜೀವನ ಸಾಗಿಸುತ್ತೇವೆ. ಹೀಗಾಗಿ ನಮಗೆ ದಯಮಾಡಿ ಜಮೀನು ಕೊಡಿಸಲು ಕ್ರಮ ಕೈಗೊಳ್ಳಿ. ಅಲ್ಲದೇ ಸುಡಾನ್‌ಗೆ ತೆರಳಿರುವ ನಮ್ಮವರನ್ನು ಸುರಕ್ಷಿವಾಗಿ ಕರೆಸಲು ಸಂಬಂಧಪಟ್ಟವರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುವಂತೆ ಕೈಮುಗಿದು ಬೇಡಿಕೊಂಡರು.

ಈ ವೇಳೆ ತಹಸೀಲ್ದಾರ್ ಮಹೇಶ್, ತಾಲೂಕು ಪರಿಶಿಷ್ಟ ಕಲ್ಯಾಣ ವರ್ಗಗಳ ಅಧಿಕಾರಿ ನಾರಾಯಣ ಸ್ವಾಮಿ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮಸ್ವಾಮಿ, ಇಓ ರಾಜೇಶ್ ಜೆರಾಲ್ಡ್, ಚುನಾವಣಾಧಿಕಾರಿ ಕುಮುದಾ ಶರತ್, ಗಿರಿಜನ ವಿಸ್ತೀರ್ಣ ಅಧಿಕಾರಿ ನಾಗರಾಜ್, ವಿಎ ದಿವ್ಯಾ ಇನ್ನಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

- ಸ್ಕ್ರೀನ್ 1 **ಪ್ರವೀಣ (ಕ)**: ಬೆ.10.30ಕ್ಕೆ, **ಗುರುದೇವ್ ಹೊಯ್ಸಳ (ಕ)**: ಮ.1.05ಕ್ಕೆ, **ದಸರಾ (ತೆ)**: ಮ.3.45ಕ್ಕೆ, **ರಾವಣಾಸುರ (ತೆ)**: ಸಂ.6.55ಕ್ಕೆ, ರಾ.9.45ಕ್ಕೆ.
- ಸ್ಕ್ರೀನ್ 2 **ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ)**: ಬೆ.11ಕ್ಕೆ, ಮ.1.05ಕ್ಕೆ, ಮ.3.10ಕ್ಕೆ, **ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ)**: ಸಂ.5.10ಕ್ಕೆ, ರಾ.7.30ಕ್ಕೆ, ರಾ.9.45ಕ್ಕೆ.
- ಸ್ಕ್ರೀನ್ 3 **ರಾಮಾಚಾರಿ 2.0 (ಕ)**: ಬೆ.10.45ಕ್ಕೆ, **ಆಗಸ್ಟ್ 16 1947(ತ)**: ಮ.1.30ಕ್ಕೆ, **ಪೆಂಟಗನ್ (ಕ)**: ಸಂ.4.20ಕ್ಕೆ, **ಗುಮ್ರಾಹ್ (ಹಿಂ)**: ರಾ.7.30ಕ್ಕೆ, ರಾ.10.10ಕ್ಕೆ.
- ಸ್ಕ್ರೀನ್ 4 **ಗುರುದೇವ್ ಹೊಯ್ಸಳ (ಕ)**: ಬೆ.10.50ಕ್ಕೆ, ರಾ.7.40ಕ್ಕೆ, ರಾ.10.15ಕ್ಕೆ, **ವೀರಂ (ಕ)**: ಮ.1.30ಕ್ಕೆ, ಸಂ.4.35ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

- ಸ್ಕ್ರೀನ್ 1 **ಗುರುದೇವ್ ಹೊಯ್ಸಳ (ಕ)**: ಬೆ.10.20ಕ್ಕೆ, **ವೀರಂ (ಕ)**: ಮ.1.05ಕ್ಕೆ, ರಾ.7.15ಕ್ಕೆ, **ರಾವಣಾಸುರ (ತೆ)**: ಸಂ.4.20ಕ್ಕೆ, ರಾ.10.30ಕ್ಕೆ.
- ಸ್ಕ್ರೀನ್ 2 **ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ)**: ಬೆ.10.25ಕ್ಕೆ, **ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ)**: ಮ.12.45ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, **ರಾಮಾಚಾರಿ 2.0(ಕ)**: ಮ.2.55ಕ್ಕೆ, **ದಸರಾ (ತೆ)**: ರಾ.10ಕ್ಕೆ.
- ಸ್ಕ್ರೀನ್ 3 **ವೀರಂ (ಕ)**: ಬೆ.10.10ಕ್ಕೆ, **ರಾವಣಾಸುರ (ತೆ)**: ಮ.1.25ಕ್ಕೆ, **ಗುರುದೇವ ಹೊಯ್ಸಳ (ಕ)**: ಸಂ.4.20ಕ್ಕೆ, ರಾ.9.50ಕ್ಕೆ, **ನಮ್ ನಾಣಿ ಮದುವೆ ಪ್ರಸಂಗ (ಕ)**: ರಾ.7.05ಕ್ಕೆ.
- ಸ್ಕ್ರೀನ್ 4 **ಪ್ರವೀಣ (ಕ)**: ಬೆ.11.10ಕ್ಕೆ, **ಗುರುದೇವ ಹೊಯ್ಸಳ (ಕ)**: ಮ.1.45ಕ್ಕೆ, **ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ)**: ಸಂ.4.30ಕ್ಕೆ, ರಾ.10.20ಕ್ಕೆ, **ಪೆಂಟಗನ್ (ಕ)**: ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, **1 ರಾಬರಿ ಕಥೆ (ಕ)**: ಸಂ.4.50ಕ್ಕೆ, **ಚೌಕಾಬಾರ (ಕ)**: ರಾ.7.50ಕ್ಕೆ, **ಕ್ರಿಡ್ 3 (ಇಂ)**: ಬೆ.11.35ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ)**: ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ)**: ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, **ತುರಮುಖಂ (ಮ)**: ರಾ.10.30ಕ್ಕೆ, **ಅಜಿಲನ್ ಕಿಂಗ್ ಆಫ್ ದಿ ಓಷನ್ (ತ)**: ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಸ್ಕ್ರೀಮ್ 6 (ಇಂ)**: ಮ.2.45ಕ್ಕೆ, ರಾ.7.45ಕ್ಕೆ, **65 (ಇಂ)**: ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಯಾದಿಸ್ಥೆ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಿಸಿಕಾ ಬೈ ಕಿಸಿಕಿ ಜಾನ್ (ಹಿ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಿಸಿಕಾ ಬೈ ಕಿಸಿಕಿ ಜಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವೀರಂ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಶಿವಾಜಿ ಸೂರತ್ಕಲ್–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಿಸಿಕಾ ಬೈ ಕಿಸಿಕಿ ಜಾನ್ (ಹಿ)	4 ಪ್ರದರ್ಶನಗಳು
ಸಂಗಂ	
ಇಂಗ್ಲೀಷ್ ಮಂಜ (ಕ)	4 ಪ್ರದರ್ಶನಗಳು
ಲಿಡೋ	
ಉಂಡೆನಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೋಲಾ (ಹಿ)	4 ಪ್ರದರ್ಶನಗಳು
ಪ್ರಭಾ	
ವೀರಂ (ಕ)	4 ಪ್ರದರ್ಶನಗಳು

ಇಂದು ವಿದ್ಯುತ್ ವ್ಯತ್ಯಯ

ನಂಜನಗೂಡು, ಏ.21– 66/11 ಕೆವಿ ದೂರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವುದರಿಂದ ಏ.22ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆವರೆಗೆ ತಾಲೂಕಿನ ಬಿದರಗೂಡು, ಕೆಂಬಾಳು, ಹಳ್ಳಿಕೆರೆಹುಂಡಿ, ಬ್ಯಾಳಾರು, ದೂರ, ತಳೂರು, ಮೂಡಗಳ್ಳಿ, ಕಾಟೂರು ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 10ರಲ್ಲಿ



ಅನುಬಂಧ – 47
(ಅಧ್ಯಾಯ 5, ಪ್ಯಾರಾ 5,16,5))
ನಮೂನೆ ಸಿ–1 ಯಿಂದ ಸಿ–8 ಮತ್ತು ಸಿ ಎ
ನಮೂನೆ ಸಿ–1
(ಅಭ್ಯರ್ಥಿಯು ವೃತ್ತಪತ್ರಿಕೆಗಳು, ಟಿವಿಯಲ್ಲಿ ಪ್ರಕಟಿಸುವುದಕ್ಕಾಗಿ)

ಅಪರಾಧ ಪ್ರಕರಣಗಳ ಬಗ್ಗೆ ಘೋಷಣೆ:

(ಮಾನ್ಯ ಸರ್ವೋಚ್ಚ ನ್ಯಾಯಾಲಯವು, 2011ರ ಡಬ್ಲ್ಯೂಪಿ (ಸಿವಿಲ್) ಸಂ.536, ದಿನಾಂಕ: 25ನೇ ಸೆಪ್ಟೆಂಬರ್ 2018 (ಸಾರ್ವಜನಿಕ ಹಿತಾಸಕ್ತಿ ಪ್ರತಿಷ್ಠಾನ ಮತ್ತು ಇತರರು=ವಿರುದ್ಧ–ಭಾರತ ಒಕ್ಕೂಟ ಮತ್ತು ಇತರರು)ರಲ್ಲಿ ನೀಡಿದ ತೀರ್ಪಿಗೆ ಅನುಸಾರವಾಗಿ)

ಅಭ್ಯರ್ಥಿಯ ಹೆಸರು : ದರ್ಶನ್ ಧ್ರುವನಾರಾಯಣ್
ಅಭ್ಯರ್ಥಿಯ ವಿಳಾಸ : ಹೆಗ್ಗದಾಡಿ ಗ್ರಾಮ, ಬೆಂಡರವಾಡಿ ಅಂಚೆ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ 571312
ರಾಜಕೀಯ ಪಕ್ಷದ ಹೆಸರು : ಭಾರತೀಯ ರಾಷ್ಟ್ರೀಯ ಕಾಂಗ್ರೆಸ್
ಚುನಾವಣೆಯ ಹೆಸರು : ಕರ್ನಾಟಕ ವಿಧಾನಸಭೆ
ಚುನಾವಣಾ ಕ್ಷೇತ್ರದ ಹೆಸರು : 214 ನಂಜನಗೂಡು ವಿಧಾನಸಭಾ ಕ್ಷೇತ್ರ

ಮೇಲೆ ಸೂಚಿಸಿರುವ ಚುನಾವಣೆಯ ಅಭ್ಯರ್ಥಿಯಾಗಿರುವ **ದರ್ಶನ್ ಧೃವನಾರಾಯಣ್** (ಅಭ್ಯರ್ಥಿಯ ಹೆಸರು) ನಾನು, ನನ್ನ ಅಪರಾಧಿಕ ಪೂರ್ವ ಇತಿಹಾಸದ ಬಗ್ಗೆ ಮುಂದಿನ ವಿವರಗಳನ್ನು ಸಾರ್ವಜನಿಕ ಮಾಹಿತಿಗಾಗಿ ಘೋಷಿಸುತ್ತೇನೆ.

(ಎ) ಬಾಕಿ ಇರುವ ಕ್ರಿಮಿನಲ್ ಪ್ರಕರಣಗಳು

ಕ್ರ.ಸಂ.	ನ್ಯಾಯಾಲಯದ ಹೆಸರು	ಪ್ರಕರಣ ಸಂಖ್ಯೆ ಮತ್ತು ದಿನಾಂಕ	ಪ್ರಕರಣ (ಗಳ) ಸ್ಥಿತಿಗತಿ	ಸಂಬಂಧಪಟ್ಟ ಅಧಿನಿಯಮಗಳ ಪ್ರಕರಣ (ಗಳು) ಮತ್ತು ಅಪರಾಧ)(ಗಳ) ಸಂಕ್ಷಿಪ್ತ ವಿವರ
1	2ನೇ ಹೆಚ್ಚುವರಿ ಸಿಜೆ ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ನಂಜನಗೂಡು	39/2023 171ಇ ಮತ್ತು 171 ಬಿ, ಐಪಿಸಿ	ತನಿಖಾ ಹಂತದಲ್ಲಿದೆ	ದೇಣಿಗೆ ಪಡೆದಿರುತ್ತಾರೆ ಎಂದು ಆರೋಪಿಸಿ ಪ್ರಕರಣ ದಾಖಲಿಸಿದ್ದು ತನಿಖೆ ಹಂತದಲ್ಲಿದೆ

(ಬಿ) ಕ್ರಿಮಿನಲ್ ಅಪರಾಧಿಗಳಿಗಾಗಿ ನ್ಯಾಯನಿರ್ಣಿತವಾದ ಪ್ರಕರಣಗಳ ಕುರಿತಾದ ವಿವರಗಳು

ಕ್ರ.ಸಂ.	ನ್ಯಾಯಾಲಯದ ಹೆಸರು ಮತ್ತು ಆದೇಶ(ಗಳು) ದಿನಾಂಕ (ಗಳು)	ಅಪರಾಧ (ಗಳ) ವಿವರಣೆ ಮತ್ತು ವಿಧಿಸಲಾದ ದಂಡನೆ	ವಿಧಿಸಲಾದ ಗರಿಷ್ಠ ದಂಡನೆ
1	ಅನ್ವಯಿಸುವುದಿಲ್ಲ		

ಸಹಿ/– ದರ್ಶನ್ ಧೃವನಾರಾಯಣ್, ಕಾಂಗ್ರೆಸ್ ಅಭ್ಯರ್ಥಿ ನಂಜನಗೂಡು ವಿಧಾನಸಭಾ ಕ್ಷೇತ್ರ